ಗುರುವಾರ, ಜನವರಿ 9, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 9 | ಪುಟ 14
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಇಸ್ರೊದ ಹೊಸದೊಂದು ಮೈಲಿಗಲ್ಲು 'SpaDeX' ಕುರಿತ ಮಾಹಿತಿ



ಆಳ-ಅಗಲ
ವಿಶ್ವವಿದ್ಯಾಲಯ ನೇಮಕಾತಿ ರಾಜ್ಯಗಳ ಅಧಿಕಾರ ಮೊಟಕು?

ಎಂಎಸ್ಐಎಲ್‌ನಿಂದ ಪ್ರವಾಸ ಪ್ಯಾಕೇಜ್ 7

ಔಷಧ ಕಾನೂನುಬಾಹಿರ ಮಾರಾಟ 6

ಸೆನ್ಸೆಕ್ಸ್	ನಿಫ್ಟಿ	₹/$
78,148	23,688	85.91

ಸರ್ಕಾರದ ವಿಚಾರದಲ್ಲಿ ಸಿಎಂ, ಪಕ್ಷದ ವಿಚಾರದಲ್ಲಿ ನಾನೇ ಅಂತಿಮ: ಶಿವಕುಮಾರ್ ಸಂದೇಶ

ಸಿಡಿದ ಸಚಿವರು: ಗುಡುಗಿದ ಡಿಕೆಶಿ

ಆಡಳಿತಾರೂಢ ಕಾಂಗ್ರೆಸ್ ಪಕ್ಷದೊಳಗಿನ ಔತಣಕೂಟ ರಾಜಕಾರಣ ತೀವ್ರಗೊಂಡಿದೆ. ಹೈಕಮಾಂಡ್ ಮಧ್ಯಪ್ರವೇಶದ ನಂತರವೂ ಅಸಮಾಧಾನದ ಬಿರುಸು ಕಡಿಮೆಯಾಗಿಲ್ಲ. ರಾಜ್ಯದ ಕೆಲವು ಸಚಿವರು ಪರಸ್ಪರರ ವಿರುದ್ಧ ಬುಧವಾರವೂ ಮಾತನಾಡಿದ್ದಾರೆ. ಈ ಮಧ್ಯೆ, ಬಣ ಜಗಳದಿಂದ ಜರ್ಜರಿತವಾಗಿದ್ದ ಬಿಜೆಪಿಯ ಕೆಲವು ನಾಯಕರೂ ಔತಣಕೂಟ ರಾಜಕಾರಣ ನಡೆಸಿರುವುದು ಕುತೂಹಲ ಮೂಡಿಸಿದೆ

ನಿಯಂತ್ರಣಕ್ಕೆ ಬಾರದ ಆಂತರಿಕ ಸಂಘರ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ 'ಔತಣಕೂಟ' ರಾಜಕೀಯಕ್ಕೆ ಪಕ್ಷದ ವರಿಷ್ಠರು ತಡೆ ಒಡ್ಡಿದರೂ ಆಂತರಿಕ ಸಂಘರ್ಷ ಇನ್ನೂ ನಿಯಂತ್ರಣಕ್ಕೆ ಬಂದಿಲ್ಲ.

ತಮ್ಮ ಸಮುದಾಯದ ಸಚಿವರು, ಶಾಸಕರನ್ನು ಬುಧವಾರ ರಾತ್ರಿ ಒಂದೆಡೆ ಸೇರಿಸಲು ಮುಂದಾಗಿದ್ದ ಗೃಹ ಸಚಿವ ಜಿ. ಪರಮೇಶ್ವರ ಅವರ ನಡೆಯ ವಿರುದ್ಧ ಹೈಕಮಾಂಡ್‌ಗೆ ದೂರು ನೀಡಿ ಸಭೆ ರದ್ದುಪಡಿಸುವಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಯಶಸ್ವಿ ಆಗಿದ್ದರು. ಇದು ಸಚಿವರಾದ ಜಿ. ಪರಮೇಶ್ವರ, ಕೆ.ಎನ್. ರಾಜಣ್ಣ ಮತ್ತು ಸತೀಶ ಜಾರಕಿಹೊಳಿ ಅವರನ್ನು ಕೆರಳಿಸಿದೆ.

ಪಕ್ಷದೊಳಗಿನ ಈ ಅಸಮಾಧಾನ, ಗುಂಪುಗಾರಿಕೆ ಉಲ್ಬಣಗೊಳ್ಳುತ್ತಿದ್ದಂತೆಯೇ ಪರಮೇಶ್ವರ ಮತ್ತು ಸತೀಶ ಜಾರಕಿಹೊಳಿ ಅವರನ್ನು ತಮ್ಮ ಅಕ್ಕಪಕ್ಕ ಕುಳ್ಳಿರಿಸಿಕೊಂಡು ಬೆಳಗಾವಿಯಲ್ಲಿ ಇದೇ 21ರಂದು ನಡೆಯಲಿರುವ ಸಮಾವೇಶದ ಮಾಹಿತಿ ನೀಡಿದ ಡಿ.ಕೆ. ಶಿವಕುಮಾರ್, 'ಔತಣಕೂಟ ರಾಜಕೀಯ ಎನ್ನುವುದೆಲ್ಲ ಊಹಾಪೋಹ, ಮಾಧ್ಯಮಗಳ ಸೃಷ್ಟಿ' ಎಂದು ಸಾರಿದರು. ಅಷ್ಟೇ ಅಲ್ಲ, 'ಪಕ್ಷದ ವಿಚಾರದಲ್ಲಿ ನನ್ನ ಮಾತೇ ಅಂತಿಮ. ಸರ್ಕಾರದ ವಿಚಾರದಲ್ಲಿ ಸಿ.ಎಂ ಮಾತನಾಡುತ್ತಾರೆ. ಬೇರೆ ಹೇಳಿಕೆಗಳಿಗೆ ಬೆಲೆ ಇರುವುದಿಲ್ಲ' ಎಂದರು. ಈ ವೇಳೆ ಪರಮೇಶ್ವರ ಮತ್ತು ಸತೀಶ ಜಾರಕಿಹೊಳಿ ಮುಗುಮ್ಮಾಗಿದ್ದರು.

'ಅಧಿಕಾರ ಹಂಚಿಕೆ' ಒಪ್ಪಂದದ ಕುರಿತಂತೆ ಇತ್ತೀಚೆಗೆ ಖಾಸಗಿ ವಾಹಿನಿಯೊಂದರಲ್ಲಿ ಡಿ.ಕೆ. ಶಿವಕುಮಾರ್ ನೀಡಿದ್ದ ಹೇಳಿಕೆ ಚರ್ಚೆಯಾಗುತ್ತಿದ್ದಂತೆ, 'ಯಾವುದೇ ಒಪ್ಪಂದ ಆಗಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ನೀಡಿದ್ದರು.

6ನೇ ಪುಟ ನೋಡಿ

ಬಿಜೆಪಿಯಲ್ಲೂ ಔತಣ ರಾಜಕೀಯ ಶುರು?

ಕಾಂಗ್ರೆಸ್‌ನಲ್ಲಿ ಔತಣ ರಾಜಕೀಯ ಜೋರು ಸದ್ದು ಮಾಡುತ್ತಿರುವ ಬೆನ್ನಲ್ಲೇ ಬಿಜೆಪಿಯಲ್ಲೂ ಔತಣ ರಾಜಕೀಯ ಶುರುವಾಗಿದೆ.

ಸಂಸದ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಬಿಜೆಪಿಯ ಕೆಲ ನಾಯಕರು ಹೋಟೆಲ್‌ವೊಂದರಲ್ಲಿ ಮಂಗಳವಾರ ರಾತ್ರಿ ಸಭೆ ನಡೆಸಿ, ಪಕ್ಷದಲ್ಲಿ ಪ್ರಸ್ತುತ ನಡೆಯುತ್ತಿರುವ ವಿದ್ಯಮಾನಗಳ ಕುರಿತು ಚರ್ಚೆ ನಡೆಸಿದರು.

ವಿಶೇಷವೆಂದರೆ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅಥವಾ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣದಲ್ಲಿ ಗುರುತಿಸಿಕೊಂಡ ಯಾರೊಬ್ಬರೂ ಅಲ್ಲಿ ಹಾಜರಿರಲಿಲ್ಲ. ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ, ಶಾಸಕ ಸುನಿಲ್‌ಕುಮಾರ್ ಸೇರಿದಂತೆ ಮಾಜಿ ಸಚಿವರು, ಶಾಸಕರು, ಬೊಮ್ಮಾಯಿ ಆಪ್ತರು ಔತಣಕೂಟದಲ್ಲಿ ಭಾಗಿಯಾಗಿದ್ದರು.

ವಿಜಯೇಂದ್ರ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾದ ನಂತರ ವರಿಷ್ಠರು ನಿರೀಕ್ಷಿಸಿದಂತೆ ಪಕ್ಷದ ಪುನಶ್ಚೇತನ ಸಾಧ್ಯವಾಗಿಲ್ಲ. ವಿಧಾನಸಭಾ ಚುನಾವಣೆಯ ನಂತರ ಪಕ್ಷಕ್ಕೆ ಚೈತನ್ಯ ತುಂಬುವ ಕೆಲಸವಾಗುತ್ತಿಲ್ಲ. ವಿರೋಧ ಪಕ್ಷವಾಗಿ ಬಿಜೆಪಿ ಹಲವು ಹೋರಾಟಗಳನ್ನು ಮಾಡುತ್ತಿದ್ದರೂ ನಿರೀಕ್ಷಿತ ಯಶಸ್ಸು ಸಿಗುತ್ತಿಲ್ಲ. ಅಲ್ಲದೇ, ಇಡೀ ಪಕ್ಷವನ್ನು ಒಂದೇ ತೆಕ್ಕೆಯಲ್ಲಿ ತೆಗೆದುಕೊಂಡು ಹೋಗದ ಕಾರಣ ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗುತ್ತಿದೆ ಎಂಬ ವಿಷಯಗಳು ಚರ್ಚೆಯಾಗಿವೆ.


ಬಿಜೆಪಿ ರಾಜ್ಯ ಘಟಕವನ್ನು ಸಂಪೂರ್ಣ ಪುನರ್‌ರಚಿಸಬೇಕು. ಎರಡೂ ಬಣಗಳನ್ನು ನಿಯಂತ್ರಿಸಬೇಕು. ಪಕ್ಷದ ಸಂಘಟನೆಗೆ ಚೈತನ್ಯ ತುಂಬಬೇಕು ಎನ್ನುವ ಕುರಿತು ದೆಹಲಿ ವರಿಷ್ಠರಿಗೆ ಮನವರಿಕೆ ಮಾಡಿಕೊಡಲು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಮೂಲಗಳು ಹೇಳಿವೆ.

6ನೇ ಪುಟ ನೋಡಿ

ನಮ್ಮ ಸಮುದಾಯದ (ಎಸ್‌ಸಿ, ಎಸ್‌ಟಿ) ಸಮಾವೇಶ, ಸಭೆ ಮಾಡಿದರೆ ಸಹಿಸುವುದಿಲ್ಲ ಎಂದು ಯಾರಾದರೂ ಹೇಳಿದರೆ ಅದಕ್ಕೆ ತಕ್ಕ ಉತ್ತರ ಕೊಡುತ್ತೇವೆ. ಆ ಶಕ್ತಿ ನಮಗಿದೆ
ಜಿ. ಪರಮೇಶ್ವರ, ಗೃಹ ಸಚಿವ



ಮುಖ್ಯಮಂತ್ರಿ ಮತ್ತು ಸಚಿವರ ಔತಣ ಸಭೆಯಿಂದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೇಜಾರಾಗಲು, ಯಾರಾದರೂ ಅವರ ಆಸ್ತಿ ಬರೆಸಿಕೊಂಡಿದ್ದಾರೆಯೇ
ಕೆ.ಎನ್. ರಾಜಣ್ಣ, ಸಹಕಾರ ಸಚಿವ



ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶಾಸಕರು, ಸಚಿವರ ಸಭೆಯ ಬಗ್ಗೆ ಅನಗತ್ಯ ಆತಂಕಗಳೇಕೆ?
ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ



ನಾವೆಲ್ಲರೂ ಊಟಕ್ಕೆ ಸೇರಿದ್ದು ನಿಜ. ಆದರೆ, ಅದು ಪೂರ್ವ ನಿರ್ಧಾರಿತವಲ್ಲ
ವಿ.ಸುನಿಲ್‌ಕುಮಾರ್, ಬಿಜೆಪಿ ಶಾಸಕ



ಆರು ಮಂದಿ ನಕ್ಸಲರು ಶರಣಾಗತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಗತರಾಗಿದ್ದ ಆರು ನಕ್ಸಲರು ಶಸ್ತ್ರಾಸ್ತ್ರ ತೊರೆದು ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಜಿ. ಪರಮೇಶ್ವರ ಎದುರು ಬೆಂಗಳೂರಿನಲ್ಲಿ ಬುಧವಾರ ಶರಣಾದರು.

ಬಿಗಿ ಭದ್ರತೆಯ ನಡುವೆ ಮುಂಡಗಾರು ಲತಾ, ಸುಂದರಿ ಕುತ್ಲೂರು, ವನಜಾಕ್ಷಿ ಬಾಳೆಹೊಳೆ, ಮಾರೆಪ್ಪ ಅರೋಲಿ, ಕೆ.ವಸಂತ, ಟಿ.ಎನ್. ಜಿಷಾ ಅವರನ್ನು ಚಿಕ್ಕಮಗಳೂರಿನಿಂದ ಜೀರೊ ಟ್ರಾಫಿಕ್‌ನಲ್ಲಿ ಬೆಂಗಳೂರಿಗೆ ಕರೆ ತರಲಾಯಿತು. ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ಸಂಜೆ ಶರಣಾಗತಿ ಪ್ರಕ್ರಿಯೆಗಳು ನಡೆದವು.

ನಕ್ಸಲ್ ಚಳವಳಿ ತೊರೆದ ಎಲ್ಲರಿಗೂ ಸಂವಿಧಾನದ ಪ್ರತಿ ನೀಡಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಶಸ್ತ್ರ ಹೋರಾಟ ತೊರೆದ ಎಲ್ಲ ನಕ್ಸಲರ ಮೇಲಿನ ಪ್ರಕರಣಗಳ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸಲಾಗುವುದು. ಪ್ರಕರಣಗಳ ತ್ವರಿತ ಇತ್ಯರ್ಥದ ನಂತರ ಅವರು ಸಮಾಜದ ಮುಖ್ಯವಾಹಿನಿ ಸೇರಲಿದ್ದಾರೆ ಎಂದು ಹೇಳಿದರು.

6ನೇ ಪುಟ ನೋಡಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲಿ ಆರು ನಕ್ಸಲರು ಶರಣಾದರು
ಪ್ರಜಾವಾಣಿ ಚಿತ್ರ

ನಕ್ಸಲ್ ನಿಗ್ರಹ ಪಡೆ ವಿಸರ್ಜನೆ?

ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ಸಕ್ರಿಯರಾಗಿದ್ದ ಬಹುತೇಕ ಎಲ್ಲ ನಕ್ಸಲರೂ ಶರಣಾಗತರಾಗಿದ್ದು, ನಕ್ಸಲ್ ಹೋರಾಟ ನಿಯಂತ್ರಿಸಲು ಸ್ಥಾಪಿಸಲಾಗಿದ್ದ ನಕ್ಸಲ್ ನಿಗ್ರಹ ಪಡೆಯನ್ನು (ಎಎನ್‌ಎಫ್) ವಿಸರ್ಜಿಸುವ ಕುರಿತು ಸಂಪುಟದಲ್ಲಿ ಚರ್ಚಿಸಿದ ನಂತರ ನಿರ್ಧಾರ ಪ್ರಕಟಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

6ನೇ ಪುಟ ನೋಡಿ

₹21 ಕೋಟಿ ಅಕ್ರಮ ಆಸ್ತಿ ಪತ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಏಳು ಅಧಿಕಾರಿಗಳು ಮತ್ತು ಒಬ್ಬ ನಿವೃತ್ತ ಅಧಿಕಾರಿಗೆ ಸಂಬಂಧಿಸಿದ ಮನೆ ಹಾಗೂ ಇತರ ಸ್ವತ್ತುಗಳ ಮೇಲೆ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು ಒಟ್ಟು ₹21.05 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಮಾಡಿದ್ದಾರೆ.

6



ಗಾಯಗೊಂಡ ಮಹಿಳೆಗೆ ವೈದ್ಯರು ಪ್ರಥಮ ಚಿಕಿತ್ಸೆ ನೀಡಿದರು –ಪಿಟಿಐ ಚಿತ್ರ

ತಿರುಪತಿಯಲ್ಲಿ ಕಾಲ್ತುಳಿತ, 6 ಸಾವು

ತಿರುಪತಿ (ಪಿಟಿಐ): ತಿರುಪತಿಯ ಪ್ರಸಿದ್ಧ ವೆಂಕಟೇಶ್ವರಸ್ವಾಮಿ ದೇಗುಲದಲ್ಲಿ ಬುಧವಾರ ರಾತ್ರಿ 'ವೈಕುಂಠ ದ್ವಾರ ದರ್ಶನ'ದ ಟೋಕನ್ ಪಡೆದುಕೊಳ್ಳುವಾಗ ಉಂಟಾದ ಕಾಲ್ತುಳಿತದಲ್ಲಿ ಆರು ಮಂದಿ ಭಕ್ತರು ಮೃತಪಟ್ಟಿದ್ದಾರೆ.

ಮೃತರಲ್ಲಿ ಮೂವರು ಮಹಿಳೆಯರು. ಕನಿಷ್ಠ 12 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ನೂರಾರು ಭಕ್ತರು ಸೇರಿದ್ದು, ಟೋಕನ್ ಪಡೆಯಲು ಒಟ್ಟಿಗೆ ಮುಗಿಬಿದ್ದುದು ಅವಘಡಕ್ಕೆ ಕಾರಣವಾಗಿದೆ.

ವೈಕುಂಠ ದ್ವಾರ ದರ್ಶನವು ಜನವರಿ 10ರಿಂದ 10 ದಿನಗಳವರೆಗೆ ಇರಲಿದೆ. ಇದಕ್ಕಾಗಿ ದೇಶದ ವಿವಿಧೆಡೆಗಳಿಂದ ನೂರಾರು ಮಂದಿ ಭಕ್ತರು ದೇವಸ್ಥಾನಕ್ಕೆ ಬಂದಿದ್ದರು.

3B ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಗುರುವಾರದ ಉಷ್ಣಾಂಶ 29° ಗರಿಷ್ಠ 15° ಕನಿಷ್ಠ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮುಂಜಾನೆ ಮಂಜು ಮುಸುಕಿದ ವಾತಾವರಣ ಇರಲಿದೆ

ತಾಪಮಾನ: ಶುಕ್ರವಾರ 28° 15° | ಶನಿವಾರ 28° 15° | ಭಾನುವಾರ 28° 15°

ವ್ಯವಸ್ಥಾಪಕ ನಿರ್ದೇಶಕಿಯಾಗಿ ಕನಗವಲ್ಲಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ (ಕೆಎಸ್‌ಎಂಎಸ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕರಾಗಿ ಎಂ. ಕನಗವಲ್ಲಿ ಅವರನ್ನು ವರ್ಗಾವಣೆ ಮಾಡಲಾಗಿದೆ. ಅವರಿಗೆ ಸಾರ್ವಜನಿಕ ಗ್ರಂಥಾಲಯಗಳ ಇಲಾಖೆಯ ಆಯುಕ್ತ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಉದ್ಯೋಗ ಮತ್ತು ತರಬೇತಿ ಇಲಾಖೆ ಆಯುಕ್ತೆ ಆರ್. ರಾಗಪ್ರಿಯ ಅವರಿಗೆ ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಕೆಎಎಸ್ ಅಧಿಕಾರಿ ಎಸ್.ಎಂ. ಶ್ರೀನಿವಾಸ್ ಅವರನ್ನು ಪಶುಸಂಗೋಪನೆ ಮತ್ತು ಪಶುಪಾಲನಾ ಸೇವೆ ಇಲಾಖೆಯ ಜಂಟಿ ನಿರ್ದೇಶಕ (ಆಡಳಿತ) ಹುದ್ದೆಗೆ ನಿಯೋಜಿಸಲಾಗಿದೆ.

ನೂತನ ಕಟ್ಟಡ: ಆಧುನಿಕ ಸೌಲಭ್ಯ

ಪ್ರಜಾವಾಣಿ ವಾರ್ತೆ



ಉದ್ಘಾಟನೆಗೊಂಡ ಹೈಗ್ರೌಂಡ್ಸ್ ಠಾಣೆ – ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದಿಂದ ನಗರದ ಮೂರು ಪೊಲೀಸ್ ಠಾಣೆಗಳಿಗೆ ಹೊಸ ಕಟ್ಟಡ ನಿರ್ಮಿಸಲಾಗಿದ್ದು, ಈ ಕಟ್ಟಡಗಳು ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿವೆ.

ಚಾಮರಾಜಪೇಟೆ ಪೊಲೀಸ್ ಠಾಣೆ (ಕಾನೂನು ಸುವ್ಯವಸ್ಥೆ, ಸಂಚಾರ), ಕೇಂದ್ರ ವಿಭಾಗದ ಡಿಸಿಪಿ ಕಚೇರಿ ಹಾಗೂ ಕಬ್ಬನ್ ಪಾರ್ಕ್ ಸಂಚಾರ ಪೊಲೀಸ್ ಠಾಣೆ, ಶೇಷಾದ್ರಿಪುರ ಸಹಾಯಕ ಪೊಲೀಸ್ ಕಮಿಷನರ್ ಕಚೇರಿ ಹಾಗೂ ಹೈಗ್ರೌಂಡ್ಸ್ ಠಾಣೆಯ (ಕಾನೂನು ಸುವ್ಯವಸ್ಥೆ ಹಾಗೂ ಸಂಚಾರ) ಕಟ್ಟಡಗಳನ್ನು ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಜಿ. ಪರಮೇಶ್ವರ ಉದ್ಘಾಟಿಸಿದರು.

ಹೊಸ ಕಟ್ಟಡಗಳಲ್ಲಿ ಪ್ರತ್ಯೇಕ ವಿಚಾರಣಾ ಕೊಠಡಿ, ತಂತ್ರಜ್ಞಾನ ಬಳಕೆಗೆ ಬೇಕಾದ ಸೌಲಭ್ಯಗಳಿವೆ. ಆರೋಪಿಗಳನ್ನು ಇರಿಸಲು ಉತ್ತಮವಾದ ಸೆಲ್‌ಗಳನ್ನು ನಿರ್ಮಿಸಲಾಗಿದೆ. ಪುಲಕೇಶಿನಗರದ ಲಾಜರ್ ರಸ್ತೆಯಲ್ಲಿರುವ ಪೊಲೀಸ್ ವಸತಿ ಸಮುಚ್ಚಯವನ್ನು ಖಾಸಗಿ ಅಪಾರ್ಟ್‌ಮೆಂಟ್‌ಗಳ ಮಾದರಿಯಲ್ಲಿ ನಿರ್ಮಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದರು.

128 ಫ್ಲ್ಯಾಟ್‌ಗಳಿವೆ. ಪ್ರತಿ ಫ್ಲ್ಯಾಟ್‌ನಲ್ಲಿ ತಲಾ 2 ಮಲಗುವ ಕೋಣೆ, ವಿಶಾಲ ಹಾಲ್ ಸೇರಿ ಹಲವು ಸೌಲಭ್ಯ ಇವೆ ಎಂದು ಗುತ್ತಿಗೆದಾರರು ತಿಳಿಸಿದರು.

ಬಿಬಿಎಂಪಿ: ಏಕ ನಿವೇಶನಕ್ಕೂ ಅನುಮತಿ ಕಡ್ಡಾಯ • ತಕ್ಷಣದಿಂದಲೇ ಜಾರಿ

ಸಮ್ಮತಿ ಸಿಗದ ಸ್ವತ್ತಿಗೆ ಖಾತಾ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಸಕ್ಷಮ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆಯದ ಸ್ವತ್ತುಗಳಿಗೆ ಯಾವುದೇ ರೀತಿಯ ಖಾತಾ ನೀಡದಂತೆ ಸುತ್ತೋಲೆ ಹೊರಡಿಸಲಾಗಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ಕೆಟಿಸಿಪಿ) ಕಾಯ್ದೆ 1961ರ ಪ್ರಕರಣ 17ಕ್ಕೆ ತಿದ್ದುಪಡಿಯಾಗಿದ್ದು, ಅದರಂತೆ ಏಕ ನಿವೇಶನವೂ ಸೇರಿದಂತೆ ಎಲ್ಲ ಸ್ವತ್ತುಗಳಿಗೂ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಇಂತಹ ಅನುಮೋದನೆ ಪಡೆಯದ ಸ್ವತ್ತುಗಳಿಗೆ ಬಿಬಿಎಂಪಿ, ಯಾವುದೇ ಎ-ಖಾತಾ ದಾಖಲಿಸಲು, ನೋಂದಾಯಿಸಲು ಅವಕಾಶವಿರುವುದಿಲ್ಲ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸುತ್ತೋಲೆ ಹೊರಡಿಸಿದ್ದಾರೆ.

ಕರ್ನಾಟಕ ಭೂ ಕಂದಾಯ ಕಾಯ್ದೆ 1964 (ಕೆಎಲ್‌ಆರ್) ಪ್ರಕರಣ 95ರಡಿ ವ್ಯವಸಾಯದ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆಯಾದ 'ಏಕ ನಿವೇಶನ'ಕ್ಕೆ ಅನುಮೋದನೆ ನೀಡಿ, ಖಾತಾ ನೀಡಲಾಗುತ್ತಿತ್ತು. ಇದೀಗ ಕೆಟಿಸಿಪಿ ಕಾಯ್ದೆಗೆ ತಿದ್ದುಪಡಿ ಮಾಡಿರುವುದರಿಂದ, ಬಿಡಿಎ ಅಥವಾ ಯೋಜನಾ ಪ್ರಾಧಿಕಾರದಿಂದ ಅನುಮೋದನೆಯಾಗದ ಸ್ವತ್ತುಗಳಿಗೆ ಬಿಬಿಎಂಪಿ ಖಾತೆ ನೀಡುವುದಿಲ್ಲ. ಅಲ್ಲದೆ, ಈಗಾಗಲೇ ಖಾತಾ ಪಡೆದಿದ್ದರೂ ಖಾತಾ ವಿಭಜನೆ ಅಥವಾ ಉಪ ವಿಭಾಗಗಳನ್ನು ಮಾಡಲು ಅವಕಾಶ ಇರುವುದಿಲ್ಲ ಎಂದು ತಿಳಿಸಿದ್ದಾರೆ.

ಬಿಬಿಎಂಪಿ ಕಚೇರಿಗಳಲ್ಲಿ ಖಾತಾ ನೀಡಲು ಬಾಕಿ ಉಳಿಸಿಕೊಂಡಿರುವ ಅರ್ಜಿಗಳನ್ನು ವಿಲೇವಾರಿ ಮಾಡುವಂತಿಲ್ಲ. ಎಲ್ಲ ಅರ್ಜಿಗಳು ತಕ್ಷಣದಿಂದಲೇ ರದ್ದಾಗುತ್ತವೆ. ಉಲ್ಲಂಘನೆ ಮಾಡಿದ ಅಧಿಕಾರಿಗಳು, ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತುಷಾರ್ ಗಿರಿನಾಥ್ ಅವರು ಜನವರಿ 7ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ಹೇಳಿದ್ದಾರೆ.

ಸುತ್ತೋಲೆಯ ಪ್ರಮುಖ ಅಂಶಗಳು

- ಸಕ್ಷಮ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಆಗದಿರುವ, ಎ ಅಥವಾ ಬಿ ಖಾತಾವನ್ನು ಹೊಂದಿರುವ ನಿವೇಶನಗಳಿಗೆ ವಿಭಜನೆ ಅಥವಾ ಉಪ ವಿಭಾಗವನ್ನು ಬಿಬಿಎಂಪಿ ಮಾಡುವುದಿಲ್ಲ.
- ಸಕ್ಷಮ ಯೋಜನಾ ಪ್ರಾಧಿಕಾರದ ಅನುಮೋದನೆಯೊಂದಿಗೆ ಸ್ವಾಧೀನಾನುಭವ ಪತ್ರ (ಒ.ಸಿ) ಪಡೆಯಲಾದ ಏಕ- ಘಟಕ ಅಥವಾ ಬಹು-ಘಟಕಗಳ ಕಟ್ಟಡದಲ್ಲಿನ ಪ್ರತಿ ಘಟಕವನ್ನು ಎ ವಹಿಯಲ್ಲಿ ದಾಖಲಿಸಿಕೊಂಡು ಎ-ಖಾತಾ ನೀಡಲಾಗುತ್ತದೆ.
- ಸಕ್ಷಮ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆಯದೆ, ಎ ಅಥವಾ ಬಿ ಖಾತಾ ಹೊಂದಿರುವ ಸ್ವತ್ತುಗಳಲ್ಲಿ ನಿರ್ಮಿಸಿರುವ ಏಕ ಅಥವಾ ಬಹು- ಘಟಕಗಳು, 2024ರ ಸೆಪ್ಟೆಂಬರ್ 30ರೊಳಗೆ ಬೆಸ್ಕಾಂ ಅಥವಾ ಜಲಮಂಡಳಿಯಿಂದ ಸಂಪರ್ಕ ಪಡೆದಿದ್ದರೆ ಅವುಗಳಿಗೆ ಬಿ ಖಾತಾ ನೀಡಲಾಗುತ್ತದೆ.
- ಕೃಷಿ ಜಮೀನನ್ನು ಕೃಷಿಯಿಂದ ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸಲಾಗಿದ್ದರೆ ಆ ಖಾಲಿ ಜಮೀನಿಗೆ ಬಿಬಿಎಂಪಿ 'ಎ' ಅಥವಾ 'ಬಿ' ವಹಿ/ ಖಾತಾವನ್ನು ಹೊಸದಾಗಿ ದಾಖಲಿಸುವುದಿಲ್ಲ.

'7 ಲಕ್ಷ ಆಸ್ತಿ ಮಾಲೀಕರು ತೆರಿಗೆ ಪಾವತಿಸಿಲ್ಲ'

'ಬಿಬಿಎಂಪಿ ವ್ಯಾಪ್ತಿಯಲ್ಲಿ ಸುಮಾರು ಏಳು ಲಕ್ಷ ಆಸ್ತಿಗಳಿಂದ ತೆರಿಗೆ ಪಾವತಿಯಾಗುತ್ತಿಲ್ಲ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

'ಬೆಸ್ಕಾಂ, ಜಲಮಂಡಳಿ ಸಂಪರ್ಕದ ಮಾಹಿತಿಯು ನಮ್ಮ ತೆರಿಗೆ ಪಾವತಿ ದತ್ತಾಂಶಗಳ ಜೊತೆಯಲ್ಲಿ ತಾಳೆಯಾಗುತ್ತಿಲ್ಲ. ಅಲ್ಲದೆ, ಖಾತಾ ಹೊಂದಿರುವ ಎರಡು ಲಕ್ಷ ಆಸ್ತಿಗಳ ಮಾಲೀಕರು ತೆರಿಗೆ ಪಾವತಿಸುತ್ತಿಲ್ಲ. ಇವೆಲ್ಲವನ್ನೂ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಹೆಚ್ಚು ಆಸ್ತಿ ತೆರಿಗೆ ಪಾವತಿ ಮಾಡದ ವಾಣಿಜ್ಯ ಕಟ್ಟಡಗಳಿಗೆ ಮಾತ್ರ ಬೀಗಮುದ್ರೆ ಹಾಕಲಾಗುತ್ತಿದೆ. ಅವರಿಗೆ ಸಮಯ ನೀಡಿ, ಕಾನೂನು ಪ್ರಕಾರವೇ ಹರಾಜಿಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

GRT ಜ್ಯುವೆಲರ್ಸ್: 'ಸ್ವರ್ಣ ಸಂಕ್ರಾಂತಿ' ಅಭಿಯಾನ





ಬೆಂಗಳೂರು: ಜ್ಯುವೆಲರಿ ಕ್ಷೇತ್ರದಲ್ಲಿ ಗುಣಮಟ್ಟ, ಶುದ್ಧತೆ ಮತ್ತು ವಿಶ್ವಾಸಾರ್ಹತೆಗೆ ಹೆಸರು ಮಾಡಿರುವ ಜಿಆರ್‌ಟಿ ಜ್ಯುವೆಲರ್ಸ್ ಸುಗ್ಗಿಯ ಕಾಲದ ಹಬ್ಬ 'ಸಂಕ್ರಾಂತಿ' ಸವಿ ನೆನಪಿಗಾಗಿ ವಿಶೇಷ ಅಭಿಯಾನ ಹಮ್ಮಿಕೊಂಡಿದೆ.

ತಮಿಳುನಾಡಿನಲ್ಲಿ 'ಪೊಂಗಲ್ ಪೊಂಗಲ್', ಆಂಧ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕದಲ್ಲಿ 'ಸ್ವರ್ಣ ಸಂಕ್ರಾಂತಿ' ಹೆಸರಿನಲ್ಲಿ ಅಭಿಯಾನ ಆಚರಿಸುವ ಮೂಲಕ ಜಿಆರ್‌ಟಿ ಈ ಹಬ್ಬಕ್ಕೆ ಗೌರವ ಸೂಚಿಸುತ್ತಿದೆ. ಈ ವಿಶೇಷ ಸಂದರ್ಭದಲ್ಲಿ ಗ್ರಾಹಕರು ಖರೀದಿಸುವ ಚಿನ್ನಾಭರಣಗಳ ವೆಸ್ಟೇಜ್ ಮೇಲೆ 20% ರಿಯಾಯಿತಿ (ವಿಎ), ಡೈಮಂಡ್ ಮತ್ತು ಅನ್‌ಕಟ್ ಡೈಮಂಡ್ (ಸಾಲಿಟೇರ್ ಹೊರತುಪಡಿಸಿದ) ವೌಲ್ಯದ ಮೇಲೆ ಶೇ 25 ವರೆಗೆ ರಿಯಾಯಿತಿ, ಬೆಳ್ಳಿ ಸಾಮಗ್ರಿಗಳ ವೆಸ್ಟೇಜ್ ಮೇಲೆ 25 % ರಿಯಾಯಿತಿ (ವಿಎ) ಹಾಗೂ ಬೆಳ್ಳಿ ಆಭರಣಗಳ ಎಂಆರ್‌ಪಿ ಮೇಲೆ ಶೇ 10 ರಿಯಾಯಿತಿ ಸೇರಿದಂತೆ ಹಲವು ವಿಶಿಷ್ಟ ಕೊಡುಗೆಗಳನ್ನು ನೀಡುತ್ತಿದೆ.

ಸ್ವರ್ಣ ಸಂಕ್ರಾಂತಿ ಹಬ್ಬದ ಕೊಡುಗೆಗಳ ಬಗ್ಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಆನಂದ್ ಅನಂದ-ಪದ್ಮನಾಭನ್ ಅವರು ಮಾತನಾಡಿ, ನಮ್ಮ ಪರಂಪರೆಯು ಕೃಷಿಯಲ್ಲಿ ಬೇರೂರಿದೆ ಹಾಗೂ ಅದಕ್ಕನುಗುಣವಾಗಿ ಹಬ್ಬದ ದಿನಗಳಲ್ಲಿ ಹೊಸ ಆಭರಣ ಖರೀದಿಸುವುದು ಸಂಪ್ರದಾಯವಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಈ ಋತುವನ್ನು 'ಆಭರಣಗಳ ಸುಗ್ಗಿ'ಯಾಗಿ ಆಚರಿಸಲು ರೂಪಿಸಿದ್ದೇವೆ ಎಂದು ನುಡಿದರು.

ಮತ್ತೊಬ್ಬ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ರಾಧಾಕೃಷ್ಣನ್ ಅವರು 'ನೂತನ ಅಭಿಯಾನದ ಕೊಡುಗೆಗಳನ್ನು ನಾವು ಅನಾವರಣಗೊಳಿಸುತ್ತಿರುವ ಜತೆಗೆ ಜಿಆರ್‌ಟಿಯು ಕಾಲಾತೀತ ಸೌಂದರ್ಯ ಮತ್ತು ಕರಕುಶಲತೆ ಪ್ರತಿಬಿಂಬಿಸುವ ವಿನ್ಯಾಸಗಳ ವ್ಯಾಪಕ ಸಂಗ್ರಹ ಹೊಂದಿದೆ. ಆಧುನಿಕ ಕಲಾತ್ಮಕತೆ ಹಾಗೂ ಸಂಪ್ರದಾಯಕ್ಕೆ ಹೆಸರಾಗಿ ಎನಿಸಿರುವ ಜಿಆರ್‌ಟಿ ತನ್ನ ಸಾಟಿಯಿಲ್ಲದ ಗುಣಮಟ್ಟ ಮತ್ತು ವೈವಿಧ್ಯತೆಗೆ ಮೆಚ್ಚಿನ ಆಭರಣ ಮಳಿಗೆ ಎನಿಸಿದೆ. ಅಲ್ಲದೆ, ಸಂಸ್ಥೆಯ ಪರವಾಗಿ ಗ್ರಾಹಕರಿಗೆ ಹೊಸ ವರ್ಷದ ಅದ್ಭುತ ಆರಂಭ ಹಾಗೂ ಹಾರ್ದಿಕ ಶುಭಾಶಯ ಕೋರುತ್ತಿದ್ದೇವೆ' ಎಂದರು.

ಎಎಬಿ ಚುನಾವಣೆ: ಮಹಿಳಾ ಮೀಸಲು– ಅರ್ಜಿ ವಜಾ

ಬೆಂಗಳೂರು: 'ಬೆಂಗಳೂರು ವಕೀಲರ ಸಂಘದ (ಎಎಬಿ) ಪದಾಧಿಕಾರಿಗಳ ಚುನಾವಣೆಯಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಶೇ 33ರಷ್ಟು ಮೀಸಲು ಕಲ್ಪಿಸಲು ನಿರ್ದೇಶಿಸಬೇಕು' ಎಂದು ಕೋರಲಾದ ರಿಟ್ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಹೈಕೋರ್ಟ್ ವಕೀಲೆ ದೀಕ್ಷಾ ಎನ್.ಅಮೃತೇಶ್ ಮತ್ತು 'ಕರ್ನಾಟಕ ಮಹಿಳಾ ವಕೀಲರ ಒಕ್ಕೂಟ'ದ ಅಧ್ಯಕ್ಷೆ ಸಂಧ್ಯಾ ಬಿ.ಮಾದಿನೂರು ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

'ಈಗಾಗಲೇ ಎಎಬಿಗೆ ಚುನಾವಣಾ ನೀತಿ ಸಂಹಿತೆ ಜಾರಿಯಾಗಿದ್ದು, ಈ ಹಂತದಲ್ಲಿ ಮಧ್ಯಪ್ರವೇಶ ಮಾಡಲು ಆಗದು' ಎಂದು ನ್ಯಾಯಪೀಠ ಹೇಳಿದೆ. ಇದೇ ವೇಳೆ, 'ಎಎಬಿ ಚುನಾವಣೆಗೆ ಅಗತ್ಯವಾದ ವಿದ್ಯುನ್ಮಾನ ಮತಯಂತ್ರಗಳು ಮತ್ತು ಅಗತ್ಯ ಪೊಲೀಸರನ್ನು ನಿಯೋಜಿಸುವಂತೆ ಸಂಬಂಧಿಸಿದ ಇಲಾಖೆಗೆ ನಿರ್ದೇಶಿಸಬೇಕು' ಎಂದು ಕೋರಿ ಎಎಬಿ ಅಧ್ಯಕ್ಷ ಪದಾಂಕಿತ ಹಿರಿಯ ವಕೀಲ ವಿವೇಕ್ ಸುಬ್ಬಾರೆಡ್ಡಿ ಮತ್ತು ಹೈಕೋರ್ಟ್ ವಕೀಲ ಮಂಜುನಾಥ್ ನಾಯಕ್ ಸಲ್ಲಿಸಿದ್ದ ಅರ್ಜಿಗಳನ್ನು ವಿಲೇವಾರಿ ಮಾಡಿತು.

ಬೆಂಗಳೂರು ಪೂರ್ವ ತಾಲ್ಲೂಕು ದೊಡ್ಡಕನ್ನೆಲ್ಲಿ ಗ್ರಾಮದ ಫಲಾನುಭವಿಗಳು

ಆಶ್ರಯ ಯೋಜನೆ ಹಕ್ಕುಪತ್ರ ವಿತರಣೆ

ಪ್ರಜಾವಾಣಿ ವಾರ್ತೆ



ಯೋಜನೆಯ ಫಲಾನುಭವಿಗಳಿಗೆ ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಹಣಾಧಿಕಾರಿ ವಸಂತ್ ಕುಮಾರ್ ಅವರು ಹಕ್ಕುಪತ್ರ ವಿತರಿಸಿದರು

ಕೆ.ಆರ್.ಪುರ: ಬೆಂಗಳೂರು ಪೂರ್ವ ತಾಲ್ಲೂಕು ದೊಡ್ಡಕನ್ನೆಲ್ಲಿ ಗ್ರಾಮದ ಸರ್ವೆ 10ರಲ್ಲಿ ರಾಜೀವ್ ಗಾಂಧಿ ಆಶ್ರಯ ಯೋಜನೆಯಲ್ಲಿ ನಿರ್ಮಿಸಲಾಗಿದ್ದ ಮನೆಗಳ ಫಲಾನುಭವಿಗಳಿಗೆ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ವಸಂತ್ ಕುಮಾರ್ ಅವರು ಹಕ್ಕುಪತ್ರ ವಿತರಿಸಿದರು.

ನಂತರ ಮಾತನಾಡಿದ ಅವರು, '2004ರಲ್ಲಿ ರಾಜೀವ್ ಗಾಂಧಿ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾಗಿದ್ದ ಮನೆಗಳಿಗೆ 2012ರಲ್ಲಿ ಹಕ್ಕುಪತ್ರ ವಿತರಣೆ ಯಾಗಿತ್ತು. ಕೆಲವರು ಮಾಹಿತಿ ಕೊರತೆಯಿಂದ ಹಕ್ಕುಪತ್ರ ತೆಗೆದು ಕೊಂಡಿರಲಿಲ್ಲ. ಅಂಥ ಫಲಾನುಭವಿಗಳನ್ನು ಗುರುತಿಸಿ ಹಕ್ಕುಪತ್ರ ನೀಡಲಾಗಿದೆ' ಎಂದು ಹೇಳಿದರು.

ದೊಡ್ಡಕನ್ನೆಲ್ಲಿ ಗ್ರಾಮದಲ್ಲಿ ರಾಜೀವ್ ಗಾಂಧಿ ಆಶ್ರಯ ಮನೆ ಯೋಜನೆಯಡಿ 482 ಫಲಾನುಭವಿಗಳಿಗೆ ಮನೆ ಮಂಜೂರಾಗಿತ್ತು. ಈ ಪೈಕಿ 39 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆಯಾಗಿರಲಿಲ್ಲ. ಈ ಬಗ್ಗೆ ಭೀಮ ಸಂಘಟನೆಗಳ ಮಹಾ ಒಕ್ಕೂಟದಿಂದ ಫ್ರೀಡಂ ಪಾರ್ಕ್‌ನಲ್ಲಿ ಹೋರಾಟ ಹಮ್ಮಿಕೊಳ್ಳಲಾಗಿತ್ತು.

ಹೋರಾಟಕ್ಕೆ ಮಣಿದ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಹಕ್ಕುಪತ್ರ ನೀಡುವಂತೆ ಅಧಿಕಾರಿಗಳಿಗೆ ಆದೇಶಿಸಿದ್ದರು. 'ಇದರಿಂದ ಹಕ್ಕುಪತ್ರ ವಿತರಿಸಲಾಗಿದೆ' ಎಂದು ಭೀಮ ಸಂಘಟನೆಗಳ ಮಹಾ ಒಕ್ಕೂಟದ ಅಧ್ಯಕ್ಷ ಕೆ.ಮರಿಯಪ್ಪ ಹೇಳಿದರು.

ಕರ್ನಾಟಕ ಸಾಮರಸ್ಯ ಸಮಿತಿ ಅಧ್ಯಕ್ಷ ದೊಡ್ಡಕನ್ನೆಲ್ಲಿ ಕೃಷ್ಣಪ್ಪ, ರಾಜೀವ್ ಗಾಂಧಿ ನಿಗಮದ ಅಧಿಕಾರಿ ಬಸಪ್ಪ, ಹೆಬ್ಬಾಳ್, ವೆಂಕಟೇಶ್, ಸಾದರಮಂಗಲ ವೆಂಕಟೇಶ್ ಈ ಸಂದರ್ಭದಲ್ಲಿ ಹಾಜರಿದ್ದರು.

ಆರೋಗ್ಯದ ಪ್ರತೀಕ ಕ್ರೀಡೆ

ಪ್ರಜಾವಾಣಿ ವಾರ್ತೆ



ಜಲಮಂಡಳಿ ವಜ್ರಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ ಮಾತನಾಡಿದರು.

ಬೆಂಗಳೂರು: 'ಕ್ರೀಡೆ ಸಂತಸ ಮತ್ತು ಆರೋಗ್ಯದ ಪ್ರತೀಕ. ಆರೋಗ್ಯ ಭಾಗ್ಯವಷ್ಟೇ ಅಲ್ಲದೇ ಸಂಪತ್ತು ಕೂಡ. ಉತ್ತಮ ಆರೋಗ್ಯ ಇದ್ದರೆ ಬದುಕು ಸರಾಗವಾಗುತ್ತದೆ' ಎಂದು ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ ತಿಳಿಸಿದರು.

ಬೆಂಗಳೂರು ಜಲಮಂಡಳಿಗೆ 60 ವರ್ಷ ತುಂಬಿದ ಪ್ರಯುಕ್ತ ಬಿ.ಇ.ಎಲ್. ಮೈದಾನದಲ್ಲಿ ಆಯೋಜಿಸಿದ್ದ 'ವಜ್ರಮಹೋತ್ಸವ ಕ್ರೀಡಾಕೂಟ'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಪ್ರತಿದಿನ ಕನಿಷ್ಠ 50 ನಿಮಿಷವನ್ನು ವ್ಯಾಯಾಮಕ್ಕಾಗಿ ಮೀಸಲಿಡಬೇಕು. ಉತ್ತಮ ಅಭ್ಯಾಸಗಳನ್ನು ಕಲಿತರೆ ಶ್ರೇಷ್ಠ ಕ್ರೀಡಾಪಟುವಾಗಲು ಸಾಧ್ಯ' ಎಂದರು.


ಜಲಮಂಡಳಿ ಅಧ್ಯಕ್ಷ ವಿ. ರಾಮ್‌ಪ್ರಸಾತ್ ಮನೋಹರ್ ಮಾತನಾಡಿ, 'ಜಲಮಂಡಳಿ ಆರಂಭವಾಗಿ ಆರು ದಶಕಗಳಾಗಿವೆ. ಇದೊಂದು ಮಹತ್ವದ ಬೆಳವಣಿಗೆ. ಬದುಕಿನಲ್ಲಿ ಗೆಲುವು – ಸೋಲು ಸಹಜ. ಜಲಮಂಡಳಿ ಇದಕ್ಕೆ ಜ್ವಲಂತ ಉದಾಹರಣೆ. ಸೋಲನ್ನೇ ಗೆಲುವನ್ನಾಗಿ ಪರಿವರ್ತಿಸುವ ಸಾಮರ್ಥ್ಯವನ್ನು ಜಲಮಂಡಳಿ ಹೊಂದಿದೆ' ಎಂದರು.

ಕ್ರೀಡಾಕೂಟದಲ್ಲಿ ಕಪ್ ಗೆಲ್ಲುವ ತಂಡಕ್ಕೆ ₹1 ಲಕ್ಷ, ಎರಡು ಹಾಗೂ ಮೂರನೇ ಬಹುಮಾನ ಪಡೆದ ತಂಡಕ್ಕೆ ಕ್ರಮವಾಗಿ ₹50 ಸಾವಿರ ಮತ್ತು ₹25 ಸಾವಿರ ಬಹುಮಾನ ನೀಡುವುದಾಗಿ ಘೋಷಿಸಿದರು.

ಜಲಮಂಡಳಿಯ ಮುಖ್ಯ ಆಡಳಿತಾಧಿಕಾರಿ ಮದನ್ ಮೋಹನ್ ಸೇರಿದಂತೆ ಮಂಡಳಿಯ ಹಿರಿಯ ಅಧಿಕಾರಿಗಳು ಹಾಗೂ ಎಂಜನಿಯರ್‌ಗಳು ಹಾಜರಿದ್ದರು.

ಮಯೂರ ಓದಿರಿ

'ಕುವೆಂಪು ಸಾಹಿತ್ಯ ಪ್ರಶಸ್ತಿ'ಗೆ ಗುರುಪಾದಪ್ಪ ಆಯ್ಕೆ



ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ 2025ನೇ ಸಾಲಿನ 'ಕುವೆಂಪು ಸಾಹಿತ್ಯ ಪ್ರಶಸ್ತಿ'ಗೆ ಸಾಹಿತಿ ಗುರುಪಾದಪ್ಪ ಮರಿಗುದ್ದಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹15 ಸಾವಿರ ನಗದು, ಕಂಚಿನ ಫಲಕ ಮತ್ತು ಅಭಿನಂದನಾ ಪತ್ರ ಒಳಗೊಂಡಿದೆ. ಫೆಬ್ರುವರಿ 2ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ. ಕೃಷ್ಣ ಅಧ್ಯಕ್ಷತೆ ವಹಿಸುತ್ತಾರೆ ಎಂದು ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಟಗಲ್‌ಪುರ: ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಪ್ರಜಾವಾಣಿ ವಾರ್ತೆ



ಎಂ.ಮೋಹನ್ ಕುಮಾರ್

ಯಲಹಂಕ: ಇಟಗಲ್‌ಪುರ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಂ.ಮೋಹನ್‌ಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಆಂಜಿನಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಕ್ಕಾಗಿ ಬುಧವಾರ ಚುನಾವಣಾ ಪ್ರಕ್ರಿಯೆ ನಡೆಯಿತು. ಒಟ್ಟು 11 ನಿರ್ದೇಶಕರ ಬಲ ಹೊಂದಿರುವ ಸಂಘದಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮೋಹನ್ ಕುಮಾರ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಆಂಜಿನಪ್ಪ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಈ ವೇಳೆ ಮಾತನಾಡಿದ ಮೋಹನ್‌ಕುಮಾರ್, 'ಹಾಲು ಉತ್ಪಾದನೆಯ ಗುಣಮಟ್ಟ ಸುಧಾರಣೆ ಜೊತೆಗೆ ರೈತರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಬೆಂಗಳೂರು ಡೇರಿಯ ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪಿಸಿ, ಸೌಲಭ್ಯ ಕಲ್ಪಿಸಲಾಗುವುದು' ಎಂದರು.

'ಸಚಿವ ಪ್ರಿಯಾಂಕ್ ವಿರುದ್ಧ ಅಪಪ್ರಚಾರ ಸಹಿಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆಗೂ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೂ ಯಾವುದೇ ಸಂಬಂಧ ಇಲ್ಲ. ಪ್ರಿಯಾಂಕ್ ಅವರ ರಾಜಕೀಯ ಏಳಿಗೆ, ಜನಪ್ರಿಯತೆಯನ್ನು ಸಹಿಸದ ಬಿಜೆಪಿ ನಾಯಕರು ಅವರ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡಿ ತೇಜೋವಧೆ ಮಾಡುತ್ತಿದ್ದಾರೆ' ಎಂದು ರಾಜ್ಯ ಛಲವಾದಿ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಘಟಕದ ಅಧ್ಯಕ್ಷ ಚಿದರವಳ್ಳಿ ಮಹಾದೇವಸ್ವಾಮಿ ಆರೋಪಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಸಚಿನ್ ಆತ್ಮಹತ್ಯೆ ಪ್ರಕರಣದ ತನಿಖೆ ನಡೆಯುತ್ತಿದ್ದು, ಶೀಘ್ರ ಸತ್ಯ ಹೊರಬರಲಿದೆ. ಅಲ್ಲಿಯವರೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ತಾಳ್ಮೆಯಿಂದ ಇದ್ದು, ತಮಗಿರುವ ತೂಕ, ಗೌರವ ಉಳಿಸಿಕೊಳ್ಳಬೇಕು. ತಮ್ಮ ಸ್ವಾರ್ಥಕ್ಕಾಗಿ ಪ್ರತಿಭಟನೆ ಮಾಡುವ ಮೂಲಕ ರಾಜ್ಯ ಜನರ ನೆಮ್ಮದಿ ಹಾಳು ಮಾಡಬಾರದು' ಎಂದಿದ್ದಾರೆ.

ಎಂಬಿಎ ಉಳಿಕೆ ಸೀಟು; ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯವು 2024-25ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಬಾಕಿ ಉಳಿದಿರುವ ಎಂಬಿಎ ಕೋರ್ಸ್‌ಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ -ಪಿಜಿ ಸಿಇಟಿ ಮೂಲಕ ನಡೆದ ಸೀಟು ಹಂಚಿಕೆ ಬಳಿಕ ಉಳಿಕೆ ಸೀಟುಗಳನ್ನು ಸರ್ಕಾರ ವಿಶ್ವವಿದ್ಯಾಲಯಕ್ಕೆ ನೀಡಿದೆ. ಆ ಸೀಟುಗಳ ಭರ್ತಿಗೆ ಅವಕಾಶ ನೀಡಿದೆ.

ಅಭ್ಯರ್ಥಿಗಳು ಹಗಲು ಮತ್ತು ಸಂಜೆ ತರಗತಿಗಳ ಎರಡೂ ಬಗೆಯ ಕೋರ್ಸುಗಳಿಗೂ ಅರ್ಜಿ ಸಲ್ಲಿಸಬಹುದು.

ಶುಲ್ಕರಹಿತವಾಗಿ ಅರ್ಜಿ ಸಲ್ಲಿಸುವ ಅವಧಿ ಮುಗಿದೆ. ₹200 ದಂಡ ಶುಲ್ಕದೊಂದಿಗೆ ಜ.9ರೊಳಗೆ ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು http:/UUCMS.karnataka.gov.in/login/online statement ಮೂಲಕ ಸಲ್ಲಿಸಬಹುದು. ಜ.13ರಂದು ಜೇಷ್ಠತಾ ಪಟ್ಟಿ ಪ್ರಕಟಿಸಲಾಗುವುದು. ಜ.15ರಿಂದ ಕೌನ್ಸೆಲಿಂಗ್ ನಡೆಯಲಿದೆ ಎಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಬಿಜೆಪಿ ಸತ್ಯಶೋಧನಾ ತಂಡದಿಂದ ಜಯನಗರ ಸಾರ್ವಜನಿಕ ಆಸ್ಪತ್ರೆ ಪರಿಶೀಲನೆ

ಸ್ಕ್ಯಾನಿಂಗ್ ಯಂತ್ರಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಯಂದಿರ ಚಿಕಿತ್ಸೆಗೆ ಸಂಬಂಧಿಸಿದಂತೆ ಜಯನಗರ ಸಾರ್ವಜನಿಕ ಆಸ್ಪತ್ರೆಯನ್ನು ಬುಧವಾರ ಪರಿಶೀಲಿಸಿದ ಬಿಜೆಪಿ ಸತ್ಯಶೋಧನಾ ತಂಡ, ಸ್ಕ್ಯಾನಿಂಗ್ ಯಂತ್ರ ಸೇರಿ ವಿವಿಧ ಯಂತ್ರೋಪಕರಣಗಳನ್ನು ಒದಗಿಸಬೇಕು ಎಂದು ಸರ್ಕಾರಕ್ಕೆ ಆಗ್ರಹಿಸಿತು.

ರಾಜ್ಯದ ವಿವಿಧೆಡೆ ಬಾಣಂತಿಯರ ಸಾವಿನ ಪ್ರಕರಣಗಳು ವರದಿಯಾಗುತ್ತಿರುವುದರಿಂದ ತಂಡವು ಸ್ಥಳೀಯ ಶಾಸಕ ಸಿ.ಕೆ. ರಾಮಮೂರ್ತಿ ನೇತೃತ್ವದಲ್ಲಿ ಜಯನಗರ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿತು. ವಿಧಾನ ಪರಿಷತ್‌ನ ಮಾಜಿ ಸದಸ್ಯೆ ತಾರಾ ಅನೂರಾಧಾ, ಬಿಜೆಪಿ ಮಹಿಳಾ ಮೋರ್ಚಾದ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ವಿಜಯಲಕ್ಷ್ಮಿ, ನಾಗರತ್ನಾ ಹಾಗೂ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

ತಂಡದ ಸದಸ್ಯರು ಆಸ್ಪತ್ರೆಯಲ್ಲಿನ ವಾರ್ಡ್‌ಗಳಿಗೆ ಭೇಟಿ ನೀಡಿ, ಸ್ವಚ್ಛತೆ ಹಾಗೂ ವಿವಿಧ ವೈದ್ಯಕೀಯ ವ್ಯವಸ್ಥೆಗಳನ್ನು ಪರಿಶೀಲಿಸಿದರು. ಇದೇ ವೇಳೆ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಬಾಣಂತಿಯರನ್ನು ವಿಚಾರಿಸಿದರು. ವೈದ್ಯರಿಂದಲೂ ಆಸ್ಪತ್ರೆಯಲ್ಲಿನ ವ್ಯವಸ್ಥೆ ಹಾಗೂ ಚಿಕಿತ್ಸೆಗಳ ಬಗ್ಗೆ ವಿವರ ಪಡೆದರು.



ಬಿಜೆಪಿ ಸತ್ಯಶೋಧನಾ ತಂಡದ ಸಿ.ಕೆ. ರಾಮಮೂರ್ತಿ, ತಾರಾ ಅನೂರಾಧಾ, ವಿಜಯಲಕ್ಷ್ಮಿ, ನಾಗರತ್ನಾ ಅವರು ಬಾಣಂತಿಯೊಬ್ಬರ ಆರೋಗ್ಯ ವಿಚಾರಿಸಿದರು

‘ಸದ್ಯ ಆಸ್ಪತ್ರೆಯಲ್ಲಿ 43 ಬಾಣಂತಿಯರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸಹಜ ಹೆರಿಗೆಗೆ ಆದ್ಯತೆ ನೀಡಲಾಗಿದ್ದು, ಗುಣಮಟ್ಟದ ಚಿಕಿತ್ಸೆ ಒದಗಿಸಲಾಗುತ್ತಿದೆ. ಕಳೆದ ವರ್ಷ ಆಸ್ಪತ್ರೆಯಲ್ಲಿ 4,500 ಹೆರಿಗೆಗಳಾಗಿದ್ದು, ಇವುಗಳಲ್ಲಿ ಶೇ 70ರಷ್ಟು ಪ್ರಕರಣಗಳಲ್ಲಿ ಸಹಜ ಹೆರಿಗೆಗಳಾಗಿವೆ. ಸಂಕೀರ್ಣ ಪ್ರಕರಣಗಳಲ್ಲಿ ಮಾತ್ರ ಸಿಸೇರಿಯನ್ ಮಾಡಲಾಗಿದೆ’ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್. ಸುರೇಂದ್ರ ತಿಳಿಸಿದರು.

‘ಆಸ್ಪತ್ರೆಯು ಒಟ್ಟು 300 ಹಾಸಿಗೆಗಳನ್ನು ಒಳಗೊಂಡಿದ್ದು, ನೂರು ಹಾಸಿಗೆಗಳನ್ನು ತಾಯಿ–ಮಕ್ಕಳಿಗೆ ಮೀಸಲಿಡಲಾಗಿದೆ. ತುರ್ತು ಚಿಕಿತ್ಸಾ ವಿಭಾಗದಲ್ಲಿ 12 ಹಾಸಿಗೆಗಳು ಹಾಗೂ ವಿಶೇಷ ನವಜಾತ ಶಿಶು ಚಿಕಿತ್ಸಾ ಘಟಕದಲ್ಲಿ (ಎಸ್‌ಎನ್‌ಸಿಯು) 7 ಹಾಸಿಗೆಗಳು ಲಭ್ಯ ಇವೆ. ಒಟ್ಟು ಆರು ಶಸ್ತ್ರಚಿಕಿತ್ಸಾ ಕೊಠಡಿಗಳನ್ನು ಆಸ್ಪತ್ರೆ ಒಳಗೊಂಡಿದೆ. ನಿತ್ಯ 1,000ದಿಂದ 1,200 ಹೊರರೋಗಿಗಳು ಭೇಟಿ ನೀಡುತ್ತಾರೆ. ತಿಂಗಳಿಗೆ 400ರಿಂದ 500 ಹೆರಿಗೆಗಳಾಗುತ್ತವೆ’ ಎಂದು ವಿವರಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ತಾರಾ ಅನೂರಾಧಾ, ‘ಮುನ್ನೆಚ್ಚರಿಕೆ ಕ್ರಮವಾಗಿ ಆಸ್ಪತ್ರೆಯನ್ನು ಪರಿಶೀಲಿಸಲಾಯಿತು. ಇಲ್ಲಿ ಸ್ವಚ್ಛತೆ ಕಾಯ್ದುಕೊಳ್ಳಲಾಗಿದ್ದು, ಎಲ್ಲವೂ ವ್ಯವಸ್ಥಿತವಾಗಿದೆ. ವೈದ್ಯರು ಹಾಗೂ ಸಿಬ್ಬಂದಿ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಬಾಣಂತಿಯರು ಸಕಾರಾತ್ಮಕ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ’ ಎಂದು ಹೇಳಿದರು.

ಸಿ.ಕೆ. ರಾಮಮೂರ್ತಿ, ‘ಬಾಣಂತಿಯರ ಸರಣಿ ಸಾವು ಮರುಕಳಿಸಬಾರದು ಎಂಬ ಕಾರಣ ಆಸ್ಪತ್ರೆಗಳಿಗೆ ಭೇಟಿ ನೀಡುತ್ತಿದ್ದೇವೆ. ಜಯನಗರ ಸಾರ್ವಜನಿಕ ಆಸ್ಪತ್ರೆಗೆ ಅಗತ್ಯ ಯಂತ್ರೋಪಕರಣ ಒದಗಿಸಬೇಕಿದೆ. ಈ ಹಿಂದೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಗಮನಕ್ಕೆ ತರಲಾಗಿತ್ತು. ಈಗ ಮತ್ತೊಮ್ಮೆ ಸರ್ಕಾರದ ಜತೆಗೆ ಮಾತುಕತೆ ನಡೆಸಲಾಗುವುದು. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿಯೂ ವೈದ್ಯಕೀಯ ಉಪಕರಣ ಅಳವಡಿಕೆಗೆ ಕ್ರಮ ವಹಿಸಲಾಗುವುದು’ ಎಂದು ಭರವಸೆ ನೀಡಿದರು.

ಬಾಲ ಹಿಡಿದು ಬಲೆಗೆ ಚಿರತೆ ಕೆಡವಿದ ಯುವಕ!

ಪ್ರಜಾವಾಣಿ ವಾರ್ತೆ



ತಿಪಟೂರು: ತಾಲ್ಲೂಕಿನ ರಂಗಾಪುರ ಚಿಕ್ಕಕೊಟ್ಟಿಗೇನಹಳ್ಳಿ ಬಳಿ ಅರಣ್ಯ ಇಲಾಖೆ ಸಿಬ್ಬಂದಿ ಬಲೆಗೆ ಬೀಳದೆ ಸತಾಯಿಸುತ್ತಿದ್ದ 3 ವರ್ಷದ ತುಂಟ ಚಿರತೆಯ ಬಾಲವನ್ನು ಗ್ರಾಮದ ಆನಂದ್ ಎಂಬ ಯುವಕ ಗಟ್ಟಿಯಾಗಿ ಹಿಡಿದು ಬಲೆಗೆ ಕೆಡವಿದ್ದಾರೆ.

ಚಿಕ್ಕಕೊಟ್ಟಿಗೇನಹಳ್ಳಿ ಗ್ರಾಮದಲ್ಲಿ ಕಾಣಿಸಿಕೊಂಡಿದ್ದ ಗಂಡು ಚಿರತೆ ಎರಡು ದಿನಗಳಿಂದ ಮಲ್ಲಿಕಾರ್ಜುನಯ್ಯ ಎಂಬವರ ತೋಟದ ಬಳಿ ಓಡಾಡಿಕೊಂಡಿತ್ತು. ಚಿರತೆಯನ್ನು ಕಂಡ ಗ್ರಾಮಸ್ಥರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರು. ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಸೆರೆಗೆ ಸೋಮವಾರ ಬೆಳಿಗ್ಗೆಯಿಂದಲೇ ಕಾರ್ಯಾಚರಣೆ ಆರಂಭಿಸಿದ್ದರು. ನೋಡಲು ಸೇರಿದ್ದ ಗ್ರಾಮಸ್ಥರ ಕೂಗಾಟದಿಂದಾಗಿ ಬೆದರಿದ ಚಿರತೆ ಅತ್ತಿಂದಿತ್ತ ಓಡಾಡಿ ಬಳಲಿತ್ತು. ಇದನ್ನು ಅರಿತ ಆನಂದ್ ಧೈರ್ಯದಿಂದ ಬಾಲವನ್ನು ಗಟ್ಟಿಯಾಗಿ ಹಿಡಿದುಕೊಂಡರು. ತಕ್ಷಣ ಅರಣ್ಯ ಇಲಾಖೆ ಸಿಬ್ಬಂದಿ ಬಲೆ ಬೀಸಿ ಚಿರತೆ ಸೆರೆ ಹಿಡಿದರು.

‘ಪಿಯು ಪ್ರಮಾಣಪತ್ರ ಅಗತ್ಯವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉದ್ಯೋಗ ಆಧಾರಿತ ಶಿಕ್ಷಣವನ್ನು (ಜೆಒಸಿ) ಪಿಯುಸಿಗೆ ತತ್ಸಮಾನವಾಗಿ ಪರಿಗಣಿಸಬೇಕು’ ಎಂಬ ರಾಜ್ಯ ಸರ್ಕಾರದ ಆದೇಶವನ್ನು ಉಲ್ಲೇಖಿಸುವ ಮೂಲಕ ಹೈಕೋರ್ಟ್, ‘ಮೂರು ವರ್ಷಗಳ ಕಾನೂನು ಪದವಿ ಕಲಿಕೆಗೆ (ಎಲ್‌ಎಲ್‌ಬಿ) ಪ್ರವೇಶ ಪಡೆಯಲು ಮೂರು ವರ್ಷಗಳ ಕೋರ್ಸ್‌ನ ಪದವಿ ಪ್ರಮಾಣಪತ್ರ ಹೊಂದಿದ್ದರೆ ಸಾಕು. ಪಿಯುಸಿ (ಪದವಿ ಪೂರ್ವ ಶಿಕ್ಷಣ) ಉತ್ತೀರ್ಣಗೊಳಿಸಿದ ಪ್ರಮಾಣಪತ್ರ ಸಲ್ಲಿಸುವ ಅಗತ್ಯ ಉದ್ಭವಿಸುವುದಿಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಈ ಸಂಬಂಧ ಕಾರ್ಕಳ ತಾಲ್ಲೂಕಿನ ಹೀಂಕಿಲ ಹೊಸಮನೆ ಹಿರ್ಗಾನದ ರಾಕೇಶ್ ಶೆಟ್ಟಿ (43) ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಭಾರತೀಯ ವಕೀಲರ ಪರಿಷತ್‌ನ (ಬಿಸಿಐ) ನಿಯಮ 5ರ ಪ್ರಕಾರ ಮೂರು ವರ್ಷಗಳ ಕಾನೂನು ಪದವಿಗೆ ಪ್ರವೇಶ ಪಡೆಯಲು ಪದವಿ ಪ್ರಮಾಣಪತ್ರವನ್ನು ಒದಗಿಸಿದ್ದರೆ ಸಾಕು’ ಎಂದು ಹೇಳಿದೆ.

‘ಐದು ವರ್ಷದ ಕಾನೂನು ಪದವಿಗೆ ಅರ್ಜಿ ಸಲ್ಲಿಸುವಾಗ ಮಾತ್ರ ಎಸ್ಸೆಸ್ಸೆಲ್ಸಿ ಪಾಸಾದ ಬಳಿಕ ಅಭ್ಯಸಿಸುವ ಎರಡು ವರ್ಷಗಳ ಸಿಬಿಎಸ್‌ಇ ಅಥವಾ ಐಸಿಎಸ್‌ಇ ಇಲ್ಲವೇ ರಾಜ್ಯ ಪಠ್ಯಕ್ರಮದ ದ್ವಿತೀಯ ಪಿಯುಸಿ ಅಧ್ಯಯನದ ಪ್ರಮಾಣಪತ್ರ ಅವಶ್ಯ’ ಎಂದು ನ್ಯಾಯಪೀಠ ಹೇಳಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಕೆ.ಪ್ರಸನ್ನ ಶೆಟ್ಟಿ ವಾದ ಮಂಡಿಸಿದ್ದರು.

ಪ್ರಕರಣವೇನು?: ಅರ್ಜಿದಾರ ರಾಕೇಶ್ ಶೆಟ್ಟಿ 1997ರಲ್ಲಿ ಎಸ್ಸೆಸ್ಸೆಲ್ಸಿ ಪೂರ್ಣಗೊಳಿಸಿದ ಬಳಿಕ ಕಂಪ್ಯೂಟರ್ ತಂತ್ರಜ್ಞಾನ ವಿಭಾಗದಲ್ಲಿನ ಉದ್ಯೋಗ ಆಧಾರಿತ ಪದವಿ ಪೂರ್ವ ಶಿಕ್ಷಣ (ಜೆಒಸಿ) ಅಧ್ಯಯನ ಮಾಡಿದ್ದರು. ಬಳಿಕ 2008ರಲ್ಲಿ ಬಿ.ಕಾಂ ಪದವಿ ಪೂರೈಸಿದ್ದರು.

ಕೆಲ ವರ್ಷಗಳ ಕಾಲ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡಿದ್ದ ಅವರು 2024ರಲ್ಲಿ ಕಾನೂನು ಪದವಿ ಪಡೆಯಲು ಬೆಂಗಳೂರಿನ ನಾಗಸಂದ್ರ ವ್ಯಾಪ್ತಿಯ ಸಿಡೇದಹಳ್ಳಿಯಲ್ಲಿರುವ, ಸೌಂದರ್ಯ ಕಾನೂನು ಕಾಲೇಜಿನಲ್ಲಿ ಮೂರು ವರ್ಷಗಳ ಕಾನೂನು ಪದವಿ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದರು. ಇದಕ್ಕಾಗಿ 2024–25ರ ಶೈಕ್ಷಣಿಕ ಸಾಲಿಗೆ ಶುಲ್ಕ ಪಾವತಿ ಮಾಡಿದ್ದರು.

ಎರಡನೇ ದಿನವೂ ಮುಂದುವರಿದ ಮುಷ್ಕರ, ಕೊರೆಯುವ ಚಳಿಯಲ್ಲೂ ತಗ್ಗದ ಹೋರಾಟದ ಕಾವು

ರಸ್ತೆಯಲ್ಲೇ ಮಲಗಿದ ಆಶಾ ಕಾರ್ಯಕರ್ತೆಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮುಷ್ಕರ ಆರಂಭಿಸಿರುವ ಆಶಾ ಕಾರ್ಯಕರ್ತೆಯರು ಕೊರೆಯುವ ಚಳಿ, ಸುರಿಯುವ ಮಂಜನ್ನು ಲೆಕ್ಕಿಸದೇ ಸ್ವಾತಂತ್ರ್ಯ ಉದ್ಯಾನದಲ್ಲಿ ಹೋರಾಟ ಮುಂದುವರಿಸಿದ್ದಾರೆ. ಮುಷ್ಕರ ಮೂರನೇ ದಿನಕ್ಕೆ ಕಾಲಿಟ್ಟಿದೆ.

ಮಂಗಳವಾರದಿಂದ ಹೋರಾಟ ಆರಂಭವಾಗಿದ್ದು, ಮೊದಲ ದಿನ ರಸ್ತೆಯಲ್ಲೇ ಮಲಗಿ ಹೋರಾಟ ಮುಂದುವರಿಸಿದ್ದರು. ಎರಡನೇ ದಿನವಾದ ಬುಧವಾರವೂ ಅಹೋರಾತ್ರಿ ಮುಷ್ಕರ ಮುಂದುವರಿಯಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿರುವ ಆಶಾ ಕಾರ್ಯಕರ್ತೆಯರು ಜೊತೆಗೆ ಬಂದಿರುವ ಎಳೆಯ ಮಕ್ಕಳೊಂದಿಗೆ ನಡುಗುತ್ತಾ ರಸ್ತೆಯಲ್ಲೇ ಮಲಗಿ ಕಾಲ ಕಳೆಯುತ್ತಿದ್ದಾರೆ.



ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಹೋರಾಟ ನಡೆಸುತ್ತಿರುವ ಆಶಾ ಕಾರ್ಯಕರ್ತೆಯರು ಸ್ವಾತಂತ್ರ್ಯ ಉದ್ಯಾನದ ಪಕ್ಕದ ಕಾಳಿದಾಸ ರಸ್ತೆಯಲ್ಲಿ ಬುಧವಾರ ರಾತ್ರಿ ಕೊರೆಯುವ ಚಳಿಯಲ್ಲಿ ಮಲಗಿದ್ದರು.
ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿರುವ ಸಾವಿರಾರು ಆಶಾ ಕಾರ್ಯಕರ್ತೆಯರು ಸರ್ಕಾರದ ವಿರುದ್ಧ ಘೋಷಣಾ ಫಲಕ ಪ್ರದರ್ಶಿಸಿದರು. ಘೋಷಣೆಗಳು, ಹೋರಾಟದ ಹಾಡಿನೊಂದಿಗೆ ತಮ್ಮ ಬೇಡಿಕೆ ಈಡೇರಿಕೆಗಾಗಿ ಪಟ್ಟು ಹಿಡಿದಿದ್ದಾರೆ.

'ಮೂರು ತಿಂಗಳಿಂದ ಬಾಕಿ ಉಳಿಸಿಕೊಂಡಿರುವ ಪ್ರೋತ್ಸಾಹಧನದ ಮೊತ್ತವನ್ನು ಕೂಡಲೇ ಪಾವತಿಸಬೇಕು. ಕೆಲಸಕ್ಕೆ ತಕ್ಕಂತೆ ಪ್ರೋತ್ಸಾಹ ಧನ ಸಿಗದೇ ವಂಚನೆಯಾಗುತ್ತಿದೆ. ಆಶಾ ಕಾರ್ಯಕರ್ತೆಯರು ಸ್ವಂತ ಹಣದಲ್ಲಿ ಸ್ಮಾರ್ಟ್ ಫೋನ್ ಖರೀದಿಸಿ ಇಲಾಖೆ ಕೆಲಸಗಳಿಗೆ ಬಳಕೆ ಮಾಡಬೇಕೆಂಬ ಆದೇಶ ಹಿಂಪಡೆಯಬೇಕು. ಆಶಾ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಮೂಲ ಸೌಕರ್ಯ ಕೊರತೆ: ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿರುವ ಸಾವಿರಾರು ಆಶಾ ಕಾರ್ಯಕರ್ತೆಯರು ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಸ್ವಾತಂತ್ರ್ಯ ಉದ್ಯಾನ ಹಾಗೂ ಸುತ್ತಮುತ್ತ ಮೂಲ ಸೌಕರ್ಯಗಳ ಕೊರತೆ ಇದ್ದು, ಪ್ರತಿಭಟನೆಯಲ್ಲಿ ತೊಡಗಿರುವ ಮಹಿಳೆಯರು ಪರದಾಡುತ್ತಿದ್ದಾರೆ. ಉದ್ಯಾನದಲ್ಲಿಯೇ ಕೆಲ ಕಾರ್ಯಕರ್ತೆಯರು ಉಳಿದುಕೊಂಡಿದ್ದರೆ, ಕೆಲವರು ಸ್ವಾತಂತ್ರ್ಯ ಉದ್ಯಾನದ ಮುಂಭಾಗದಲ್ಲಿರುವ ರಸ್ತೆಯಲ್ಲಿಯೇ ಮಲಗಿದ್ದರು.

'ಮುಷ್ಕರದಲ್ಲಿ ಹೆಚ್ಚು ಕಾರ್ಯಕರ್ತೆಯರು ಭಾಗವಹಿಸಿರುವ ಕಾರಣ ಕುಡಿಯುವ ನೀರು, ಶೌಚಾಲಯ ಸಮಸ್ಯೆ ಉಂಟಾಗಿದೆ. ಕೆಲವೆಡೆ ತಾತ್ಕಾಲಿಕ ಶೌಚಾಲಯಗಳನ್ನು ಇರಿಸಿದರೂ ಸಾಲುತ್ತಿಲ್ಲ. ಹಣ ನೀಡಿ ಉಪಯೋಗಿಸುವ ಶೌಚಾಲಯಗಳಿದ್ದರೂ ಗಂಟೆಗಟ್ಟಲೇ ಸರದಿಯಲ್ಲಿ ನಿಲ್ಲಬೇಕಾದ ಸ್ಥಿತಿ ಇದೆ' ಎಂದು ಆಶಾ ಕಾರ್ಯಕರ್ತೆಯರೊಬ್ಬರು ಅಳಲು ತೋಡಿಕೊಂಡರು.

'ಮಹಿಳೆಯರ ಸಂಖ್ಯೆಗೆ ತಕ್ಕಂತೆ ಮೂಲಸೌಕರ್ಯ ಕಲ್ಪಿಸಬೇಕು' ಎಂದೂ ಆಗ್ರಹಿಸಿದರು.

ಮನವೊಲಿಕೆ ಯತ್ನ ವಿಫಲ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಆಶಾ ಕಾರ್ಯಕರ್ತೆಯರ ವಿವಿಧ ಬೇಡಿಕೆಗಳ ಮನವಿಪತ್ರ ಸ್ವೀಕರಿಸಿದರು. ಕೆಲವು ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿ ಮುಷ್ಕರ ಕೈಬಿಡುವಂತೆ ಮನವೊಲಿಸಲು ಯತ್ನಿಸಿದರು. ಆದರೆ, ತಮ್ಮ ಎಲ್ಲ ಬೇಡಿಕೆಗಳು ಈಡೇರುವವರೆಗೆ ಸ್ಥಳದಿಂದ ಕದಲುವುದಿಲ್ಲ ಎಂದು ಪಟ್ಟುಹಿಡಿದ ಪ್ರತಿಭಟನಕಾರರು ಮುಷ್ಕರ ಮುಂದುವರಿಸಿದರು.

'ಆಶಾ ಕಾರ್ಯಕರ್ತೆಯರ ಗೌರವಧನ ಹೆಚ್ಚಿಸುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಗೌರವಧನ ಸೇರಿಸಿ ತಿಂಗಳಿಗೆ ₹9,500 ಮುಂಗಡವಾಗಿ ನೀಡಲಾಗುವುದು. ಆಶಾ ಕಾರ್ಯಕರ್ತೆಯರು ಪ್ರತಿಭಟನೆ ಕೈಬಿಟ್ಟು ಆರೋಗ್ಯ ಸೇವೆ ಒದಗಿಸುವ ಮೂಲಕ ಇಲಾಖೆಯೊಂದಿಗೆ ಸಹಕರಿಸಬೇಕು' ಎಂದು ದಿನೇಶ್ ಮನವಿ ಮಾಡಿದರು.

'ತಿಂಗಳಿಗೆ ₹15 ಸಾವಿರ ಗೌರವಧನ ನಿಗದಿಪಡಿಸುವವರೆಗೂ ಪ್ರತಿಭಟನೆ ಮುಂದುವರೆಯಲಿದೆ' ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಮುಖಂಡರು ತಿಳಿಸಿದ್ದಾರೆ.

ಹೋರಾಟಕ್ಕೆ ಸಂತೋಷ್ ಹೆಗ್ಡೆ ಬೆಂಬಲ

'ಜೀವನಕ್ಕೆ ಅವಶ್ಯಕವಾದ ವೇತನ ಪಡೆಯುವುದು ಮಾನವನ ಹಕ್ಕು. ಅದು ವೇತನ ರೂಪದಲ್ಲಿ ಇರಲಿ ಅಥವಾ ಇನ್ನಾವುದೇ ರೂಪದಲ್ಲಿರಲಿ ಅದನ್ನು ಸರ್ಕಾರವೇ ಕೊಡಬೇಕು. ಇದನ್ನು ನಿರಾಕರಿಸುವುದು ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ' ಎಂದು ನಿವೃತ್ತ ಲೋಕಾಯುಕ್ತ, ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಹೇಳಿದರು.

ಸ್ವಾತಂತ್ರ್ಯ ಉದ್ಯಾನಕ್ಕೆ ಬುಧವಾರ ಭೇಟಿನೀಡಿದ ಅವರು, ಆಶಾ ಕಾರ್ಯಕರ್ತೆಯರ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿದರು.

'ಸರ್ಕಾರ ಆಶಾ ಕಾರ್ಯಕರ್ತೆಯರ ಬೇಡಿಕೆಗಳನ್ನು ಈಡೇರಿಸುವ ಬದಲು ಭರವಸೆಗಳನ್ನು ನೀಡುತ್ತಾ, ಖಜಾನೆಯಲ್ಲಿ ಹಣವಿಲ್ಲ ಎನ್ನುತ್ತಿದೆ. ಆದರೆ ಸರ್ಕಾರ ಮಾಡುತ್ತಿರುವ ದುಂದುವೆಚ್ಚಗಳಿಗೆ ಕಡಿವಾಣ ಹಾಕಿದರೆ, ಈ ಬೇಡಿಕೆಗಳನ್ನು ಈಡೇರಿಸುವುದು ಕಷ್ಟಕರವಲ್ಲ' ಎಂದರು.

ಸುದ್ದಿ 2 ನಿಮಿಷ

ಕಾರ್ಮಿಕನನ್ನು ಮ್ಯಾನ್‌ಹೋಲ್‌ಗೆ ಇಳಿಸಿದ ಮನೆ ಮಾಲೀಕ

ಚಿಂತಾಮಣಿ (ಚಿಕ್ಕಬಳ್ಳಾಪುರ): ನಗರದ ವೆಂಕಟಗಿರಿಕೋಟೆಯ ಮನೆಯ ಮಾಲೀಕರೊಬ್ಬರು ರಸ್ತೆ ಮ್ಯಾನ್‌ಹೋಲ್‌ಗೆ ಕಾರ್ಮಿಕನೊಬ್ಬನನ್ನು ಇಳಿಸಿ ಸ್ವಚ್ಛಗೊಳಿಸಿದ್ದಾರೆ. ಮನೆಯ ಮಾಲೀಕರ ವಿರುದ್ಧ ನಗರಸಭೆಯ ಅಧಿಕಾರಿಗಳು ನಗರ ಠಾಣೆಯಲ್ಲಿ ದೂರು ನೀಡಿದ್ದಾರೆ.

ವೆಂಕಟಗಿರಿಕೋಟೆಯ ನಿವಾಸಿ ಎಂ.ಸಲ್ಮಾ ಎಂಬುವವರ ಮನೆಯ ಶೌಚಗೃಹದಿಂದ ಒಳಚರಂಡಿಗೆ



ಪ್ರಾತಿನಿಧಿಕ ಚಿತ್ರ

ಸಂಪರ್ಕ ಕಲ್ಪಿಸುವ ಪೈಪ್‌ಲೈನ್ ಕಟ್ಟಿಕೊಂಡಿತ್ತು. ಮ್ಯಾನ್ ಹೋಲ್‌ಗೆ ಕಾರ್ಮಿಕನನ್ನು ಇಳಿಸಿ ಸ್ವಚ್ಛಗೊಳಿಸಿದ್ದಾರೆ. ಸಾರ್ವಜನಿಕರೊಬ್ಬರು ಈ ದೃಶ್ಯವನ್ನು ಸೆರೆ ಹಿಡಿದು ನಗರಸಭೆಗೆ ದೂರು ನೀಡಿದ್ದಾರೆ.

ನಗರಸಭೆ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಮನೆಯ ಮಾಲೀಕರು ಯಾವುದೇ ಸುರಕ್ಷತಾ ಕ್ರಮ ಕೈಗೊಳ್ಳದೆ ಕಾರ್ಮಿಕನನ್ನು ಮ್ಯಾನ್‌ಹೋಲ್‌ಗೆ ಇಳಿಸಿರುವುದು ಸಾಬೀತಾಗಿದೆ ಎಂದು ನಗರಸಭೆಯ ಅಧಿಕಾರಿಗಳು ತಿಳಿಸಿದ್ದಾರೆ.

ಮ್ಯಾನ್ಯುಯಲ್ ಸ್ಕ್ಯಾವೆಂಜರ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮದ ಪ್ರಕಾರ ಅಪರಾಧವಾಗಿದೆ. ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ನಗರಸಭೆಯ ಕಿರಿಯ ಆರೋಗ್ಯಾಧಿಕಾರಿ ವಿಜಯಕುಮಾರ್ ಠಾಣೆಗೆ ದೂರು ನೀಡಿದ್ದಾರೆ.

ಮಾರಾಟವಾಗಿದ್ದ ಮಗು ರಕ್ಷಣೆ

ಬೆಳಗಾವಿ: ಗೋವಾದ ಮಹಿಳೆಯೊಬ್ಬರಿಗೆ ₹4.5 ಲಕ್ಷಕ್ಕೆ ಮಾರಾಟ ಮಾಡಿದ್ದ ಮಹಾರಾಷ್ಟ್ರ ದಂಪತಿಯ ಮಗುವನ್ನು ರಕ್ಷಿಸಿ, ನಗರದ ಸ್ವಾಮಿ ವಿವೇಕಾನಂದ ಮಕ್ಕಳ ದತ್ತು ಕೇಂದ್ರದಲ್ಲಿ ಆರೈಕೆ ಮಾಡಲಾಗುತ್ತಿದೆ.

ಮಗು ಮಾರಾಟ ಪ್ರಕರಣದಡಿ ಮಹಾರಾಷ್ಟ್ರದ ಸಾಂಗ್ಲಿಯ ರಾಜೇಂದ್ರ ಮೇತ್ರಿ, ಶಿಲ್ಪಾ ಮೇತ್ರಿ, ಸೊಲ್ಲಾಪುರದ ರವಿ ರಾಹುತ, ರಾಣಿ ರಾಹುತ, ಗೋವಾದ ಸ್ಮಿತಾ ವಾಡಿಕರ್ ಮತ್ತು ಬೆಳಗಾವಿಯ ವಂದನಾ ಸುರ್ವೆ ವಿರುದ್ಧ ದೂರು ದಾಖಲಾಗಿದೆ.

'ಮೇತ್ರಿ ದಂಪತಿ ತಮ್ಮ ಎರಡು ವರ್ಷದ ಮಗುವನ್ನು ಸ್ಮಿತಾ ಅವರಿಗೆ 2024ರ ಫೆಬ್ರುವರಿ 27ರಂದು ಮಾರಿದ್ದರು. ಉತ್ತರ ಕನ್ನಡ ಜಿಲ್ಲೆಯ ರಾಮನಗರದಲ್ಲಿ ಈ ವ್ಯವಹಾರ ಕುದುರಿಸಲಾಗಿತ್ತು. ವಂದನಾ, ರವಿ ಮತ್ತು ರಾಣಿ ಮಧ್ಯವರ್ತಿಗಳಾಗಿ ಕೆಲಸ ಮಾಡಿದ್ದರು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಗು ಮಾರಾಟದ ಮಾಹಿತಿ ಮಕ್ಕಳ ಸಹಾಯವಾಣಿ ಸಿಬ್ಬಂದಿಗೆ ಗೊತ್ತಾಯಿತು. ಅವರು ಮಗು ಖರೀದಿಸಿದ್ದ ಸ್ಮಿತಾ ಅವರನ್ನು 2024ರ ಡಿಸೆಂಬರ್ 17ರಂದು ಬೆಳಗಾವಿಗೆ ಕರೆಯಿಸಿದರು. ನಂತರ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಿ, ವಿಚಾರಣೆ ನಡೆಸಿದಾಗ ತಪ್ಪು ಮಾಡಿರುವುದಾಗಿ ಸ್ಮಿತಾ ಒಪ್ಪಿಕೊಂಡಿದ್ದಾರೆ' ಎಂದು ಮಾರ್ಕೆಟ್ ಠಾಣೆ ಪೊಲೀಸರು ತಿಳಿಸಿದ್ದಾರೆ.

ಜಾಲಹಳ್ಳಿ ಕ್ರಾಸ್‌ನ ಚೊಕ್ಕಸಂದ್ರದ ಬಾಡಿಗೆ ಮನೆಯಲ್ಲಿ ಹೋಂ ಗಾರ್ಡ್‌ನಿಂದ ತ್ರಿವಳಿ ಕೊಲೆ

ಮಚ್ಚು ಹಿಡಿದು ಠಾಣೆಗೆ ಬಂದು, ಶರಣಾದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಲಹಳ್ಳಿ ಕ್ರಾಸ್ ಸಮೀಪದ ಚೊಕ್ಕಸಂದ್ರದ ಬಾಡಿಗೆ ಮನೆಯೊಂದರಲ್ಲಿ ಬುಧವಾರ ಸಂಜೆ ಪತ್ನಿ, ಪುತ್ರಿ ಹಾಗೂ ಅತ್ತಿಗೆಯ ಮಗಳನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ ಬಳಿಕ ಆರೋಪಿ ಪೊಲೀಸರಿಗೆ ಶರಣಾಗಿದ್ದಾನೆ. ತ್ರಿವಳಿ ಕೊಲೆ ನಡೆದ ಮನೆಯ ಸುತ್ತಮುತ್ತಲ ನಿವಾಸಿಗಳು ಆತಂಕಗೊಂಡಿದ್ದಾರೆ.

ಪತ್ನಿ ಭಾಗ್ಯಮ್ಮ (38), ಪುತ್ರಿ ನವ್ಯಾ (19) ಹಾಗೂ ಭಾಗ್ಯಮ್ಮ ಅವರ ಅಕ್ಕನ ಮಗಳಾದ ಹೇಮಾವತಿ (22) ಎಂಬವರನ್ನು ಗಂಗರಾಜು ಎಂಬಾತ ಕೊಲೆ ಮಾಡಿದ್ದಾನೆ. ಆರೋಪಿ ಗಂಗರಾಜುನನ್ನು ಪೀಣ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗಂಗರಾಜು, ಪತ್ನಿ ಭಾಗ್ಯಮ್ಮ ಮತ್ತು ಪುತ್ರಿ ನವ್ಯಾ ಜತೆಗೆ ಕಳೆದ ಆರು ವರ್ಷಗಳಿಂದ ಚೊಕ್ಕಸಂದ್ರದ ಬಾಡಿಗೆ ಮನೆಯಲ್ಲಿ ನೆಲಸಿದ್ದ. ಈತ ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ಹೋಂ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ. ಪತ್ನಿ ಗೃಹಿಣಿಯಾಗಿದ್ದು, ಪುತ್ರಿ ಖಾಸಗಿ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ



ಗಂಗರಾಜ್



ಹೇಮಾವತಿ



ನವ್ಯಾ ಹಾಗೂ ಭಾಗ್ಯಮ್ಮ

ವ್ಯಾಸಂಗ ಮಾಡುತ್ತಿದ್ದಳು. ಕೊಲೆಯಾದ ಹೇಮಾವತಿ ಅವರು ಭಾಗ್ಯಮ್ಮ ಅವರ ಅಕ್ಕನ ಮಗಳು. ಇತ್ತೀಚೆಗೆ ವಿಚ್ಛೇದನ ಪಡೆದಿದ್ದ ಹೇಮಾವತಿ ಕೆಲವು ತಿಂಗಳಿಂದ ಚಿಕ್ಕಮ್ಮ ಭಾಗ್ಯಮ್ಮ ಅವರ ಮನೆಯಲ್ಲೇ ನೆಲಸಿದ್ದರು. ಜತೆಗೆ, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

112ಗೆ ಕರೆ ಮಾಡಿದ್ದ ಆರೋಪಿ: 'ಮೂವರು ಸತ್ತಿರುವುದು ಖಚಿತವಾದ ಬಳಿಕ ಆರೋಪಿ ಗಂಗರಾಜು 112 ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ, ಕೊಲೆ ಮಾಡಿರುವುದಾಗಿ ಮಾಹಿತಿ ನೀಡಿದ್ದ. ನಂತರ, ಪೊಲೀಸರಿಗೆ ಶರಣಾಗಲು ಸಿದ್ಧ ಇರುವುದಾಗಿ ಹೇಳಿದ್ದ. ಸಹಾಯವಾಣಿ ಸಿಬ್ಬಂದಿ ತಕ್ಷಣವೇ ಘಟನಾ ಸ್ಥಳದ ವ್ಯಾಪ್ತಿ ಹಾಗೂ ಮಾಹಿತಿಯನ್ನು ಹೊಯ್ಸಳ ಗಸ್ತು ಸಿಬ್ಬಂದಿಗೆ ನೀಡಿದ್ದರು. ಹೊಯ್ಸಳ ಸಿಬ್ಬಂದಿ ಸ್ಥಳಕ್ಕೆ ತೆರಳಿದಾಗ ರಕ್ತದ ಮಡುವಿನಲ್ಲಿ ಮೃತದೇಹಗಳು ಬಿದ್ದಿದ್ದವು' ಎಂದು ಮೂಲಗಳು ತಿಳಿಸಿವೆ.

ಮಚ್ಚು ಹಿಡಿದು ಠಾಣೆಗೆ ಬಂದು ಶರಣು: ಹೊಯ್ಸಳ ಸಿಬ್ಬಂದಿ ಘಟನಾ ಸ್ಥಳಕ್ಕೆ ಬರುವಷ್ಟರಲ್ಲಿ ಆರೋಪಿ ಗಂಗರಾಜು ರಕ್ತದ ಕಲೆ ಅಂಟಿದ್ದ ಮಚ್ಚು ಹಿಡಿದು ಸುಮಾರು 800 ಮೀಟರ್ ದೂರದಲ್ಲಿರುವ ಪೀಣ್ಯ ಪೊಲೀಸ್ ಠಾಣೆಗೆ ನಡೆದು ಬಂದಿದ್ದ. ಬಳಿಕ ಮಚ್ಚನ್ನು ಪೊಲೀಸರ ಮುಂದಿಟ್ಟು ಪತ್ನಿ, ಪುತ್ರಿ ಹಾಗೂ ಸಂಬಂಧಿಯನ್ನು ಕೊಲೆ ಮಾಡಿರುವುದಾಗಿ ಹೇಳಿದ್ದ. ಬಳಿಕ, ಆತನನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು. ಪೀಣ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊಲೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಸದ್ಯ ಆರೋಪಿಯ ವಿಚಾರಣೆ ಮುಂದುವರೆದಿದೆ ಎಂದು ಪಶ್ಚಿಮ ವಲಯದ ಹೆಚ್ಚುವರಿ ಪೊಲೀಸ್ ಕಮಿಷನರ್ ವಿಕಾಸ್ ಕುಮಾರ್ ತಿಳಿಸಿದರು.

ಮರಣೋತ್ತರ ಪರೀಕ್ಷೆ: ಮೃತದೇಹಗಳನ್ನು ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದೆ. ಕುಟುಂಬದವರಿಗೂ ಮಾಹಿತಿ ನೀಡಲಾಗಿದೆ. ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗುವುದು ಎಂದು ಮೂಲಗಳು ತಿಳಿಸಿವೆ. ಘಟನಾ ಸ್ಥಳಕ್ಕೆ ಉತ್ತರ ವಿಭಾಗದ ಡಿಸಿಪಿ ಸೈದುಲ್ ಅದಾವಾತ್ ಅವರು ಭೇಟಿ ನೀಡಿ ಪರಿಶೀಲಿಸಿದರು.

'ಪತ್ನಿಯು ಹೇಳಿದ ಮಾತು ಕೇಳುತ್ತಿರಲಿಲ್ಲ. ಇಬ್ಬರು ಮಕ್ಕಳೂ ನನ್ನ ಮಾತನ್ನು ಕಡೆಗಣಿಸುತ್ತಿದ್ದರು. ಕೆಲಸಕ್ಕೆ ತೆರಳಿದ ಮೇಲೆ ಪತ್ನಿ ಬೇರೊಬ್ಬರ ಜತೆಗೆ ಮೊಬೈಲ್ ಫೋನ್‌ನಲ್ಲಿ ಮಾತನಾಡುತ್ತಿದ್ದಳು. ಇದರಿಂದ ಅನುಮಾನ ಬಂದು ಕೃತ್ಯ ಎಸಗಿರುವುದಾಗಿ ವಿಚಾರಣೆ ವೇಳೆ ಆರೋಪಿ ಹೇಳಿಕೆ ನೀಡಿದ್ದಾನೆ' ಎಂದು ಪೊಲೀಸರು ಹೇಳಿದರು.

ಪೊಲೀಸರಿಗೆ ದೂರು ನೀಡಿದ್ದ ಪತ್ನಿ

ಮನೆಯಲ್ಲಿ ಮೂರು ದಿನಗಳ ಹಿಂದೆ ದಂಪತಿ ಮಧ್ಯೆ ಗಲಾಟೆ ನಡೆದಿತ್ತು. ಪೀಣ್ಯ ಪೊಲೀಸ್ ಠಾಣೆಗೆ ಭಾಗ್ಯಮ್ಮ ಅವರು ಗಲಾಟೆ ಸಂಬಂಧ ದೂರು ನೀಡಿದ್ದರು. ಗಲಾಟೆ ವಿಚಾರನ್ನು ಪೊಲೀಸರಿಗೆ ತಿಳಿಸಿದ್ದೇ ಮೂವರ ಕೊಲೆಗೆ ಕಾರಣ ಇರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಅಪರಾಧ ಸುದ್ದಿ

ಮುಖ್ಯಾಂಶಗಳು

- ವೈಯಕ್ತಿಕ ಕಾರಣಕ್ಕೆ ಕೊಲೆ
- ತಾನೇ ಪೊಲೀಸರಿಗೆ ಕರೆ ಮಾಡಿದ ಹಂತಕ

ವಿಂಡ್‌ಶೀಲ್ಡ್ ಒದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ಕಾರೊಂದನ್ನು ಅಡ್ಡಗಟ್ಟಿದ ಮೂವರು ಆರೋಪಿಗಳು, ಕಾರಿನ ಚಾಲಕನ ಮೇಲೆ ಹಲ್ಲೆಗೆ ಯತ್ನಿಸಿದ ಘಟನೆ ನಗರದಲ್ಲಿ ನಡೆದಿದೆ. ಘಟನೆಗೆ ಸಂಬಂಧಿಸಿದಂತೆ ಮೂವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.


ಡಿಸೆಂಬರ್ 28ರಂದು ಕೋರಮಂಗಲ ಬಳಿ ಘಟನೆ ನಡೆದಿದೆ ಎನ್ನಲಾಗಿದೆ. ಮತ್ತೊಂದು ಕಾರಿನ ಡ್ಯಾಶ್ ಬೋರ್ಡ್ ಕ್ಯಾಮೆರಾದಲ್ಲಿ ಸೆರೆ ಆಗಿರುವ ವಿಡಿಯೊವನ್ನು 'ಎಕ್ಸ್' ಖಾತೆಯಲ್ಲಿ ವ್ಯಕ್ತಿಯೊಬ್ಬರು ಅಪ್‌ಲೋಡ್ ಮಾಡಿದ್ದಾರೆ.

ಅಜಾಗರೂಕತೆಯಿಂದ ಕಾರನ್ನು ಚಾಲನೆ ಮಾಡಿಕೊಂಡು ಚಾಲಕ ತೆರಳುತ್ತಾನೆ. ಕಾರನ್ನು ಹಿಂಬಾಲಿಸಿ ದ್ವಿಚಕ್ರ ವಾಹನದಲ್ಲಿ ಬಂದ ಮೂವರು ನಡುರಸ್ತೆಯಲ್ಲೇ ಕಾರನ್ನು ಅಡ್ಡಗಟ್ಟುತ್ತಾರೆ. ಒಬ್ಬನು ಕಾರು ಚಾಲಕನನ್ನು ಕೆಳಕ್ಕೆ ಇಳಿಯುವಂತೆ ಒತ್ತಾಯಿಸುತ್ತಾನೆ. ಮತ್ತೊಬ್ಬ ಕಾರಿನ ಬಾನೆಟ್ ಮೇಲೇರಿ ವಿಂಡ್ ಶೀಲ್ಡ್‌ಗೆ ಒದ್ದು ಆಕ್ರೋಶ ಹೊರಹಾಕುತ್ತಾನೆ. ಸಿಗ್ನಲ್ ತೆರವಾಗುತ್ತಿದ್ದಂತೆ ಕಾರಿನ ಚಾಲಕ ವೇಗವಾಗಿ ಕಾರು ಚಲಾಯಿಸಿಕೊಂಡು ಮುಂದಕ್ಕೆ ಸಾಗಿದ್ದಾನೆ. ಇವೆಲ್ಲ ಪಕ್ಕದ ಕಾರಿನ ಡ್ಯಾಶ್ ಬೋರ್ಡ್ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಟ್ಯೂಷನ್‌ಗೆ ಬರುತ್ತಿದ್ದ ವಿದ್ಯಾರ್ಥಿನಿ ಅಪಹರಣ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಪಾಠಕ್ಕೆ (ಟ್ಯೂಷನ್) ಬರುತ್ತಿದ್ದ ವಿದ್ಯಾರ್ಥಿನಿಯನ್ನು ಅಪಹರಿಸಿದ್ದ ಆರೋಪಿಯನ್ನು ಜೆ.ಪಿ. ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಅಭಿಷೇಕ್

ಘಟನೆ ನಡೆದು ಒಂದೂವರೆ ತಿಂಗಳ ಬಳಿಕ ಆರೋಪಿ ಕನಕಪುರದ ಅಭಿಷೇಕ್ (25) ಎಂಬಾತನನ್ನು ಪೊಲೀಸರು ಬಂಧಿಸಿ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಿದ್ದಾರೆ.

ಶಾಲೆಯೊಂದರಲ್ಲಿ ಎಸ್ಸೆಸ್ಸೆಲ್ಸಿ ವ್ಯಾಸಂಗ ಮಾಡುತ್ತಿದ್ದ ಬಾಲಕಿಯನ್ನು ರಕ್ಷಿಸಿ ಬಾಲಮಂದಿರದಲ್ಲಿ ಇರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಕನಕಪುರದ ದೊಡ್ಡ ಸಾತೇನಹಳ್ಳಿಯ ನಿವಾಸಿ ಅಭಿಷೇಕ್, ಡಿಪ್ಲೊಮಾ ವ್ಯಾಸಂಗ ಮಾಡಿದ್ದ. ಆರೋಪಿಗೆ ನಾಲ್ಕು ವರ್ಷದ ಹಿಂದೆ ಮದುವೆಯಾಗಿತ್ತು. ದಂಪತಿಗೆ ಮಗುವಿದೆ. ವೈಯಕ್ತಿಕ ಕಾರಣಗಳಿಂದ ಪತ್ನಿಯಿಂದ ಆರೋಪಿ ದೂರವಾಗಿದ್ದ. ಜೆ.ಪಿ.ನಗರದ ಸಾರಕ್ಕಿಯ ಬಾಡಿಗೆ ಮನೆಯೊಂದರಲ್ಲಿ ವಾಸಿಸುತ್ತಿದ್ದ. ಒಂದರಿಂದ ಎಸ್ಸೆಸ್ಸೆಲ್ಸಿವರೆಗಿನ ಶಾಲಾ ಮಕ್ಕಳಿಗೆ ಮನೆಪಾಠ (ಟ್ಯೂಷನ್) ತೆಗೆದುಕೊಳ್ಳುತ್ತಿದ್ದ. ಬಾಲಕಿ ಸಹ ಆರೋಪಿ ಬಳಿಗೆ ಟ್ಯೂಷನ್‌ಗೆ ಬರುತ್ತಿದ್ದಳು. ಬಾಲಕಿಯ ತಂದೆ ಕ್ಯಾಂಟೀನ್ ನಡೆಸುತ್ತಿದ್ದರು' ಎಂದು ಮೂಲಗಳು ಹೇಳಿವೆ.

'ನವೆಂಬರ್ 23ರಂದು ಬಾಲಕಿ ಟ್ಯೂಷನ್‌ಗೆ ಹೋಗಿದ್ದಳು. ರಾತ್ರಿಯಾದರೂ ಮನೆಗೆ ವಾಪಸ್ ಬಂದಿರಲಿಲ್ಲ. ಆರೋಪಿ ಟ್ಯೂಷನ್ ನಡೆಸುತ್ತಿದ್ದ ಸ್ಥಳಕ್ಕೆ ಪೋಷಕರು ಹೋಗಿ ಪರಿಶೀಲಿಸಿದ್ದರು. ಕೊಠಡಿಗೆ ಬೀಗ ಹಾಕಿತ್ತು. ಇದನ್ನು ಕಂಡು ಆತಂಕಗೊಂಡಿದ್ದ ಪೋಷಕರು, ದೂರು ನೀಡಿದ್ದರು. ಬಳಿಕ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

'ಪ್ರಕರಣದ ತನಿಖೆ ವೇಳೆ ಆರೋಪಿ ಮನೆಯನ್ನು ಪರಿಶೀಲನೆ ನಡೆಸಲಾಯಿತು. ಮನೆಯಲ್ಲೇ ಆರೋಪಿ ಮೊಬೈಲ್ ಬಿಟ್ಟು ಹೋಗಿದ್ದ. ಮೊಬೈಲ್ ಜಪ್ತಿ ಮಾಡಿಕೊಂಡು ಪರಿಶೀಲನೆ ನಡೆಸಲಾಯಿತು. ಬಾಲಕಿಯನ್ನು ಪ್ರೀತಿಸುತ್ತಿರುವುದಾಗಿ ಹಾಗೂ ಮದುವೆ ಆಗಿದ್ದೇನೆಂದು ವಿಡಿಯೊ ರೆಕಾರ್ಡ್ ಮಾಡಿಕೊಂಡಿದ್ದ' ಎಂದು ಮೂಲಗಳು ಹೇಳಿವೆ.

'ಆರೋಪಿಯು ಪೊಲೀಸರಿಗೆ ಸಿಕ್ಕಿಬೀಳಬಾರದು ಎಂಬ ಉದ್ದೇಶದಿಂದ ಘಟನೆ ಬಳಿಕ ಫೋನ್, ಫೋನ್ ಪೇ, ಗೂಗಲ್ ಪೇ, ಎಟಿಎಂ ಸೇರಿದಂತೆ ಯಾವುದೇ ಆನ್‌ಲೈನ್ ವಹಿವಾಟು ನಡೆಸುತ್ತಿರಲಿಲ್ಲ. ಇದರಿಂದ ಕಾರ್ಯಾಚರಣೆ ಸ್ವಲ್ಪ ತಡವಾಯಿತು. ಆರೋಪಿಯು ಬಾಲಕಿಯನ್ನು ಕರೆದೊಯ್ಯುವ ದೃಶ್ಯಾವಳಿಗಳು ಸಿ.ಸಿ. ಟಿ.ವಿ. ಕ್ಯಾಮೆರಾದಲ್ಲಿ ಸೆರೆ ಆಗಿದ್ದವು. ಅದನ್ನು ಆಧರಿಸಿಯೇ ಕಾರ್ಯಾಚರಣೆ ನಡೆಸಲಾಯಿತು. ಬಾಲಕಿಯನ್ನು ಅಪಹರಣ ಮಾಡಿಕೊಂಡು ಹೋಗುವುದಕ್ಕೂ ಮುನ್ನ ₹70 ಸಾವಿರ ಹಣವನ್ನು ಬ್ಯಾಂಕ್‌ನಿಂದ ಬಿಡಿಸಿಕೊಂಡು ಇಟ್ಟುಕೊಂಡಿದ್ದ. ಅದನ್ನೇ ಖರ್ಚಿಗೆ ಬಳಕೆ ಮಾಡಿಕೊಂಡಿದ್ದ' ಎಂದು ಮೂಲಗಳು ತಿಳಿಸಿವೆ.

ಪ್ರತ್ಯೇಕ ಘಟನೆ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಜಾಲ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಸೇತುವೆ ಮೇಲೆ ನಡೆದು ತೆರಳುತ್ತಿದ್ದ ವ್ಯಕ್ತಿಗೆ ವಾಹನವೊಂದು ಡಿಕ್ಕಿ ಹೊಡೆದಿದ್ದರಿಂದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತರ ಹೆಸರು ಹಾಗೂ ವಿಳಾಸ ಪತ್ತೆಯಾಗಿಲ್ಲ. ಮೃತ ವ್ಯಕ್ತಿ ಚಿಂದಿ ಆಯುವ ಕೆಲಸ ಮಾಡುತ್ತಿದ್ದರು ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದರು.

'ಮಂಗಳವಾರ ರಾತ್ರಿ 9.30ರ ಸುಮಾರಿಗೆ ನಡೆದು ತೆರಳುತ್ತಿದ್ದರು. ಹಿಂದಿನಿಂದ ವೇಗವಾಗಿ ಬಂದ ವಾಹನ ಅವರಿಗೆ ಡಿಕ್ಕಿ ಹೊಡೆದಿದೆ. ಅಪಘಾತ ಮಾಡಿದ ಚಾಲಕ ವಾಹನ ನಿಲ್ಲಿಸದೇ ಚಾಲನೆ ಮಾಡಿಕೊಂಡು ತೆರಳಿದ್ದಾನೆ' ಎಂದು ಮೂಲಗಳು ತಿಳಿಸಿವೆ.

'ರಸ್ತೆಯಲ್ಲಿರುವ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಪರಿಶೀಲಿಸಲಾಗಿದೆ. ಚಾಲಕನ ಸುಳಿವು ಸಿಕ್ಕಿದ್ದು, ಶೀಘ್ರದಲ್ಲೇ ವಶಕ್ಕೆ ಪಡೆದುಕೊಳ್ಳಲಾಗುವುದು' ಎಂದು ಪೊಲೀಸರು ತಿಳಿಸಿದರು.

ಪೇಂಟರ್ ಸಾವು: ಕೊತ್ತನೂರು ಪೊಲೀಸ್ ಠಾಣಾ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ನಡೆಯುತ್ತಿದ್ದ ದುರಸ್ತಿ ಕಾಮಗಾರಿ ವೇಳೆ ಆಯತಪ್ಪಿ ಬಿದ್ದು ಕಾರ್ಮಿಕರೊಬ್ಬರು ಮೃತಪಟ್ಟಿದ್ದಾರೆ.

ವೈಟ್‌ಫೀಲ್ಡ್ ಗಾಂಧೀಪುರದ ನಿವಾಸಿ ಕೃಷ್ಣ (44) ಮೃತಪಟ್ಟವರು.


'ಕೃಷ್ಣ ಅವರು ಹೆಗಡೆ ನಗರದ ಮುಖ್ಯ ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್‌ನಲ್ಲಿ ಮಂಗಳವಾರ ಸಿಮೆಂಟ್ ಕೆಲಸ ಮಾಡುತ್ತಿದ್ದರು. ಆಗ ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದು ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಗುತ್ತಿಗೆದಾರ ಹಾಗೂ ಅಪಾರ್ಟ್‌ಮೆಂಟ್ ವ್ಯವಸ್ಥಾಪಕ ಸುರಕ್ಷತಾ ಕ್ರಮ ತೆಗೆದುಕೊಳ್ಳದೇ ಕಾಮಗಾರಿ ನಡೆಸುತ್ತಿದ್ದುದು ಘಟನೆಗೆ ಕಾರಣವೆಂದು ಆರೋಪಿಸಿ ಕೃಷ್ಣ ಅವರ ಪತ್ನಿ ದೂರು ನೀಡಿದ್ದಾರೆ. ಕೊತ್ತನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದಲ್ಲಿ ಇಂದು

'38ನೇ ಭಾರತೀಯ ಕೃಷಿ ಮಾರುಕಟ್ಟೆ ವಾರ್ಷಿಕ ಸಮ್ಮೇಳನ'ದ ಉದ್ಘಾಟನೆ: ಅಶೋಕ್ ದಳವಾಯಿ, ಅತಿಥಿಗಳು: ಶರತ್ ಬಚ್ಚೇಗೌಡ, ಎಸ್.ವಿ. ಸುರೇಶ, ಪಿ.ಜಿ. ಚೆಂಗಪ್ಪ, ಎನ್.ಬಿ. ಪ್ರಕಾಶ್, ಆಯೋಜನೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ನಾರ್ಥ್ ಬ್ಲಾಕ್ ಸಭಾಂಗಣ, ಜಿಕೆವಿಕೆ ಆವರಣ, ಬೆಳಿಗ್ಗೆ 10

'ಕನ್ನಡ ಸಾಹಿತ್ಯ– ಸಂವಿಧಾನದ ಆಶಯಗಳು' ರಾಷ್ಟ್ರೀಯ ವಿಚಾರಸಂಕಿರಣದ ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಪುಸ್ತಕ ಬಿಡುಗಡೆ: ಎಲ್. ಹನುಮಂತಯ್ಯ, ಉಪಸ್ಥಿತಿ: ಎಸ್. ಎಂ. ಜಯಕರ, ಅಧ್ಯಕ್ಷತೆ: ಡಿ. ಡೊಮಿನಿಕ್, ಅತಿಥಿಗಳು: ಪಿ.ವಿ. ನಿರಂಜನಾರಾಧ್ಯ, ಸಂತೋಷ ಹಾನಗಲ್ಲ, ಕೆ. ಷರೀಫಾ, ಸುಬ್ಬು ಹೊಲೆಯಾರ್, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಶೂದ್ರ ಪ್ರತಿಷ್ಠಾನ, ಸ್ಥಳ: ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ ಆವರಣ, ಬೆಳಿಗ್ಗೆ 10.30



ಪುರುಷೋತ್ತಮ ಬಿಳಿಮಲೆ

34ನೇ ವಾರ್ಷಿಕೋತ್ಸವ: ಅತಿಥಿಗಳು: ಪುಟ್ಟಣ್ಣ, ಕೆ.ಪಿ. ಪುತ್ತೂರಾಯ, ತುಳಸಿ ಕುಮಾರ್, ಜಿ. ಮಂಜುಳಾದೇವಿ, ಬಿ.ಆರ್. ಪ್ರಸನ್ನಕುಮಾರ್, ಆಯೋಜನೆ: ಆರ್.ಟಿ. ನಗರ ಪಬ್ಲಿಕ್ ಸ್ಕೂಲ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯ್ಯಾಲಿ ಕಾವಲ್, ಬೆಳಿಗ್ಗೆ 10.30

ಡಾ.ಕೆ. ಭುಜಂಗ ಶೆಟ್ಟಿ ಅವರ 'ಮಧುಮೇಹದಿಂದ ಮುಕ್ತಿ' ಪುಸ್ತಕ ಬಿಡುಗಡೆ: ಡಿ.ವೈ. ಚಂದ್ರಚೂಡ್, ಕಲ್ಪನಾ ದಾಸ್, ಉಪಸ್ಥಿತಿ: ಡಾ. ರೋಹಿತ್ ಶೆಟ್ಟಿ, ಡಾ. ನರೇನ್ ಶೆಟ್ಟಿ, ಆಯೋಜನೆ: ನಾರಾಯಣ ನೇತ್ರಾಲಯ, ಸ್ಥಳ: ನಾರಾಯಣ ನೇತ್ರಾಲಯ ಬಿ ಬ್ಲಾಕ್, ನಾಲ್ಕನೇ ಮಹಡಿ, ರಾಜಾಜಿನಗರ, ಬೆಳಿಗ್ಗೆ 10.30



ಡಿ.ವೈ. ಚಂದ್ರಚೂಡ್

ಅತ್ಯುತ್ತಮ ಮಹಿಳಾ ಹೈನುಗಾರ ಪ್ರಶಸ್ತಿ ಪ್ರದಾನ: ಅತಿಥಿಗಳು: ಕೆ. ವೆಂಕಟೇಶ್, ಭೀಮಾ ನಾಯ್ಕ್, ಕೆ.ಎಸ್. ಮಣಿ, ಬಿ. ಶಿವಸ್ವಾಮಿ, ಅಧ್ಯಕ್ಷತೆ: ಆರ್.ಎಸ್. ಸುಧಿ, ಆಯೋಜನೆ: ಭಾರತೀಯ ಡೇರಿ ಸಂಘ, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 10.30

ಸ್ವಾಮಿ ವಿವೇಕಾನಂದ ಜಯಂತಿ, ರಾಷ್ಟ್ರೀಯ ಯುವ ದಿನ: ಅತಿಥಿಗಳು: ಲಿಂಗರಾಜ ಗಾಂಧಿ, ಎನ್. ತಿಪ್ಪೇಸ್ವಾಮಿ, ನರಸಿಂಹಮೂರ್ತಿ, ಆಯೋಜನೆ: ಸಮರ್ಥ ಭಾರತ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 11

ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ: nagaradalli_indu@prajavani.co.in

'ನಗರ ಪ್ರವಾಹ' ಸಂವಾದ: ಭಾಗವಹಿಸುವವರು: ವಿಶ್ವನಾಥ್ ಶ್ರೀಕಂಠಯ್ಯ, ಅರವಿಂದ್ ಉಣ್ಣಿ, ಆಯೋಜನೆ: ಹಸಿರು ದಳ, ಸ್ಥಳ: ಸಮಗತ ಫೌಂಡೇಶನ್, ಮಧ್ಯಾಹ್ನ 2ರಿಂದ

'ಸಮುದ್ಭವ' ವಾರ್ಷಿಕೋತ್ಸವ: ಅತಿಥಿಗಳು: ವಿ. ರಾಧಾ, ಅನಿಲ್ ಕುಮಾರ್, ಲತಾ ರಮೇಶ್, ಆಯೋಜನೆ: ಸಮುದ್ಭವ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

ಸುಮಂಗಲಿ ಪೂಜೆ: '27 ಗಂಟೆಗಳ ಕಾಲ ವಿಷ್ಣುಸಹಸ್ರನಾಮ ಪಠಣ': ಆಯೋಜನೆ: ಪಾಂಡುರಂಗ ವಿಷ್ಣುಸಹಸ್ರನಾಮ ಮಂಡಳಿ, ಸ್ಥಳ: ಮಲ್ಲೇಶ್ವರ ಆಟದ ಮೈದಾನದ ಎದುರು, ಸಂಜೆ 5

'ಆಧುನಿಕ ಜೀವನಶೈಲಿಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳು' ಉಪನ್ಯಾಸ: ಡಾ.ಸಿ.ಎಲ್. ಶಿವಮೂರ್ತಿ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಧನುರ್ಮಾಸದ ಸಂಗೀತ ರುದ್ರ ಸಹಿತ ಇಷ್ಟಲಿಂಗ ಮಹಾಶಿವ ಪೂಜೆ, ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಪ್ರವಚನ: 'ಪಂಚಾಚಾರ್ಯಶ್ರೀ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು, ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರು, ಅಧ್ಯಕ್ಷತೆ: ಬಿ.ವೈ. ವಿಜಯೇಂದ್ರ, ಪ್ರಶಸ್ತಿ ಪುರಸ್ಕೃತರು: ಭರತ್ ಮಣಿಜಂಗಮ್, ಆಯೋಜನೆ: ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ಸ್ಥಳ: ಜಗಜ್ಯೋತಿ ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಸಂಜೆ 6ರಿಂದ

ವಾರ್ಷಿಕೋತ್ಸವ: ಭಕ್ತಿ ಸಂಗೀತ: ಗಾಯನ: ದೇಬಾಂಜನಿ ದತ್ತ ಮತ್ತು ತಂಡ, ತಾಳ: ಸುಮನ್ ಮುಖ್ಯೋಪಾಧ್ಯಾಯ, ಆಯೋಜನೆ ಮತ್ತು ಸ್ಥಳ: ರಾಮಕೃಷ್ಣ ಮಠ, ಬಸವನಗುಡಿ, ಸಂಜೆ 5.30ರಿಂದ

‘ಎಸ್‌ಟಿಆರ್‌ಆರ್ ತ್ವರಿತ ಅನುಷ್ಠಾನ’

ಮೌಲ್ಯಮಾಪನ ಸಮಿತಿಗೆ ₹4,750 ಕೋಟಿ ಕಾಮಗಾರಿ ಪ್ರಸ್ತಾವನೆ: ಸಚಿವ ನಿತಿನ್ ಗಡ್ಕರಿ ಭರವಸೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಉಪನಗರ ವರ್ತುಲ ರಸ್ತೆ ಯೋಜನೆಯ (ಎಸ್‌ಟಿಆರ್‌ಆರ್) ಐದು ಪ್ಯಾಕೇಜ್‌ಗಳ (144 ಕಿ.ಮೀ) ₹4,750 ಕೋಟಿಯ ಕಾಮಗಾರಿಯ ಪ್ರಸ್ತಾವನೆಯನ್ನು ‘ಸಾರ್ವಜನಿಕ– ಖಾಸಗಿ ಸಹಭಾಗಿತ್ವದ ಮೌಲ್ಯಮಾಪನ ಸಮಿತಿ’ಯ ಮುಂದೆ ಮಂಡಿಸಿ ತ್ವರಿತವಾಗಿ ಅನುಷ್ಠಾನ ಗೊಳಿಸುವುದಾಗಿ ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅಭಯ ನೀಡಿದರು.

ಬೆಂಗಳೂರು ನಗರದ ವಾಹನ ದಟ್ಟಣೆ ತಗ್ಗಿಸುವ ಈ ಯೋಜನೆ ಬಗ್ಗೆ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಗಡ್ಕರಿ ಅವರೊಂದಿಗೆ ಬುಧವಾರ ಚರ್ಚಿಸಿದರು. ನನೆಗುದಿಗೆ ಬಿದ್ದಿದ್ದ ಈ ಯೋಜನೆಗೆ ಶೀಘ್ರ ಚಾಲನೆ ನೀಡುವಂತೆ ಕುಮಾರಸ್ವಾಮಿ ಮನವಿ ಮಾಡಿದರು.

ಉಪನಗರ ವರ್ತುಲ ರಸ್ತೆ ಯೋಜನೆಯು 2013ರಲ್ಲಿಯೇ ಚಾಲನೆ ಪಡೆದಿತ್ತು. ಆದರೆ, ನಾನಾ ಕಾರಣಗಳಿಂದ ಅದು ನನೆಗುದಿಗೆ ಬಿದ್ದಿತ್ತು. ಬೆಂಗಳೂರು ಸುತ್ತಮುತ್ತ ಇರುವ ಎಂಟು ಕೈಗಾರಿಕಾ ಪಟ್ಟಣಗಳಿಗೆ ಸಂಪರ್ಕ ಕಲ್ಪಿಸುವ ಯೋಜನೆ ಇದಾಗಿದೆ.



ದಾಬಸ್ ಪೇಟೆ ಸ್ಯಾಟಲೈಟ್ ರಿಂಗ್ ರೋಡ್ –ಪ್ರಜಾವಾಣಿ ಚಿತ್ರ

ಐದು ಪ್ಯಾಕೇಜ್‌ಗಳು

- **ಮೊದಲ ಪ್ಯಾಕೇಜ್:** ನೆಲಮಂಗಲ ತಾಲ್ಲೂಕಿನ ಓಬಳಾಪುರದಿಂದ ಮಾಗಡಿ ತಾಲ್ಲೂಕಿನ ಸೋಮಕ್ಕನಮುತ್ತದ ವರೆಗೆ. ಒಟ್ಟು 46.30 ಕಿ.ಮೀ. ಟೆಂಡರ್ ಮೊತ್ತ ₹1,419 ಕೋಟಿ.
- **ಎರಡನೇ ಪ್ಯಾಕೇಜ್:** ಸೋಮಕ್ಕನಮುತ್ತದಿಂದ ಕುಣಿಗಲ್‌ವರೆಗೆ. 32.7 ಕಿ.ಮೀ. ಟೆಂಡರ್ ಮೊತ್ತ ₹825 ಕೋಟಿ.
- **ಮೂರನೇ ಪ್ಯಾಕೇಜ್:** ಕುಣಿಗಲ್‌ನಿಂದ ಕನಕಪುರ ತಾಲ್ಲೂಕಿನ ತಟ್ಟೆಕೆರೆ ವರೆಗೆ 33.64 ಕಿ.ಮೀ. ಕಾಮಗಾರಿ. ಟೆಂಡರ್ ಮೊತ್ತ ₹978 ಕಿ.ಮೀ.
- **ನಾಲ್ಕನೇ ಪ್ಯಾಕೇಜ್:** ತಟ್ಟೆಕೆರೆಯಿಂದ ಆನೇಕಲ್ ತಾಲ್ಲೂಕಿನ ಬಗ್ಗನದೊಡ್ಡಿವರೆಗೆ 8.34 ಕಿ.ಮೀ. ಕಾಮಗಾರಿ. ಟೆಂಡರ್ ಮೊತ್ತ ₹1,018 ಕೋಟಿ.
- **ಐದನೇ ಪ್ಯಾಕೇಜ್:** ಬಗ್ಗನದೊಡ್ಡಿಯಿಂದ ತಮಿಳುನಾಡಿನ ಹೊಸೂರು ತಾಲ್ಲೂಕಿನ ಎಸ್.ಮುದುಗದಪಲ್ಲಿವರೆಗೆ 23.27 ಕಿ.ಮೀ. ಕಾಮಗಾರಿ. ಟೆಂಡರ್ ಮೊತ್ತ ₹507 ಕೋಟಿ.

ನಾಲ್ಕರಿಂದ ಆರು ಪಥಗಳ ಈ ಯೋಜನೆಯು ದಾಬಸ್‌ಪೇಟೆ, ದೊಡ್ಡ-ಬಳ್ಳಾಪುರ, ದೇವನಹಳ್ಳಿ, ಸೂಲಿಬೆಲೆ, ಹೊಸಕೋಟೆ, ಆನೇಕಲ್, ಕನಕಪುರ, ರಾಮನಗರ, ಮಾಗಡಿ ಸೇರಿದಂತೆ ಬೆಂಗಳೂರು ಮತ್ತು ಸುತ್ತಮುತ್ತಲಿನ ಉಪನಗರ ಪ್ರದೇಶಗಳನ್ನು ಸಂಪರ್ಕಿಸುತ್ತದೆ. ಹಾಗೂ ಬೆಂಗಳೂರು - ಚೆನ್ನೈ ಎಕ್ಸ್‌ಪ್ರೆಸ್ ಹೈವೇಯನ್ನು ಕೂಡುತ್ತದೆ. ಜತೆಗೆ ತಮಿಳುನಾಡಿನ ಹೊಸೂರನ್ನೂ ಸಂಪರ್ಕಿಸುತ್ತದೆ.

ಈ ಉಪನಗರ ವರ್ತುಲ ರಸ್ತೆಯನ್ನು ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ಹೆದ್ದಾರಿಗೆ ಸಂಪರ್ಕಗೊಳಿಸಲಾಗುವುದು. ಕೈಗಾರಿಕೆಗಳಿಗೆ ಸರಕು ಸರಂಜಾಮು ಸಾಗಿಸುವ ಯಾವುದೇ ಬೃಹತ್ ವಾಹನ ಬೆಂಗಳೂರು ನಗರದೊಳಕ್ಕೆ ಪ್ರವೇಶ ಮಾಡದಂತೆ ತಡೆಯುವುದೇ ಈ ಯೋಜನೆಯ ಉದ್ದೇಶ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಿಗೆ ಈ ಯೋಜನೆಯಿಂದ ಹೆಚ್ಚು ಲಾಭವಾಗಲಿದೆ.

ಭೂಸಂತ್ರಸ್ತರಿಗೆ ಶೀಘ್ರ ಪರಿಹಾರ: ‘ಎಂಟು ವರ್ಷಗಳಿಂದ ಬಾಕಿ ಇದ್ದ ಭೂಸ್ವಾಧೀನ ಪರಿಹಾರದ ಹಣವನ್ನು ಕೂಡಲೇ ರೈತರಿಗೆ ಪಾವತಿ ಮಾಡಲು ಸಚಿವ ಗಡ್ಕರಿ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ರಾಮನಗರ ಸೇರಿ ವಿವಿಧ ಜಿಲ್ಲೆಗಳಲ್ಲಿ ಭೂಮಿ ಕಳೆದುಕೊಂಡಿರುವ ರೈತರಿಗೆ ಅನುಕೂಲವಾಗಲಿದೆ’ ಎಂದು ಕುಮಾರಸ್ವಾಮಿ ಅವರು ಹೇಳಿದರು.

‘4ರಿಂದ 6 ಪಥ ಹೊಂದಿರುವ ಸಂಪೂರ್ಣ ನಿಯಂತ್ರಿತ ಪ್ರವೇಶ ವ್ಯವಸ್ಥೆಯನ್ನು ಹೊಂದಿರುವ ಈ ಹೆದ್ದಾರಿಯು ಯಾವುದೇ ಅಡೆತಡೆಗಳಿಲ್ಲದೆ ಸಂಚಾರ ಸೌಲಭ್ಯ ಕಲ್ಪಿಸಲಿದೆ. ಬೆಂಗಳೂರು ಸುತ್ತಲಿನ ಉಪ ನಗರಗಳ ಮೂಲಕ ರಸ್ತೆ ಹಾದು ಹೋಗಲಿದೆ. ಇದು ನಗರದ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲಿದೆ’ ಎಂದು ಸಚಿವರು ತಿಳಿಸಿದರು.

ಈ ಯೋಜನೆಯಡಿ ₹17 ಸಾವಿರ ಕೋಟಿ ಮೊತ್ತದಲ್ಲಿ 285 ಕಿ.ಮೀ. ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಲಾಗುತ್ತಿದೆ. ದಾಬಸ್‌ಪೇಟೆ–ದೊಡ್ಡಬಳ್ಳಾಪುರ ನಡುವಿನ ಪ್ಯಾಕೇಜ್ 1ರ (42 ಕಿ.ಮೀ), ದೊಡ್ಡಬಳ್ಳಾಪುರ–ಹೊಸಕೋಟೆ ನಡುವಿನ ಕಾಮಗಾರಿ (37 ಕಿ.ಮೀ) ಈಗಾಗಲೇ ಪೂರ್ಣಗೊಂಡಿದೆ. ಕರ್ನಾಟಕ ಹಾಗೂ ತಮಿಳುನಾಡು ಗಡಿಯ 20 ಕಿ.ಮೀ. ಕಾಮಗಾರಿ ಶೇ 42ರಷ್ಟು ಪ್ರಗತಿ ಸಾಧಿಸಿದೆ. ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್‌ವೇಯ 6 ಕಿ.ಮೀ ಕಾಮಗಾರಿ ಬಹುತೇಕ ಮುಗಿದಿದೆ.


ತಿರುಪತಿ ದೇವಸ್ಥಾನದಲ್ಲಿ ಬುಧವಾರ ನೂರಾರು ಭಕ್ತರು ಸೇರಿದ್ದು, ನೂಕುನುಗ್ಗಲು ಉಂಟಾಯಿತು –ಪಿಟಿಐ ಚಿತ್ರ

ತಿರುಪತಿಯಲ್ಲಿ ಕಾಲ್ತುಳಿತ, 6 ಸಾವು

ಒಂದನೇ ಪುಟದಿಂದ...

ಮೃತರ ಪೈಕಿ ಒಬ್ಬರ ಗುರುತು ಸಿಕ್ಕಿದೆ. ಗೇಟು ತೆರೆಯುತ್ತಿದ್ದಂತೆ ಎಲ್ಲರೂ ನುಗ್ಗಿದರು. ಹೀಗಾಗಿ ಕಾಲ್ತುಳಿತ ಉಂಟಾಯಿತು ಎಂದು ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಅಧ್ಯಕ್ಷ ಬಿ.ಆರ್.ನಾಯ್ಡು ತಿಳಿಸಿದ್ದಾರೆ.

ಪ್ರತಿ ವರ್ಷ ಇಲ್ಲಿನ ದೇವಸ್ಥಾನದಲ್ಲಿ ‘ವೈಕುಂಠ ದ್ವಾರ ದರ್ಶನ’ಕ್ಕಾಗಿ ದೇಶದ ವಿವಿಧೆಡೆಗಳಿಂದ ನೂರಾರು ಸಂಖ್ಯೆಯಲ್ಲಿ ಭಕ್ತರು ಬರುತ್ತಾರೆ.

‘ದೇವಸ್ಥಾನ ಆವರಣದ ವಿಷ್ಣು ನಿವಾಸ ಬಳಿ ಆದ ನೂಕುನುಗ್ಗಲಿನಲ್ಲಿ ಆರು ಮಂದಿ ಭಕ್ತರು ಮೃತಪಟ್ಟಿದ್ದು, ನನಗೆ ತೀವ್ರ ನೋವಾಗಿದೆ’ ಎಂದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿದ್ದಾರೆ.

ಟೆಲಿಕಾನ್ಫರೆನ್ಸ್ ಮೂಲಕ ಅವಘಡದ ಮಾಹಿತಿ ಪಡೆದಿರುವ ಮುಖ್ಯಮಂತ್ರಿಯವರು, ಗುರುವಾರ ಸ್ಥಳಕ್ಕೆ ಭೇಟಿ ನೀಡಲಿದ್ದಾರೆ. ಇಂತಹ ಘಟನೆಗಳು ಮರುಕಳಿಸದಂತೆ ಜಾಗ್ರತೆ ವಹಿಸಬೇಕು ಎಂದು ಅವರು ಸೂಚಿಸಿದ್ದಾರೆ ಎಂದು ಟಿಟಿಡಿ ಅಧ್ಯಕ್ಷರು ತಿಳಿಸಿದ್ದಾರೆ.

‘ಕೆಲವು ಲೋಪಗಳಾಗಿದ್ದು, ಕಠಿಣ ಕ್ರಮ ಕೈಗೊಳ್ಳಲಿದ್ದೇವೆ. ಭಕ್ತರ ಸಾವಿಗಾಗಿ ದೇವರ ಕ್ಷಮೆ ಕೋರುತ್ತೇವೆ’ ಎಂದು ಟಿಟಿಡಿ ಆಡಳಿತ ಮಂಡಳಿ ಸದಸ್ಯ ಭಾನುಪ್ರಕಾಶ್ ಪ್ರತಿಕ್ರಿಯಿಸಿದರು.

ದುರಂತ ಸ್ಥಳದಲ್ಲಿನ ಗೊಂದಲದ ಸ್ಥಿತಿ, ತೀವ್ರವಾಗಿ ಗಾಯಗೊಂಡವರಿಗೆ ಪೊಲೀಸ್ ಸಿಬ್ಬಂದಿಯೇ ಸಿಪಿಆರ್ (ಉಸಿರಾಟ ಕುರಿತು ಪ್ರಾಥಮಿಕ ಆರೈಕೆ) ಮಾಡುತ್ತಿರುವುದು ಹಾಗೂ ಗಾಯಾಳುಗಳನ್ನು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ಯುತ್ತಿ-ರುವ ದೃಶ್ಯಗಳಿರುವ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿವೆ.


ಭೂಸುರಕ್ಷಾ ಕಾರ್ಯಕ್ರಮಕ್ಕೆ ಚಾಲನೆ

‘ದಾಖಲೆ ಕೊಠಡಿಗೆ ಬೆಂಕಿಯಿಟ್ಟರು’!

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ‘ನನ್ನ ಮತಕ್ಷೇತ್ರದ ಕೆಲ ಭಾಗಗಳು ಹಿಂದೆ ದೇವನಹಳ್ಳಿಗೆ ಸೇರುತ್ತಿತ್ತು. ಯಾರ‍್ಯಾರೊ ಅಲ್ಲಿ ಕಂದಾಯ ದಾಖಲೆ ಸೃಷ್ಟಿಸಿ ಕೊಂಡಿದ್ದರು. ಕೈ ಬರಹದ ಪಹಣಿ ಇದ್ದವು. ದಾಖಲೆಗಳ ಕೊಠಡಿಗೆ ಯಾರೊ ಬೆಂಕಿ ಇಟ್ಟು ಸುಟ್ಟು ಹಾಕಿದರು. ಅಲ್ಲಿ ಕೆಲವು ದಾಖಲೆಗಳೇ ಇಲ್ಲ!’

‘ರೆಕಾರ್ಡ್ ರೂಮ್ ಸಿಬ್ಬಂದಿಗೆ ವಾರಸುದಾರರಿಲ್ಲದ ದಾಖಲೆ ಪತ್ತೆ ಮಾಡುವುದು ಸುಲಭ. ಜಿಲ್ಲೆಯ ತಾಲ್ಲೂಕು ಒಂದರ ದಾಖಲೆಗಳ ಕೊಠಡಿಯಲ್ಲಿ ಕೆಲಸ ನಿರ್ವಹಿಸುವ ಸಿಬ್ಬಂದಿ ವಾರಸುದಾರರು ಇಲ್ಲದಿರುವ ದಾಖಲೆ ಪತ್ತೆ ಮಾಡಿ ಅದನ್ನು ತನ್ನ ತಾಯಿಯ ಹೆಸರಿಗೆ ಮಾಡಿಕೊಂಡಿದ್ದ.’


ಕೃಷ್ಣ ಬೈರೇಗೌಡ

‘ಬೆಂಗಳೂರಿನಲ್ಲಿ ರೆಕಾರ್ಡ್ ರೂಮ್ ಸಿಬ್ಬಂದಿ ಕಚೇರಿಯಲ್ಲಿ ಸಿಗುವುದಿಲ್ಲ. ಅವರದ್ದೇ ಖಾಸಗಿ ಕಚೇರಿ ಹೊಂದಿರುತ್ತಾರೆ. ಅವರನ್ನು ಅಲ್ಲಿ ಭೇಟಿ ಮಾಡಿ ‘ಚೆನ್ನಾಗಿ’ ನೋಡಿಕೊಂಡರೆ ದಾಖಲೆ ಸಿಗುತ್ತದೆ.’

–ಹೀಗೆ ಕಂದಾಯ ಇಲಾಖೆ ವ್ಯವಸ್ಥೆಯ ಹುಳುಕು ಬಿಚ್ಚಿಟ್ಟವರು ಖುದ್ದು ಕಂದಾಯ ಸಚಿವ ಕೃಷ್ಣ ಬೈರೇಗೌಡ. ರಾಜ್ಯದಾದ್ಯಂತ ಭೂ-ಸುರಕ್ಷಾ ಯೋಜನೆಯಡಿ ಕಂದಾಯ ದಾಖಲೆ ಗಣಕೀಕರಣ ಕಾರ್ಯಕ್ರಮಕ್ಕೆ ಬುಧವಾರ ಜಿಲ್ಲೆಯ ಗುಡಿಬಂಡೆ ತಾಲ್ಲೂಕು ಕಚೇರಿಯಲ್ಲಿ ಚಾಲನೆ ನೀಡಿ ಅವರು ಮಾತನಾಡಿದರು.

ದಾಖಲೆಗಳು ಇದ್ದರೆ ತಾನೇ ಇದು ಸುಳ್ಳು, ನೈಜ ಎನ್ನುವುದು ಗೊತ್ತಾಗುತ್ತದೆ. ಸುಳ್ಳು ದಾಖಲೆ ಸೃಷ್ಟಿಸಿದವರಿಗೆ ಯಾವ ರೀತಿ ವ್ಯವಸ್ಥೆ ಇದೆ ಎನ್ನುವುದು ಸಹ ಗೊತ್ತಿರುತ್ತದೆ. ದಾಖಲೆಗಳಿಗೆ ಬೆಂಕಿಯಿಟ್ಟು ಸುಟ್ಟು ಹಾಕಿದ್ದರ ಬಗ್ಗೆ ಜನರು ಹೇಳುವುದನ್ನು ಕೇಳಿದ್ದೇನೆ ಎಂದರು.

ಇದೆಲ್ಲವನ್ನೂ ನೇರವಾಗಿ ಹೇಳಿದರೆ ಅಧಿಕಾರಿಗಳಿಗೆ ಸಿಟ್ಟು ಬರುತ್ತದೆ. ರೈತರಿಗೆ ದಾಖಲೆ ಪಡೆಯಲು ಸಮಸ್ಯೆಗಳು ಎದುರಾಗಬಾರದು ಎನ್ನುವ ದೃಷ್ಟಿಯಿಂದ ಈ ಯೋಜನೆ ಜಾರಿಗೊಳಿ-ಸಲಾಗಿದೆ ಎಂದು ತಿಳಿಸಿದರು.

ಮಕ್ಕಳ ಜತೆ ಅಸಭ್ಯ ವರ್ತನೆ: ಶಿಕ್ಷಕ ವಶಕ್ಕೆ

ಮಧುಗಿರಿ: ವಿದ್ಯಾರ್ಥಿನಿಯರೊಂದಿಗೆ ಅಸಭ್ಯವಾಗಿ ವರ್ತಿಸಿದ ಆರೋಪದಲ್ಲಿ ತಾಲ್ಲೂಕಿನ ದೊಡ್ಡದಾಳವಟ್ಟ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಎ.ಆರ್.ಸಂಜೀವಮೂರ್ತಿ ಅವರನ್ನು ಬುಧವಾರ ಕೊಡಿಗೇನಹಳ್ಳಿ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಶಿಕ್ಷಕ ಅಸಭ್ಯವಾಗಿ ವರ್ತಿಸುತ್ತಾರೆ ಎಂದುವಿದ್ಯಾರ್ಥಿನಿಯರು ಮುಖ್ಯ ಶಿಕ್ಷಕ ಹನುಮಯ್ಯ ಬಳಿ ತಮ್ಮ ಅಳಲು ತೋಡಿಕೊಂಡಿದ್ದರು.

ಈ ವಿಷಯವನ್ನು ಮುಖ್ಯ ಶಿಕ್ಷಕ, ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು, ಅದರಂತೆ ಶಿಕ್ಷಕನ ವಿರುದ್ಧ ಕೊಡಿಗೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಶಿಕ್ಷಕ ದೂರು ನೀಡಿದ್ದರು.

ಸಾಕಾರಗೊಳ್ಳದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಆಶಯ

ವಿಲೀನ ವಿಳಂಬ; ಸಂಶೋಧನೆಗೆ ಗ್ರಹಣ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನದಡಿ ಸಂಶೋಧನಾ ಚಟುವಟಿಕೆಗಳಿಗಾಗಿ ಅಸ್ತಿತ್ವಕ್ಕೆ ಬಂದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ಐದು ವರ್ಷಗಳಾದರೂ ಸಂಶೋಧನಾ ಕಾರ್ಯಗಳೇ ಆರಂಭವಾಗಿಲ್ಲ.

ಮಹಾರಾಣಿ ವಿಜ್ಞಾನ ಕಾಲೇಜು, ವಿಎಚ್‌ಡಿ ಕೇಂದ್ರ ಗೃಹ ವಿಜ್ಞಾನ ಕಾಲೇಜು, ಮಹಾರಾಣಿ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಸೇರಿ ಮೂರು ಮಹಿಳಾ ಕಾಲೇಜುಗಳನ್ನು ಸೇರಿಸಿ 2019ರಲ್ಲಿ ವಿಶ್ವವಿದ್ಯಾಲಯ ರಚಿಸಿದಾಗ ಪಿಎಚ್‌.ಡಿ. ಮಾರ್ಗದರ್ಶನಕ್ಕೆ ಅರ್ಹರಾದ 234 ಅಧ್ಯಾಪಕರು ಇದ್ದರು. ಅಂದಿನಿಂದ ಇಲ್ಲಿಯವರೆಗೂ ಒಬ್ಬ ವಿದ್ಯಾರ್ಥಿಗೂ ಸಂಶೋಧನೆ ಕೈಗೊಳ್ಳಲು ಸಾಧ್ಯವಾಗಿಲ್ಲ. ಪ್ರತಿಭಾವಂತ ಮಾವನಸಂಪನ್ಮೂಲ ವ್ಯರ್ಥವಾಗುತ್ತಿರುವುದಕ್ಕೆ ಅಧ್ಯಾಪಕರ ವಲಯವೂ ಆಕ್ಷೇಪ ವ್ಯಕ್ತಪಡಿಸಿದೆ.

ಉನ್ನತ ಶಿಕ್ಷಣ ನೀಡುವ ಆಯ್ದ ಅತ್ಯುತ್ತಮ ಸರ್ಕಾರಿ ಕಾಲೇಜುಗಳನ್ನು ಡೀಮ್ಡ್ ವಿಶ್ವವಿದ್ಯಾಲಯಗಳ ಮಾದರಿಯಲ್ಲಿ ಅಭಿವೃದ್ಧಿಪಡಿಸಿ, ಭಾರತದ ಶಿಕ್ಷಣದ ಗುಣಮಟ್ಟವನ್ನು ಅಂತರರಾಷ್ಟ್ರೀಯ ವಿಶ್ವವಿದ್ಯಾಲಯಗಳ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಕೇಂದ್ರ ಸರ್ಕಾರ 2009–10ನೇ ಸಾಲಿನಲ್ಲಿ ಅರ್ಜಿ ಆಹ್ವಾನಿಸಿತ್ತು.

ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ, ಅದಕ್ಕೆ ಪೂರಕವಾದ ಪಠ್ಯಕ್ರಮ ರಚನೆ, ಅಧ್ಯಾಪಕರಿಗೆ ತರಬೇತಿ, ಹೊಸ ಬಗೆಯ ಕೋರ್ಸ್‌ಗಳ ರಚನೆ ಹಾಗೂ ವಿಜ್ಞಾನ, ತಂತ್ರಜ್ಞಾನ ಸೇರಿದಂತೆ ವಿವಿಧ ವಿಷಯಗಳ ಕಲಿಕೆಗೆ ನುರಿತ, ಅನುಭವಿ ಅಧ್ಯಾಪಕರನ್ನು ಬಳಸಿಕೊಳ್ಳುವುದು. ಕಾಲೇಜು ಕ್ಯಾಂಪಸ್ ಒಳಗೆ ಪದವಿ ವ್ಯಾಸಂಗ ಮಾಡುವಾಗಲೇ ವಿದ್ಯಾರ್ಥಿ-ಗಳನ್ನು ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಸಲು ಆಯಾ ಕಾಲೇಜುಗಳಿಗೆ ಸ್ವಾಯತ್ತೆ ನೀಡುವುದು ಸರ್ಕಾರಿ ಡೀಮ್ಡ್ ವಿಶ್ವವಿದ್ಯಾಲಯಗಳ ಸ್ಥಾಪನೆಯ ಧ್ಯೇಯೋದ್ದೇಶವಾಗಿತ್ತು.

ಅಗತ್ಯ ಮೂಲಸೌಕರ್ಯ, ಶ್ರೇಷ್ಠ ಅಧ್ಯಾಪಕ ವೃಂದ ಸೇರಿದಂತೆ ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿಯಿಂದ (ನ್ಯಾಕ್) ಉನ್ನತ ಗ್ರೇಡ್ ಪಡೆದ ದೇಶದ ಹಲವು ಕಾಲೇಜುಗಳು ವಿಶ್ವವಿದ್ಯಾಲಯದ ಸ್ಥಾನಮಾನಕ್ಕಾಗಿ ಅರ್ಜಿ ಸಲ್ಲಿಸಿದ್ದವು. ಅರ್ಹತೆಯ ಆಧಾರದ ಮೇಲೆ ಮಹಿಳಾ ವಿದ್ಯಾರ್ಥಿಗಳನ್ನೇ ಒಳಗೊಂಡಿದ್ದ ಕಾಶ್ಮೀರ ಹಾಗೂ ಬೆಂಗಳೂರಿನ ಮಹಾರಾಣಿ ಕಾಲೇಜುಗಳಿಗೆ ಮಾತ್ರ ಕ್ಲಸ್ಟರ್ ವಿಶ್ವವಿದ್ಯಾಲಯದ ಸ್ಥಾನ ಸಿಕ್ಕಿತ್ತು. ರಾಜ್ಯ ಸರ್ಕಾರ 2018ರಲ್ಲಿ ಕಾಯ್ದೆ ರೂಪಿಸಿ, 2019ರಲ್ಲಿ ಅಸ್ತಿತ್ವಕ್ಕೆ ತಂದಿತ್ತು. ಆ ವರ್ಷ ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನದಡಿ ₹50 ಕೋಟಿ, ನಂತರ ₹20 ಕೋಟಿ ಬಿಡುಗಡೆಯಾಗಿತ್ತು. ರಾಜ್ಯ ಸರ್ಕಾರ ಪ್ರತಿ ವರ್ಷ ₹1.5 ಕೋಟಿ ನೀಡುತ್ತಿದೆ.

‘ವಿಶ್ವವಿದ್ಯಾಲಯ ಅನುದಾನ ಆಯೋಗದ ನಿಯಮದ ಪ್ರಕಾರ ಸಂಶೋಧನೆಗಳಿಗೆ ಅನುದಾನ ಪಡೆಯಲು 2ಎಫ್ ಮಾನ್ಯತೆ ಇರಬೇಕು. ಪಿಎಚ್‌.ಡಿ ಮಾರ್ಗದರ್ಶನ ಮಾಡಲು ಅರ್ಹತೆ ಇರುವ ಪ್ರಾಧ್ಯಾಪಕ, ಸಹ ಪ್ರಾಧ್ಯಾಪಕರು ಇರಬೇಕು. ಸರ್ಕಾರ ವಿಲೀನ ಪ್ರಕ್ರಿಯೆ ಪೂರ್ಣಗೊಳಿಸದ ಕಾರಣ 234 ಅರ್ಹ ಪ್ರಾಧ್ಯಾಪಕರಿದ್ದರೂ, ಸಂಶೋಧನಾ ಕಾರ್ಯ ಆರಂಭಿಸಲು ಸಾಧ್ಯವಾಗಲಿಲ್ಲ’ ಎನ್ನುತ್ತಾರೆ ಕನ್ನಡ ಪ್ರಾಧ್ಯಾಪಕ ಕೆ.ವೈ. ನಾರಾಯಣಸ್ವಾಮಿ.

ವಿ.ವಿ ಸ್ಥಾಪನೆಯ ನಂತರ ಎಐ ಸೇರಿದಂತೆ ಹೊಸ ಕೋರ್ಸ್‌ಗಳು ಆರಂಭವಾಗಿವೆ. ಗುಣಮಟ್ಟದ ಶಿಕ್ಷಣ ದೊರೆಯುತ್ತಿದೆ. ಆದರೆ, ಸಂಶೋಧನೆಗಳು ಸ್ಥಗಿತವಾಗಿವೆ.
ಎಂ.ಎಸ್. ಆಶಾದೇವಿ, ಪ್ರಾಧ್ಯಾಪಕಿ, ಮಹಾರಾಣಿ ಕ್ಲಸ್ಟರ್ ವಿವಿ

ವಿ.ವಿಗೆಸ್ವಾಯತ್ತತೆ ನೀಡುವ ಹಾಗೂ ಅಧ್ಯಾಪಕರನ್ನು ವಿಲೀನಗೊಳಿಸುವ ಪ್ರಕ್ರಿಯೆಯ ಕಡತವನ್ನು ರಾಜ್ಯಪಾಲರ ಅನುಮೋದನೆಗೆ ಕಳುಹಿಸಲಾಗಿದೆ
ಎಂ.ಎಸ್. ಶ್ರೀಕರ್, ಪ್ರಧಾನ ಕಾರ್ಯದರ್ಶಿ,ಉನ್ನತ ಶಿಕ್ಷಣ ಇಲಾಖೆ

ಕೋರ್ಟ್ ಮೊರೆಹೋದ ನಿವೃತ್ತರು

ಕಾಲೇಜು ಶಿಕ್ಷಣ ಇಲಾಖೆ ಅಧೀನದ ಪದವಿ ಕಾಲೇಜುಗಳಲ್ಲಿ ಕೆಲಸ ಮಾಡುವ ಅಧ್ಯಾಪಕರ ನಿವೃತ್ತಿ ವಯಸ್ಸು 60 ವರ್ಷಗಳು, ವಿಶ್ವವಿದ್ಯಾಲಯದ ಅಧ್ಯಾಪಕರ ನಿವೃತ್ತಿ ವಯಸ್ಸು 62 ವರ್ಷಗಳು.

ವಿಶ್ವವಿದ್ಯಾಲಯ ಸ್ಥಾನ ದೊರೆತ ನಂತರ ಮೂರು ಕಾಲೇಜುಗಳ ಅಧ್ಯಾಪಕರನ್ನು ಸರ್ಕಾರ ತಕ್ಷಣವೇ ವಿಶ್ವವಿದ್ಯಾಲಯದಲ್ಲಿ ವಿಲೀನಗೊಳಿಸಿದ್ದರೆ ಅವರ ನಿವೃತ್ತಿ ವಯಸ್ಸು ಎರಡು ವರ್ಷ ಹೆಚ್ಚಳವಾಗುತ್ತಿತ್ತು. ಬಹುತೇಕರಿಗೆ 60 ವರ್ಷದ ನಂತರ ಕಾಲೇಜು ಶಿಕ್ಷಣ ಇಲಾಖೆ ನೀಡುತ್ತಿದ್ದ ವೇತನ ಸ್ಥಗಿತವಾಯಿತು. ಉಳಿದ ಎರಡು ವರ್ಷಗಳು ವೇತನವಿಲ್ಲದೇ ವಿಶ್ವವಿದ್ಯಾಲಯದಲ್ಲಿ ಬೋಧನೆ ಮಾಡಿದ್ದಾರೆ. ಅವರೆಲ್ಲ ವೇತನ ಕೋರಿ ಕೋರ್ಟ್ ಮೊರೆ ಹೋಗಿದ್ದಾರೆ.

ವಿಲೀನ ಪ್ರಕ್ರಿಯೆಗೆ ಸರ್ಕಾರದ ನಿರಾಸಕ್ತಿ

ಮೂರು ಮಹಿಳಾ ಕಾಲೇಜುಗಳನ್ನು ಒಟ್ಟುಗೂಡಿಸಿ ಕ್ಲಸ್ಟರ್ ವಿಶ್ವ ವಿದ್ಯಾಲಯ ಸ್ಥಾಪಿಸಿದ ನಂತರ ಕಾಲೇಜು ಶಿಕ್ಷಣ ಇಲಾಖೆ ಅಧೀನದಲ್ಲಿದ್ದ ಅಧ್ಯಾಪಕರನ್ನು ವಿಶ್ವವಿದ್ಯಾಲಯದಲ್ಲಿ ವಿಲೀನಗೊಳಿಸಲೇ ಇಲ್ಲ.

ಅಧ್ಯಾಪಕರಿಗೆ ವಿಶ್ವವಿದ್ಯಾಲಯದಲ್ಲಿ ಉಳಿಯುವ ಅಥವಾ ಬೇರೆ ಕಾಲೇಜುಗಳಿಗೆ ವರ್ಗಾವಣೆ ತೆಗೆದುಕೊಂಡು ಹೋಗಲು ಅವಕಾಶ ನೀಡಬೇಕಿತ್ತು. ಆದರೆ, ಇಚ್ಛೆ ದಾಖಲಿಸುವ ಪ್ರಕ್ರಿಯೆಗಳನ್ನೇ ಆರಂಭಿಸಲಿಲ್ಲ. ವಿಳಂಬವಾದ ಕಾರಣ ಈ ಐದು ವರ್ಷಗಳ ಅವಧಿಯಲ್ಲಿ ಹಲವರು ನಿವೃತ್ತರಾದರು. ಉಳಿದವರು ಕಾಲೇಜು ಶಿಕ್ಷಣ ಇಲಾಖೆಯಿಂದಲೇ ವೇತನ ಪಡೆಯುತ್ತಾ ವಿಶ್ವವಿದ್ಯಾಲಯದಲ್ಲೇ ಉಳಿದರು.

ಅಂಕಿ ಅಂಶ

6,000 ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರು

234 ವಿಶ್ವವಿದ್ಯಾಲಯ ಆರಂಭವಾದಾಗ ಇದ್ದ ಅಧ್ಯಾಪಕರು

160 ಪ್ರಸ್ತುತ ಇರುವ ಅಧ್ಯಾಪಕರು

ಬೋಧಕೇತರರು ಪೂರಾ ಖಾಲಿ!

ವಿಶ್ವವಿದ್ಯಾಲಯ ಸ್ಥಾಪನೆಯಾದಾಗ 153 ಬೋಧಕೇತರ ಸಿಬ್ಬಂದಿ ಇದ್ದರು. ಅವರೆಲ್ಲರನ್ನೂ ಕಾಲೇಜು ಶಿಕ್ಷಣ ಇಲಾಖೆ ರಾಜ್ಯದ ಬೇರೆಬೇರೆ ಪದವಿ ಕಾಲೇಜುಗಳಿಗೆ ವರ್ಗಾವಣೆ ಮಾಡಿತು. ಇಲ್ಲಿಯವರೆಗೂ ಹೊಸ ನೇಮಕಾತಿ ನಡೆದಿಲ್ಲ. ಹೊರಗುತ್ತಿಗೆ ಸಿಬ್ಬಂದಿಯೇ ಬೋಧಕೇತರ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ.

ಚಿತ್ರಾವಳಿ



ಬಸವನಗುಡಿಯ ರಾಮಕೃಷ್ಣ ಮಠದ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಬುಧವಾರ ತಬಲಾ ವಾದಕರಾದ ರವೀಂದ್ರ ಯಾವಗಲ್ ಹಾಗೂ ಮೃದಂಗ ವಾದ ಆನೂರು ಅನಂತಕೃಷ್ಣ ಶರ್ಮ ಅವರು ತಬಲಾ–ಮೃದಂಗ ಜುಗಲ್‌ಬಂದಿ ಪ್ರಸ್ತುತಪಡಿಸಿದರು. ಅವರಿಗೆ ರಂಜನ್ ಕುಮಾರ್ (ಪಿಟೀಲು), ಸೋಮಶೇಖರ್ ಜೋಯಿಸ್ (ಕೊನ್ನಕೋಲ್) ಸಾಥ್ ನೀಡಿದರು



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಪ್ರತಿಭಟನೆಗೆ ನಿವೃತ್ತ ಲೋಕಾಯುಕ್ತ, ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರು ಬುಧವಾರ ಭೇಟಿ ನೀಡಿ ಬೆಂಬಲ ಸೂಚಿಸಿದರು

ಕವಿ, ನಿರ್ಮಾಪಕ ಪ್ರೀತಿಶ್ ನಂದಿ ನಿಧನ

ಮುಂಬೈ (ಪಿಟಿಐ): ಹೆಸರಾಂತ ಪತ್ರಕರ್ತ, ಕವಿ, ಚಿತ್ರ ನಿರ್ಮಾಪಕ ಪ್ರೀತಿಶ್ ನಂದಿ ಅವರು ಬುಧವಾರ ಇಲ್ಲಿನ ತಮ್ಮ ನಿವಾಸದಲ್ಲಿ ಹೃದಯ ಸ್ತಂಭನದಿಂದ ನಿಧನರಾದರು. ಅವರಿಗೆ 73 ವರ್ಷ ವಯಸ್ಸಾಗಿತ್ತು.

ನಂದಿ ಅವರ ಗೆಳೆಯ, ನಟ ಅನುಪಮ್ ಖೇರ್ ಅವರು, ಆತ್ಮೀಯ ಗೆಳೆಯನ ಅಗಲಿಕೆಯಿಂದ ನೋವಾಗಿದೆ. ಅವರೊಬ್ಬ ಧೈರ್ಯಶಾಲಿ, ವಿಶೇಷ ಪತ್ರಕರ್ತ. ಅತ್ಯುತ್ತಮ ಕವಿ, ಬರಹಗಾರ ಎಂದು ಸ್ಮರಿಸಿದ್ದಾರೆ.

ಶಿವಸೇನೆಯಿಂದ ರಾಜ್ಯಸಭೆ ಸದಸ್ಯರೂ ಆಗಿದ್ದ ಪ್ರೀತೀಶ್ ನಂದಿ ಅವರು ಪ್ರಾಣಿ ಹಕ್ಕುಗಳ ಪರ ವಕೀಲರಾಗಿದ್ದರು. ಅವರ ಒಡೆತನದ ಪ್ರೀತಿಶ್ ನಂದಿ ಕಮ್ಯುನಿಕೇಷನ್ ಮೂಲಕ, ‘ಸುರ್’, ‘ಕಾಂಟೆ’, ‘ಝುಂಕಾರ್ ಬೀಟ್ಸ್’, ‘ಚಮೇಲಿ’, ‘ಹಜಾರೋ ಖ್ವಾಯಿಶೆ ಐಸಿ’ ಮತ್ತು ‘ಪ್ಯಾರ್ ಕೆ ಸೈಡ್ ಎಫೆಕ್ಟ್ಸ್’ ಚಿತ್ರಗಳನ್ನು ನಿರ್ಮಿಸಿದ್ದರು.



‘ಫೋರ್ ಮೋರ್ ಶಾಟ್ಸ್ ಪ್ಲೀಸ್’ ವೆಬ್ ಸಿರೀಸ್ ಅನ್ನೂ ನಿರ್ಮಿಸಿದ್ದ ಅವರು, ಇಂಗ್ಲಿಷ್‌ನಲ್ಲಿ 40 ಕವನ ಸಂಕಲನಗಳನ್ನು ಪ್ರಕಟಿಸಿದ್ದರು. ಬಂಗಾಳಿ, ಉರ್ದು, ಪಂಜಾಬಿ ಭಾಷೆಗಳ ಕವನಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದರು.

ಮಧುಗಿರಿ ಡಿವೈಎಸ್‌ಪಿ ವಿರುದ್ಧ ಇನ್ನೊಂದು ದೂರು ದಾಖಲು

ಪ್ರಜಾವಾಣಿ ವಾರ್ತೆ

ಮಧುಗಿರಿ (ತುಮಕೂರು): ದೂರು ನೀಡಲು ಕಚೇರಿಗೆ ಬಂದ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಮಧುಗಿರಿ ಡಿವೈಎಸ್‌ಪಿ ಎ.ರಾಮಚಂದ್ರಪ್ಪ ವಿರುದ್ಧ ಮತ್ತೊಬ್ಬ ಮಹಿಳೆ ಲೈಂಗಿಕ ದೌರ್ಜನ್ಯ ಆರೋಪ ಮಾಡಿದ್ದಾರೆ.

ಕೊರಟಗೆರೆ ತಾಲ್ಲೂಕಿನ ಪರಿಶಿಷ್ಟ ಪಂಗಡದ ಮಹಿಳೆಯೊಬ್ಬರು ಈ ಸಂಬಂಧ ಬುಧವಾರ ಮಧುಗಿರಿ ಪೊಲೀಸ್ ಠಾಣೆಯಲ್ಲಿ ರಾಮಚಂದ್ರಪ್ಪ ವಿರುದ್ಧ ಲೈಂಗಿಕ ದೌರ್ಜನ್ಯ ದೂರು ನೀಡಿದ್ದಾರೆ.

ನಿವೇಶನಕ್ಕಾಗಿ ಹಣ ಪಡೆದ ವ್ಯಕ್ತಿಯೊಬ್ಬ ನಿವೇಶನ ನೀಡದೆ, ಹಣವನ್ನೂ ಮರಳಿಸದೆ ಮೋಸ ಮಾಡಿದ್ದಾನೆ. ಆತನ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಪೊಲೀಸರಿಗೆ ನಿರ್ದೇಶನ ನೀಡುವಂತೆ ಕೋರಿ ಮಹಿಳೆ ರಾಜ್ಯ ಮಹಿಳಾ ಆಯೋಗದ ಮೊರೆ ಹೋಗಿದ್ದರು. ಈ ಸಂಬಂಧ ವಿಚಾರಣೆ ನಡೆಸುವಂತೆ ಮಹಿಳಾ ಆಯೋಗವು ತುಮಕೂರು ಜಿಲ್ಲಾ ಪೊಲೀಸ್ ಕಚೇರಿಗೆ ಪತ್ರ ಬರೆದಿತ್ತು.

‘ಈ ಪ್ರಕರಣದ ವಿಚಾರಣೆ ನೆಪದಲ್ಲಿ ನನ್ನನ್ನು ಕಚೇರಿಗೆ ಕರೆಸಿಕೊಂಡ ಡಿವೈಎಸ್‌ಪಿ ರಾಮಚಂದ್ರಪ್ಪ ಲೈಗಿಂಕ ದೌರ್ಜನ್ಯ ಎಸಗಿದ್ದಾರೆ’ ಎಂದು ಮಹಿಳೆ ದೂರು ನೀಡಿದ್ದಾರೆ.

ಯುವಜನರಲ್ಲಿ ಉದ್ಯಮಶೀಲತೆ ಪ್ರೋತ್ಸಾಹಿಸುವ ಉದ್ದೇಶ

ಎಫ್‌ಕೆಸಿಸಿಐ ‘ಮಂಥನ್’ ಸ್ಪರ್ಧೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವ್ಯಾಪಾರದಲ್ಲಿ ಏಳುಬೀಳು ಸಹಜ. ಆದರೆ, ಗುರಿ ಸಾಧನೆಗೆ ದೃಢ ನಿರ್ಧಾರ, ಆತ್ಮವಿಶ್ವಾಸ ಅತಿಮುಖ್ಯ’ ಎಂದು ಸಂಸದ ಡಾ.ಸಿ.ಎನ್. ಮಂಜುನಾಥ್ ಹೇಳಿದರು.

ನಗರದಲ್ಲಿ ಬುಧವಾರ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯಿಂದ ಆಯೋಜಿಸಿದ್ದ 20ನೇ ಆವೃತ್ತಿಯ ರಫ್ತು ಶ್ರೇಷ್ಠತಾ ಪ್ರಶಸ್ತಿ (ಎಕ್ಸ್‌ಪೋರ್ಟ್ ಎಕ್ಸ್‌ಲೆನ್ಸ್ ಪ್ರಶಸ್ತಿ) ಮತ್ತು 17ನೇ ಆವೃತ್ತಿಯ ಮಂಥನ್ ಸ್ಪರ್ಧೆಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೆಂಗಳೂರಿನಲ್ಲಿ ಪರಿಸರವು ಹೊಸ ಉದ್ಯಮಗಳನ್ನು ಸ್ಥಾಪಿಸಲು ಪೂರಕವಾಗಿದೆ. ಇಲ್ಲಿ ಹಲವು ಅವಕಾಶಗಳಿವೆ. 2027ರ ವೇಳೆಗೆ ದೇಶವು 3ನೇ ಅತಿದೊಡ್ಡ ಆರ್ಥಿಕತೆಯಾಗಲಿದೆ. 2047ರ ವೇಳೆಗೆ ಅಭಿವೃದ್ಧಿ ಹೊಂದಿದ ದೇಶಗಳ ಪಟ್ಟಿಗೆ ಸೇರ್ಪಡೆಗೊಳ್ಳಲಿದೆ ಎಂದು ಹೇಳಿದರು.

ಎಫ್‌ಕೆಸಿಸಿಐನ ಮಂಥನ್ ಕಾರ್ಯಕ್ರಮವು ಯುವಜನತೆಯು ಉದ್ಯಮಿಗಳಾಗಲು ವೇದಿಕೆ ಕಲ್ಪಿಸುತ್ತಿದೆ. ಆರ್ಥಿಕತೆ, ಶಿಕ್ಷಣ, ಇಂಧನ, ಉದ್ಯಮವು ದೇಶದ ಪ್ರಗತಿಯಲ್ಲಿ ನಿರ್ಣಾಯಕವಾಗಿವೆ ಎಂದರು.


ಬೆಂಗಳೂರಿನಲ್ಲಿ ಬುಧವಾರ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂಸದ ಡಾ.ಸಿ.ಎನ್ ಮಂಜುನಾಥ್ ಅವರು, ಎಫ್‌ಕೆಸಿಸಿಐ ಮಂಥನ್, ಎಕ್ಸ್‌ಪೋರ್ಟ್ ಎಕ್ಸ್‌ಲೆನ್ಸ್ ಪ್ರಶಸ್ತಿಯ ಲೋಗೊ ಬಿಡುಗಡೆ ಮಾಡಿದರು. ಎಫ್‌ಕೆಸಿಸಿಐನ ಹಿರಿಯ ಉಪಾಧ್ಯಕ್ಷೆ ಉಮಾ ರೆಡ್ಡಿ, ಅಧ್ಯಕ್ಷ ಎಂ.ಜಿ. ಬಾಲಕೃಷ್ಣ, ಉಪಾಧ್ಯಕ್ಷ ಟಿ. ಸಾಯಿ ರಾಮ್‌ಪ್ರಸಾದ್ ಇದ್ದರು ಪ್ರಜಾವಾಣಿ ಚಿತ್ರ

ಯುವಜನರಲ್ಲಿ ಉದ್ಯಮಶೀಲತೆಯ ಬಗ್ಗೆ ಉತ್ಸಾಹ ಹೆಚ್ಚಿಸಲು ಮಂಥನ್ ಕಾರ್ಯಕ್ರಮದ 17ನೇ ಆವೃತ್ತಿಗೆ ಚಾಲನೆ ನೀಡಲಾಗಿದೆ ಎಂದು ಮಂಥನ್ ಕಾರ್ಯಕ್ರಮದ ಅಧ್ಯಕ್ಷೆ ತೇಜಶ್ರೀ ಬಿ.ಎ. ಹೇಳಿದರು.

ಮಂಥನ್ ಎನ್ನುವುದು ಬ್ಯುಸಿನೆಸ್ ಪ್ಲಾನ್ ಅನ್ನು ಪ್ರಸ್ತುತಪಡಿಸುವ ಸ್ಪರ್ಧೆಯಾಗಿದೆ. ರಾಜ್ಯದ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮೊ ವಿದ್ಯಾರ್ಥಿಗಳು ತಮ್ಮಲ್ಲಿನ ಹೊಸ ಬ್ಯುಸಿನೆಸ್‌ಗೆ ಸಂಬಂಧಿಸಿದ ಆಲೋಚನೆಗಳನ್ನು ಎಫ್‌ಕೆಸಿಸಿಐ ವೆಬ್‌ಸೈಟ್‌ನಲ್ಲಿ ದಾಖಲಿಸಬೇಕು. ಉತ್ತಮ ಪ್ಲಾನ್‌ಗಳಿಗೆ ₹10 ಲಕ್ಷದವರೆಗೆ ಬಹುಮಾನ ನೀಡಲಾಗುವುದು ಎಂದು ವಿವರಿಸಿದರು.

ಮಹಿಳೆಯರ ಆಲೋಚನೆಗಳಿಗೆ ಹೆಚ್ಚಿನ ಉತ್ತೇಜನ ನೀಡಲು ಪ್ರತ್ಯೇಕವಾಗಿ ಬಹುಮಾನ ನೀಡಲಾಗುವುದು ಎಂದರು.


ಕಾರ್ಯಕ್ರಮದಲ್ಲಿ ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ, ಹಿರಿಯ ಉಪಾಧ್ಯಕ್ಷೆ ಉಮಾ ರೆಡ್ಡಿ, ಉಪಾಧ್ಯಕ್ಷ ಟಿ. ಸಾಯಿ ರಾಮ್ ಪ್ರಸಾದ್, ಮಾಜಿ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ, ರಫ್ತು ಶ್ರೇಷ್ಠತಾ ಪ್ರಶಸ್ತಿ ಸಮಿತಿಯ ಅಧ್ಯಕ್ಷ ಬಿ.ಸಿ. ತಿಪ್ಪೇಶಪ್ಪ, ಮಂಥನ್ ಸಲಹೆಗಾರ ಐ.ಎಸ್. ಪ್ರಸಾದ್ ಇದ್ದರು.

ಸ್ಪರ್ಧಾ ವಾಣಿ

ಸ್ವದೇಶಿ ತಂತ್ರಜ್ಞಾನದ ಬಳಕೆ

SpaDeX ಯೋಜನೆಯಲ್ಲಿ ಬಳಸಿರುವ ಸೆನ್ಸರ್ ಸೂಟ್, ವಿದ್ಯುತ್ ವರ್ಗಾವಣೆ ತಂತ್ರಜ್ಞಾನ, ಅಂತರ-ಉಪಗ್ರಹ ಸಂವಹನ ಲಿಂಕ್ (ISL), GNSS ಆಧಾರಿತ ಪ್ರೊಸೆಸರ್, ಹಾರ್ಡ್‌ವೇರ್, ಸಾಫ್ಟ್‌ವೇರ್,ರೇಡಿಯೇಶನ್ ಮಾನಿಟರ್ ಹಾಗೂ ಸಿಮ್ಯುಲೇಶನ್ ತಂತ್ರಜ್ಞಾನಗಳನ್ನು 'Make in India' ಉಪಕ್ರಮದಡಿ ಭಾರತದಲ್ಲಿಯೇ ಅಭಿವೃದ್ಧಿಪಡಿಸಲಾಗಿದೆ. ISRO ತನ್ನ ಉಪಕೇಂದ್ರಗಳಾದ VSSC (Vikram Sarabhai Space Centre), LPSC (Liquid Propulsion Systems Centre), SAC (Space Applications Centre), IISU (ISRO Inertial Systems Unit), ಮತ್ತು LEOS (Laboratory for Electro-Optics Systems) ಬೆಂಬಲದೊಂದಿಗೆ ಹಾಗೂ URSC (U.R.Rao Satellite Centre) ವಿನ್ಯಾಸದೊಂದಿಗೆ 'SpaDeX' ಬಾಹ್ಯಾಕಾಶ ನೌಕೆಯನ್ನು ರೂಪಿಸಿದೆ. ಈ ನೌಕೆಗಳನ್ನು ISTRAC (ISRO Telemetry, Tracking and Command Network) ತಂತ್ರದ ಮೂಲಕ ಬೆಂಗಳೂರಿನ URSC ಹಾಗೂ ಎಂ.ಎಸ್.ಅನಂತ್ ಟೆಕ್ನಾಲಜೀಸ್ ಸಂಸ್ಥೆಗಳು ನಿಯಂತ್ರಿಸಲಿವೆ.

ಇಸ್ರೊದ ಹೊಸದೊಂದು ಮೈಲಿಗಲ್ಲು 'SpaDeX'



ಚನ್ನಬಸಪ್ಪ ರೊಟ್ಟಿ

ಇಸ್ರೊ 'PSLV-C60/SPADEX' ಯೋಜನೆಯಡಿ ಡಿಸೆಂಬರ್ 30, 2024ರಂದು ಅವಳಿ ನೌಕೆಗಳನ್ನು ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಯಶಸ್ವಿಯಾಗಿ ಭೂಕಕ್ಷೆಗೆ ಏಕಕಾಲದಲ್ಲಿ ಉಡಾವಣೆ ಮಾಡಿದ್ದು, ಆ ಎರಡೂ ನೌಕೆಗಳನ್ನು ಜೋಡಿಸುವ ಹಾಗೂ ಪ್ರತ್ಯೇಕಿಸುವ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಸಾಧಿಸುವ ನಿಟ್ಟಿನಲ್ಲಿ ಬಾಹ್ಯಾಕಾಶ ತಂತ್ರಜ್ಞಾನದ ಮತ್ತೊಂದು ಮೈಲಿಗಲ್ಲು ತಲುಪಿದೆ.

PSLV (Polar Satellite Launch Vehicle) ಮೂಲಕ ಕಡಿಮೆ ವೆಚ್ಚದಲ್ಲಿ ಉಡಾವಣೆ ಮಾಡಿದ ಎರಡು ಸಣ್ಣ ಬಾಹ್ಯಾಕಾಶ ನೌಕೆಗಳನ್ನು ಬಳಸಿಕೊಂಡು ಭೂಕಕ್ಷೆಯಲ್ಲಿ 'ಡಾಕಿಂಗ್' ಹಾಗೂ 'ಅನ್‌ಡಾಕಿಂಗ್' ತಂತ್ರಜ್ಞಾನವನ್ನು ಸಾಧಿಸಲು ಭಾರತ ಮುಂದಡಿ ಇಟ್ಟಿದೆ. ಈ ಸಾಧನೆ ಭಾರತದ ಚಂದ್ರಯಾನ, ಚಂದ್ರನಿಂದ ಮಾದರಿಯನ್ನು ತರುವುದು, ಭಾರತೀಯ ಅಂತರಿಕ್ಷ ನಿಲ್ದಾಣದ ನಿರ್ಮಾಣ, ಮತ್ತಿತರ ಬಾಹ್ಯಾಕಾಶ ಕಾರ್ಯಾಚರಣೆಗಳಿಗೆ ಬುನಾದಿಯಾಗಲಿದೆ. 'ಡಾಕಿಂಗ್ ತಂತ್ರಜ್ಞಾನ' ರಾಕೆಟ್ ಉಡಾವಣೆಗಿಂತ ಉನ್ನತವಾದ ತಂತ್ರಜ್ಞಾನವಾಗಿದ್ದು, ಅಮೆರಿಕ, ರಷ್ಯಾ ಮತ್ತು ಚೀನಾ ನಂತರ ಭಾರತ, 'ಬಾಹ್ಯಾಕಾಶ ಡಾಕಿಂಗ್' ತಂತ್ರಜ್ಞಾನ ಹೊಂದಿದ ವಿಶ್ವದ ನಾಲ್ಕನೇ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ.

'ಡಾಕಿಂಗ್ ತಂತ್ರಜ್ಞಾನ'ವನ್ನು ಸುಲಭವಾಗಿ ವಿವರಿಸಬೇಕೆಂದರೆ, ಇದು ಬಾಹ್ಯಾಕಾಶದಲ್ಲಿ ಎರಡು ಪ್ರತ್ಯೇಕ ಘಟಕಗಳನ್ನು ಪರಸ್ಪರ ಜೋಡಿಸುವ ಹಾಗೂ ಬೇರ್ಪಡಿಸುವ ತಂತ್ರಜ್ಞಾನವಾಗಿದೆ. ಭೂಕಕ್ಷೆಯಲ್ಲಿ ಇರುವ ಬಾಹ್ಯಾಕಾಶ ನೌಕೆ ಅಥವಾ ಬಾಹ್ಯಾಕಾಶ ನಿಲ್ದಾಣದಂಥ ಘಟಕಗಳನ್ನು ಭೂಮಿಯಿಂದ ಉಡಾವಣೆಗೊಂಡ ಮತ್ತೊಂದು ಬಾಹ್ಯಾಕಾಶ ನೌಕೆಯೊಂದಿಗೆ ಜೋಡಿಸುವ ತಂತ್ರಜ್ಞಾನ ಇದಾಗಿದೆ. ಇದು ತುಂಬಾ ಸವಾಲಿನಿಂದ ಕೂಡಿದ ಕಾರ್ಯವಾಗಿದ್ದು, ಭೂಕಕಕ್ಷೆಯ ವಾತಾವರಣದಲ್ಲಿ ಎರಡು ಪ್ರತ್ಯೇಕ ಘಟಕಗಳನ್ನು ಜೋಡಿಸುವಾಗ, ಅಲ್ಲಿನ ವೇಗ ಹಾಗೂ ಒತ್ತಡದ ನಿರ್ವಹಣೆ, ಬಾಹ್ಯಾಕಾಶ ತ್ಯಾಜ್ಯ ಒಳಸೇರದಂತೆ ತಡೆಯುವುದು, ಗುರುತ್ವಾಕರ್ಷಣ ಶಕ್ತಿಯ ನಿರ್ವಹಣೆ, ವಿದ್ಯುತ್‌ಶಕ್ತಿ ವರ್ಗಾವಣೆ, ರೋಬೋಟಿಕ್ಸ್ ತಂತ್ರಜ್ಞಾನದ ಸಮರ್ಪಕ ಬಳಕೆ, ಆಮ್ಲಜನಕದ ಸಮತೋಲಿತ ಪ್ರಮಾಣದ ರಕ್ಷಣೆ ಹೀಗೆ ಹಲವು ಸವಾಲುಗಳು ಎದುರಾಗುತ್ತವೆ.

ಈ ರೀತಿ ಸವಾಲುಗಳಿಂದ ಕೂಡಿದ 'ಡಾಕಿಂಗ್ ತಂತ್ರಜ್ಞಾನ'ವನ್ನು ಸಾಧಿಸಲು ಇಸ್ರೊ 'SpaDeX' (Space Docking Experiment) ಯೋಜನೆಯಡಿ ತಲಾ 220 ಕೆ.ಜಿ. ತೂಕ ಹೊಂದಿರುವ ಎರಡು ಸಂಯೋಜಿತ ಬಾಹ್ಯಾಕಾಶ ನೌಕೆಗಳಾದ 'SDX01' (ಚೇಸರ್) ಮತ್ತು 'SDX02' (ಟಾರ್ಗೆಟ್) ಇವುಗಳನ್ನು PSLV ಉಡಾವಣಾ ವಾಹನದ ಮೂಲಕ ಭೂಕಕ್ಷೆಗೆ ಉಡಾವಣೆ ಮಾಡಿದೆ. ಈ ಮೂಲಕ 470 ಕಿ.ಮೀ. ವೃತ್ತಾಕಾರದ ಭೂಕಕ್ಷೆಯಲ್ಲಿ 55 ಡಿಗ್ರಿ ಇಳಿಜಾರಿನಲ್ಲಿ 'SDX01' ಮತ್ತು 'SDX02' ಬಾಹ್ಯಾಕಾಶ ನೌಕೆಗಳನ್ನು ಜೋಡಿಸುವ (ಡಾಕಿಂಗ್) ಹಾಗೂ ಪ್ರತ್ಯೇಕಿಸುವ (ಅನ್‌ಡಾಕಿಂಗ್) ತಂತ್ರಜ್ಞಾನವನ್ನು ಇಸ್ರೊ ಸಾಧಿಸಬೇಕಿದೆ.

'ಅಂತರರಾಷ್ಟ್ರೀಯ ಡಾಕಿಂಗ್ ಸಿಸ್ಟಮ್ ಸ್ಟ್ಯಾಂಡರ್ಡ್' (IDSS) 450 ಮಿ.ಮೀ. ಹೆಚ್ಚುವರಿ ವಿಸ್ತರಣೆ ಹಾಗೂ 1 ಡಿಗ್ರಿ ಹೆಚ್ಚುವರಿ ಓರೆಯನ್ನು ಹೊಂದಿದೆ. ಭಾರತ 'SpaDeX' ಯೋಜನೆಯಡಿ ಎರಡು ಪ್ರತ್ಯೇಕ ಬಾಹ್ಯಾಕಾಶ ನೌಕೆಗಳನ್ನು ಉಡಾವಣೆ ಮಾಡಿದ್ದು, ಹೆಚ್ಚುವರಿಯಾಗಿ 800 ಮಿ.ಮೀ. ವಿಸ್ತರಣೆಯನ್ನು ಬಳಸುತ್ತಿದೆ. ಇದಕ್ಕೆ ಪೂರಕವಾಗಿ ಹೆಚ್ಚುವರಿ ಸೆನ್ಸರ್ ಸೂಟ್ ಹಾಗೂ ಲೇಸರ್ ರೇಂಜ್ ಫೈಂಡರ್ (LRF) ಮತ್ತು ಕಾರ್ನರ್ ಕ್ಯೂಬ್ ರೆಟ್ರೋ ರಿಫ್ಲೆಕ್ಟರ್‌ಗಳ ಶ್ರೇಣಿಯನ್ನು ಭಾರತ ಬಳಸುತ್ತಿದೆ. ಈ ಕುರಿತು ಈಗಾಗಲೇ ಇಸ್ರೊ, ಬಹು ಡಿಜಿಟಲ್ ಮಾಧ್ಯಮ, ಹಾರ್ಡ್‌ವೇರ್-ಇನ್-ಲೂಪ್, ಆನ್‌ಬೋರ್ಡ್-ಇನ್-ಲೂಪ್, ಸಾಫ್ಟ್‌ವೇರ್-ಇನ್-ಲೂಪ್ ಮತ್ತು ರೋಬೋಟಿಕ್ ಸಿಮ್ಯುಲೇಶನ್‌ಗಳ ಪರೀಕ್ಷೆಗಳನ್ನು ನಡೆಸಿದ್ದು, 'SpaDeX' ಕಾರ್ಯಾಚರಣೆಯನ್ನು ಮೌಲ್ಯೀಕರಿಸಿದೆ.

'SpaDeX' ಯೋಜನೆಯನ್ನು ಕಾರ್ಯಗತಗೊಳಿಸುವಾಗ 'POEM-4' (PS4 Orbital Experiment Module) ಪೇಲೋಡ್ ಮೂಲಕ 'ಡಾಕಿಂಗ್' ಹಾಗೂ 'ಅನ್‌ಡಾಕಿಂಗ್' ಪ್ರಕ್ರಿಯೆಗಳ ವಿಡಿಯೊ ಚಿತ್ರೀಕರಣವನ್ನು ಕೂಡ ಇಸ್ರೊ ಮಾಡಿಕೊಳ್ಳಲಿದೆ. PSLV ಉಡಾವಣಾ ವಾಹನದಿಂದ ಬಾಹ್ಯಾಕಾಶ ನೌಕೆಗಳು ಬೇರ್ಪಡುವ ಸಮಯದಲ್ಲಿ ಭೂಕಕ್ಷೆಯ ಸಮಯ ಚಕ್ರದೊಂದಿಗೆ ಹೊಂದಾಣಿಕೆ ಆಗುವಂತೆ ಸೆಟ್ಟಿಂಗ್‌ಗಳನ್ನು ನಿರ್ವಹಿಸಿ, 'ಟಾರ್ಗೆಟ್' ಮತ್ತು 'ಚೇಸರ್' ಬಾಹ್ಯಾಕಾಶ ನೌಕೆಗಳ ನಡುವೆ 10-ರಿಂದ 20 ಕಿ.ಮೀ. ಅಂತರದ ಸಾಪೇಕ್ಷ ವೇಗವನ್ನು ಸಾಧಿಸಿ, ಕ್ರಮವಾಗಿ 5 ಕಿ.ಮೀ., 1.5 ಕಿ.ಮೀ., 500 ಮೀಟರ್, 225 ಮೀಟರ್, 15 ಮೀಟರ್ ಮತ್ತು 3 ಮೀಟರ್ ಅಂತರವನ್ನು ಸಾಧಿಸಿ, ನಿಖರವಾಗಿ 'ಡಾಕಿಂಗ್' ಹಾಗೂ 'ಅನ್‌ಡಾಕಿಂಗ್' ಮಾಡಲು ಇಸ್ರೋ ಯೋಜಿಸಿದೆ. ನೌಕೆಗಳು ಉಡಾವಣೆಗೊಂಡ ನಂತರದ ಸುಮಾರು 66 ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

'ಡಾಕಿಂಗ್' ಹಾಗೂ 'ಅನ್‌ಡಾಕಿಂಗ್' ಪ್ರಕ್ರಿಯೆ ಒಮ್ಮೆ ಪೂರ್ಣಗೊಂಡ ನಂತರ ಎರಡು ವರ್ಷಗಳ ನಿರೀಕ್ಷಿತ ಜೀವಿತಾವಧಿಯಲ್ಲಿ ಎರಡೂ ಬಾಹ್ಯಾಕಾಶ ನೌಕೆಗಳು, ತಮ್ಮಲ್ಲಿನ ಪೇಲೋಡ್‌ಗಳ ಕಾರ್ಯಾಚರಣೆಯನ್ನು ಪ್ರಾರಂಭಿಸಲಿವೆ. ಈ ಸಮಯದಲ್ಲಿ 'SpaDeX' ಕೂಡ ಭೂಕಕ್ಷೆಯಲ್ಲಿ ಇರುವ ISROದ ಇತರ ಉಪಗ್ರಹಗಳಂತೆ ನ್ಯಾವಿಗೇಷನ್ ಕಾರ್ಯವನ್ನು ನಿರ್ವಹಿಸಲಿದೆ. SpaDeX ನಲ್ಲಿ ಅಳವಡಿಸಿರುವ 'ರೇಡಿಯೇಶನ್ ಮಾನಿಟರ್' (RadMon) ಬಾಹ್ಯಾಕಾಶದಲ್ಲಿ ಎದುರಾಗುವ ವಿಕಿರಣ ಪ್ರಮಾಣವನ್ನು ಅಳೆಯುತ್ತದೆ. ಇದು ಸಂಭವನೀಯ ವಿಕಿರಣ ಅಪಾಯಗಳನ್ನು ಪತ್ತೆ ಮಾಡಲಿದೆ. ISRO ಈ ಎರಡೂ ಬಾಹ್ಯಾಕಾಶ ನೌಕೆಗಳಲ್ಲಿ 4.5 ಮೀ IGFOV ಮತ್ತು 9.2 x 9.2 ಕಿ.ಮೀ. (ಸ್ನ್ಯಾಪ್‌ಶಾಟ್ ಮೋಡ್) ಮತ್ತು 450 ಕಿ.ಮೀ. ಎತ್ತರದಿಂದ 9.2 x 4.6 ಕಿ.ಮೀ. (ವೀಡಿಯೊ ಮೋಡ್) ಹೊಂದಿರುವ ಹೈ-ರೆಸಲ್ಯೂಶನ್ ಕ್ಯಾಮೆರಾ (HRC) ಅಳವಡಿಸಿದ್ದು, ಭಾರತದ ಕಣ್ಗಾವಲು ಸಾಮರ್ಥ್ಯವನ್ನು ಇದು ಹೆಚ್ಚಿಸಲಿದೆ. ಈ ಉಪಗ್ರಹಗಳ ಮೂಲಕ 450 ಕಿ.ಮೀ. ಎತ್ತರದಿಂದ 100 ಕಿ.ಮೀ. ದೂರದವರೆಗೆ ವ್ಯಾಪಿಸಿರುವ ನೈಸರ್ಗಿಕ ಸಂಪನ್ಮೂಲ ಮತ್ತು ಸಸ್ಯವರ್ಗವನ್ನು ಅವಲೋಕಿಸಲು ಹಾಗೂ ನಿಗಾವಹಿಸಲು ಇಸ್ರೊ ಸಮರ್ಥವಾಗಲಿದೆ ❖

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಭಾರತ-ಮಯನ್ಮಾರ್-ಥಾಯ್ಲೆಂಡ್ ತ್ರಿಪಕ್ಷೀಯ ಹೆದ್ದಾರಿ ಯೋಜನೆಯನ್ನು ಕೆಳಗಿನ ಯಾವ ಪ್ರಧಾನಮಂತ್ರಿಗಳ ಅವಧಿಯಲ್ಲಿ ಅನುಮೋದಿಸಲಾಯಿತು?

ಎ. ಇಂದಿರಾಗಾಂಧಿ
ಬಿ. ಮೊರಾರ್ಜಿ ದೇಸಾಯಿ
ಸಿ. ಡಾ. ಮನಮೋಹನ್ ಸಿಂಗ್
ಡಿ. ಅಟಲ್ ಬಿಹಾರಿ ವಾಜಪೇಯಿ

ಉತ್ತರ : ಡಿ

2. ಸಂವಿಧಾನಾತ್ಮಕ ಉದ್ದೇಶಗಳಿಗಾಗಿ ಪರಿಶಿಷ್ಟ ಪಂಗಡ ಎಂದು ಅಧಿಸೂಚನೆ ಹೊರಡಿಸುವ ಅಧಿಕಾರವನ್ನು ಕೆಳಗಿನ ಯಾವ ಹುದ್ದೆಗಳು ಹೊಂದಿವೆ?

ಎ. ರಾಷ್ಟ್ರಪತಿ.
ಬಿ. ರಾಜ್ಯಪಾಲರು.
ಸಿ. ಕೇಂದ್ರ ಗೃಹ ಸಚಿವರು.
ಡಿ. ಭಾರತದ ಪ್ರಧಾನಮಂತ್ರಿ.

ಉತ್ತರ : ಎ

3. ಬುಡಕಟ್ಟುಗಳ ಸಂರಕ್ಷಣೆಗೆ ಸಂಬಂಧಿಸಿದ ಸಂವಿಧಾನಾತ್ಮಕ ವಿಧಿಗಳು ಮತ್ತು ಅಂಶಗಳನ್ನು ಗುರುತಿಸಿ?

1. ಭಾರತದ ಸಂವಿಧಾನದ ಐದನೇ ಅನುಸೂಚಿಯಲ್ಲಿ ಬುಡಕಟ್ಟುಗಳ ಸಲಹಾ ಮಂಡಳಿಯ ಸ್ಥಾಪನೆಗೆ ಅವಕಾಶವನ್ನು ಕಲ್ಪಿಸಲಾಗಿದೆ.
2. ಸಂವಿಧಾನದ ವಿಧಿ 332ರ ಅನ್ವಯ ರಾಜ್ಯ ವಿಧಾನಸಭೆಗಳಲ್ಲಿ ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಸಿ

4. ಇತ್ತೀಚೆಗೆ ಪ್ರಧಾನಮಂತ್ರಿ-ಕುಸುಮ್ ಯೋಜನೆಯನ್ನು ಕೆಳಗಿನ ಯಾವ ಕಾರ್ಯಕ್ರಮಗಳ ವ್ಯಾಪ್ತಿಗೆ ತರಲಾಗಿದೆ?

1. ಕೃಷಿ ಮೂಲಭೂತ ಸೌಕರ್ಯ ನಿಧಿ ಯೋಜನೆ.
2. ಪ್ರಾಧಾನ್ಯ ವಲಯ ಸಾಲ ಯೋಜನೆ.
3. ಕಟಾವಿನ ನಂತರದ ನಿರ್ವಹಣಾ ಯೋಜನೆ.
4. ಕಟಾವಿಗೂ ಮುಂಚಿನ ನಿರ್ವಹಣಾ ಯೋಜನೆ.

ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.

ಎ. 1 ಮತ್ತು 2 ಬಿ. 1 ಮತ್ತು 3
ಸಿ. 2 ಮತ್ತು 3 ಡಿ. 1 ಮತ್ತು 4

ಉತ್ತರ : ಎ

5. ಕೆಳಗಿನ ಯಾವ ಅಂಶಗಳನ್ನು ಪ್ರಧಾನಮಂತ್ರಿ-ಕುಸುಮ್ ಯೋಜನೆಯ ಧ್ಯೇಯೋದ್ದೇಶಗಳು ಎಂದು ಪರಿಗಣಿಸಬಹುದು?

1. ಡೀಸೆಲ್ ಚಾಲಿತ ಪಂಪ್‌ಗಳ ಬಳಕೆಯನ್ನು ತಗ್ಗಿಸುವುದು.
2. ಸೌರ ವಿದ್ಯುತ್ ಚಾಲಿತ ಪಂಪ್‌ಗಳ ಬಳಕೆಗೆ ಉತ್ತೇಜನ ನೀಡುವುದು.
3. ಸಮುದಾಯ ಆಧಾರಿತ ಸೌರ ವಿದ್ಯುತ್ ಚಾಲಿತ ನೀರಾವರಿ ಯೋಜನೆಗಳನ್ನು ಹಮ್ಮಿಕೊಳ್ಳುವುದು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 1, 2 ಮತ್ತು 3 ಡಿ. 2 ಮತ್ತು 3

ಉತ್ತರ : ಸಿ

6. ಟೊಮೆಟೊ ಉತ್ಪಾದನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಕೆಳಗಿನ ಯಾವ ರಾಜ್ಯಗಳಲ್ಲಿ ಕಾಣಬಹುದಾಗಿದೆ?

1. ಆಂಧ್ರಪ್ರದೇಶ. 2. ಮಧ್ಯಪ್ರದೇಶ.
3. ಉತ್ತರ ಪ್ರದೇಶ. 4. ಕರ್ನಾಟಕ.
5. ಗುಜರಾತ್.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. ಒಂದು ಮಾತ್ರ ಸರಿಯಾಗಿದೆ.
ಬಿ. ಎರಡು ಸರಿಯಾಗಿದೆ.
ಸಿ. ನಾಲ್ಕು ಸರಿಯಾಗಿದೆ.
ಡಿ. ಎಲ್ಲಾ ಉತ್ತರಗಳು ಸರಿಯಾಗಿದೆ.

ಉತ್ತರ : ಸಿ

7. ಕೆಳಗಿನ ಯಾವ ವೈರಸ್‌ಗಳಿಂದ ಟೊಮೆಟೊ ಉತ್ಪಾದನೆಯ ಮೇಲೆ ಋಣಾತ್ಮಕ ಪರಿಣಾಮ ಬೀರಿದೆ?

1. ಟೊಮೆಟೊ ಮೊಸಾಯಿಕ್ ವೈರಸ್.
2. ಕುಕುಂಬರ್ ಮೊಸಾಯಿಕ್ ವೈರಸ್.
3. ಕ್ಯಾರೆಟ್ ಮೊಸಾಯಿಕ್ ವೈರಸ್.
4. ಬೀಟ್ರೂಟ್ ಮೊಸಾಯಿಕ್ ವೈರಸ್.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. ಒಂದು ಉತ್ತರ ಮಾತ್ರ ಸರಿ ಇವೆ.
ಬಿ. ಎರಡು ಉತ್ತರಗಳು ಸರಿ ಇವೆ.
ಸಿ. ಮೂರು ಉತ್ತರಗಳು ಸರಿ ಇವೆ.
ಡಿ. ನಾಲ್ಕು ಉತ್ತರಗಳು ಸರಿ ಇವೆ.

ಉತ್ತರ : ಬಿ

8. ಇತ್ತೀಚೆಗೆ ಟಿಬೆಟ್‌ನ ಧರ್ಮಗುರು ದಲೈಲಾಮಾ ಅವರು ಕೆಳಗಿನ ಯಾವ ರಾಷ್ಟ್ರದ ಅಧಿಕಾರಿಗಳೊಂದಿಗೆ ಚರ್ಚಿಸಿದರು?

ಎ. ಇಸ್ರೇಲ್ ರಾಷ್ಟ್ರದ ಅಧಿಕಾರಿಗಳು.
ಬಿ. ದಕ್ಷಿಣ ಕೊರಿಯಾ ರಾಷ್ಟ್ರದ ಅಧಿಕಾರಿಗಳು.
ಸಿ. ಅಮೆರಿಕದ ಅಧಿಕಾರಿಗಳು.
ಡಿ. ಚೀನಾದ ಅಧಿಕಾರಿಗಳು.

ಉತ್ತರ : ಸಿ ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

Multiple Choice Questions

17. Choose the appropriate question tag and fill in the blank :

1) She never comes to school late, ...

(A) doesn't she ? (B) didn't she ?
(C) does she ? (D) did she ?

Ans. : (C) does she ?

2. Read the following and choose the infinitive :

Kalpana Chawla was a great astronaut. She was the first Indian born woman to go into space.

(A) was (B) to go
(C) go (D) born

Ans. : (B) to go

3. Read the following conversation and fill in the blank choosing the most appropriate words :

Nirmala : Hello Kumar, did you bring your mobile ?
Kumar : Oh no. Sorry.
Nirmala : It's Ok
Kumar : If I had brought my mobile we .... watched cricket match.

(A) will have (B) shall have
(C) wouldn't have (D) would have

Ans. (D) would have

III.The following paragraph has two errors. Edit the paragraph and rewrite it in the answer book, clues are given:

18. Although Dravidian in origin, Kannada has been high influenced by Sanskrit. According to some scholars, its early literature dates back with the 5th century A.D. Clues are given:

A. Adverbial mistake to be corrected.
B. Preposition to be corrected.

Ans:- Although Dravidian in origin, Kannada has been highly influenced by Sanskrit. According to some scholars, its early literature dates back from, 5th century A,D.

IV. Answer the following questions in 2-3 sentences each:

18. Why is Dr. B.R. Ambedkar considered as a champion of the depressed classes in India?

Ans:- Dr. B.R. Ambedkar was influenced by the work of Mahatma Phule. He decided to devote all his time and talents to improve the conditions of under privileged or depressed classes in our country. For this he started newspapers like Mooknayak, Bahishkrit Bharath and Samatha.

Hitakarini Sabha was set up by him. So all his works made him to think as a champion of the depressed classes in India.

19. How is pursuit of science an exciting adventure?

Ans:- Yes, everybody could agree that pursuit of Science is really an exciting adventure. When compare to other types of adventures like Sports, Art, Music, Whatever may be the field, Science need determination, perseverance and hard work. In all the fields especially in science field the major reward comes from the discovery itself.

20. Why do the tea cups circle and the poet like planets around the Sun?

Ans:- Earth has gravitational force but in space there is absence of gravitational pull, due to this the tea cup or whatever may be the object, it would revolve round like the planets around the Sun.

21. What do we learn from Sathish Gujral's life?

Ans:- Satish Gujral was the good example for the disabled could also achieve the best. Disability was no barrier to success. He was given more inspiration to those who were want to achieve success in life.

22. Why does Roma consider Baleshwar's action to be amazing?

Ans:- Roma considered Baleshwar's action to be amazing because the way she was rescued by him. According to Roma it was astonishing because a stranger would jump off a train and risk his life for her. She was also a stranger to him.

23. How does inspector Patil help Mohan and his family?

Ans:- Patil, the sub-inspector of police was the friend of teacher. So he wanted to help them. He came and explained the situation, it was safer side if they handed over (gave) that machine to him. They may escape from arresting. Amma believed him and handed over that machine to police officer before the other police came.

OR

How did Dicky Dolma feel after scaling Mt. Everest?

Ans:- Dicky Dolma climbed Mt. Everest on May 10, 1993 and she was the youngest woman in the world to have achieved the awesome feat to scaling the world's highest peak. The view from above is something extraordinary not able to describe fully in words. It was much more breath - taking that she could ever have imagined. The entire National and State awards that she had been bestowed were nothing compared to the experiences of seeing that view.

24. How can you say that Hanif was a talented young man.

Ans:- The life for Hanif was always ekdam bindas. He sketched very well, made beautiful cards out of waste materials, read books and loved playing the drums. As a young man he was so talented and had very much interest in life.

OR

What qualities of Wangjia do you like? *(Contd...)*

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC -CHEMISTRY

REVISION : MODEL QUESTIONS

1. Glycine is an optically inactive α-amino acid due to

a) presence of asymmetric carbon atom
b) absence of asymmetric carbon atom
c) α-carbon attached to 4 different groups
d) its acidic nature

Ans:- D

2. The role of CO_2 in Kolbe's reaction is

a) acts as catalyst b) act as nucleophile
c) act as weak electrophile
d) act as strong electrophile.

Ans:- C

3. Statement I: Enantiomers are non-superimposable mirror images on each other.
Statement II: A racemic mixture shows zero optical rotation.

Identify the correct statement

a) Both statement I and II are correct
b) Both statement I and II are incorrect
c) Statement I is correct and statement II is incorrect.
d) Statement I is incorrect and statement II is correct

Ans:- (a) Both statement I and II are correct

4. Which of the reactions below can result in ketones?

a) Oxidation of primary alcohols
b) Oxidation of secondary alcohols
c) Dehydrogenation of tertiary alcohols
d) Dehydrogenation of primary alcohols

Ans: b

Expln: Ketones are formed when secondary alcohols are oxidised and dehydrogenated. Aldehydes are produced by the same processes with primary alcohols.

4.The geometry and magnetic behaviour of the complex [Ni(CO)4] are

a) Square planar and paramagnetic
b) Tetrahedral and diamagnetic
c) Square planar and diamagnetic
d) Tetrahedral and paramagnetic

Ans:- (b) Tetrahedral and diamagnetic

5. The volume occupied by a single gas in a mixture at the same temperature and pressure is referred to as the single-gas volume.

a) Absolute volume b) Partial volume
c) Total volume of a gas mixture
d) None of the mentioned

Ans: b

Expln: At the same temperature and pressure, the volume occupied by a single gas alone in a combination is a portion of a volume.

6. When acetamide is converted to methylamine, what is the name of the reaction?

a) Friedel-Craft's reaction
b) Hofmann reaction
c) Hoffmann bromamide degradation reaction
d) Hinsberg reaction

Ans: c

Expln: When bromine is added to an amide in an aqueous or ethanolic sodium hydroxide solution, the amide degrades, resulting in the creation of primary amine. Hoffmann bromamide degradation reaction is a reaction that involves the degradation of an amide.

7. Which of the following assertions about the main cell is correct?

a) An example of a primary cell is a mercury cell
b) An example of a primary cell is a nickel-cadmium storage cell
c) The electrode reactions can be reversed
d) It can be recharged

Ans: a

Expln: A primary cell is one in which the electrode reactions only happen once and cannot be reversed with electrical energy. As a result, primary cells are unable to be recharged. A main cell, such as a mercury cell, is different from a secondary cell, such as a nickel-cadmium storage cell.

8. Match the following

List-I	List-II
A) Glucocorticoids	i) Responsible for development of secondary female characteristics.
B) Mineralocorticoids	ii) Responsible for preparing the uterus for implantation of fertilised egg
C) Testosterone	iii) Control carbohydrates metabolism
D) Estradiol	iv) Responsible for development of secondary male characteristics.
	v) Control level of excretion of water and salt by kidney.

a) A-(iv), B-(v), C-(ii), D-(i) b) A-(iii), B-(v), C-(iv), D-(i)
c) A-(ii), B-(i), C-(v), D-(iv) d) A-(iii), B-(ii), C-(iv), D-(i)

Ans:-b

9.Fill in the blanks by choosing the appropriate word from those given in the brackets: (aldehydes, phenol, fluorobenzene, decreases, greater, benzene)

1. The melting point of interstitial compound is ________ than the pure metal.

Ans: greater,

2. Benzenediazonium fluoroborate on heating decomposes to give________

Ans:- fluorobenzene

3. The simplest hydroxy derivative of benzene is ________

Ans:- phenol,

4. When a non-volatile solute is added to the pure solvent, the freezing point of solvent______

Ans:- decreases,

5. Ozonolysis of alkenes followed by reaction with zinc dust and water gives ____

Ans:- aldehydes,

ಮದುವೆಯ ನೆನಪಿಗಾಗಿ ನಟ ಧನಂಜಯ ವಿನೂತನ ಹೆಜ್ಜೆ

ಹಟ್ಟೂರ ಶಾಲೆಗೆ ಡಾಲಿ ನೆರವು

● ಎ.ಎಸ್. ರಮೇಶ್



ಅರಸೀಕೆರೆ ತಾಲ್ಲೂಕಿನ ಕಾಳೇನಹಳ್ಳಿ ಹಟ್ಟಿಯ ಸರ್ಕಾರಿ ಶಾಲೆಗೆ ಭೇಟಿ ನೀಡಿದ ನಟ ಡಾಲಿ ಧನಂಜಯ ಕಾಮಗಾರಿ ವೀಕ್ಷಿಸಿದರು

ಅರಸೀಕೆರೆ (ಹಾಸನ): ನಟ ಡಾಲಿ ಧನಂಜಯ ತಮ್ಮ ಮದುವೆಯ ನೆನಪಿಗಾಗಿ, ಹುಟ್ಟೂರಾದ ತಾಲ್ಲೂಕಿನ ಕಾಳೇನಹಳ್ಳಿ ಹಟ್ಟಿಯ ಸರ್ಕಾರಿ ಶಾಲಾಭಿವೃದ್ಧಿಗೆ ಆರ್ಥಿಕ ನೆರವು ನೀಡಿದ್ದಾರೆ.

ಶಾಲೆಯಲ್ಲಿ 1 ರಿಂದ 7 ನೇ ತರಗತಿಯವರೆಗೆ 80 ಮಕ್ಕಳು ಕಲಿಯುತ್ತಿದ್ದು, ಸೋರುವಿಕೆ ತಪ್ಪಿಸಲು ಚಾವಣಿಗೆ ಚುರಿಕೆ, ನೆಲ ಅಂತಸ್ತಿನ ಕಲ್ಲು, ಗಾರೆ ದುರಸ್ತಿ, ಟೈಲ್ಸ್, ಗೋಡೆಗಳಿಗೆ ಸುಣ್ಣಬಣ್ಣ ಮಾಡಿಸಿದ್ದಾರೆ. ಶಿಕ್ಷಕರ ಕೊಠಡಿ, ಶೌಚಾಲಯ, ಕಾಂಪೌಂಡ್, ಗೇಟ್ ದುರಸ್ತಿ ಮಾಡಿಸಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆ ಮಾಡಿ, ಸುಸಜ್ಜಿತ ಅಡುಗೆ ಮನೆ, ಓವರ್ ಹೆಡ್ ಟ್ಯಾಂಕ್ ನಿರ್ಮಿಸಿ, ಹೊಸ ಕಿಟಕಿ, ಕುರ್ಚಿ– ಮೇಜನ್ನೂ ಪೂರೈಸಿದ್ದಾರೆ.

'ಧನಂಜಯ ಅವರ ಈ ಕಾರ್ಯದಿಂದ ಸಂತಸವಾಗಿದೆ' ಎಂದು ಗ್ರಾಮಸ್ಥರು ಹೇಳಿದರೆ, ಸುಮಾರು ₹10 ಲಕ್ಷ ವೆಚ್ಚದಲ್ಲಿ ಶಾಲೆಗೆ ಮೂಲಸೌಲಭ್ಯ ಒದಗಿಸಿದ ಅವರ ನಡೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಶಂಸೆ ವ್ಯಕ್ತವಾಗುತ್ತಿದೆ. ಅವರು ಶಾಲೆಗೆ ಭೇಟಿ ನೀಡಿ, ಅಭಿವೃದ್ಧಿ ಕುರಿತು ಚರ್ಚಿಸುತ್ತಿರುವ ವಿಡಿಯೊ ಕೂಡ ಹೆಚ್ಚು ಹರಿದಾಡಿದೆ.


ಅವರ ಮದುವೆ ಚಿತ್ರದುರ್ಗದ ವೈದ್ಯೆ ಡಾ.ಧನ್ಯತಾ ಅವರೊಂದಿಗೆ ಫೆಬ್ರುವರಿ 15 ಮತ್ತು 16ರಂದು ಮೈಸೂರಿನಲ್ಲಿ ನಡೆಯಲಿದೆ. ಈ ಶಾಲೆಯಲ್ಲಿ ಓದದಿದ್ದರೂ ಅವರು ತವರೂರಿನ ಮೇಲಿನ ಅಭಿಮಾನದಿಂದ ಅಭಿವೃದ್ಧಿಗೆ ಮುಂದಾಗಿದ್ದಾರೆ.

'ಶಾಲೆಗೆ ಮೂಲಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುವುದಕ್ಕೆ ಇಲಾಖೆಯು ಧನಂಜಯ ಮತ್ತು ಅವರ ಕುಟುಂಬದವರಿಗೆ ಆಭಾರಿಯಾಗಿದೆ. ಸಾಧಕರ ಇಂಥ ಔದಾರ್ಯಗಳಿಂದ ಗ್ರಾಮೀಣ ಮಕ್ಕಳ ವಿದ್ಯಾಭ್ಯಾಸಕ್ಕೆ ಅನೂಕೂಲವಾಗುತ್ತದೆ' ಎಂದು ಕ್ಷೇತ್ರಶಿಕ್ಷಣಾಧಿಕಾರಿ ಮೋಹನ್ ಕುಮಾರ್ ಪ್ರತಿಕ್ರಿಯಿಸಿದ್ದಾರೆ.

'ಧನಂಜಯ ಅವರ ಸಾಮಾಜಿಕ ಕಳಕಳಿ ಶ್ಲಾಘನೀಯ. ಗ್ರಾಮೀಣ ಭಾಗದ ಶೈಕ್ಷಣಿಕ ಅಭಿವೃದ್ಧಿಗೂ ಇದು ಪೂರಕವಾದ ನಡೆ. ಶಾಲೆಯಲ್ಲಿ ದಾಖಲಾತಿ ಹೆಚ್ಚಳಕ್ಕೂ ಸಹಕಾರಿ' ಎಂದು ಮುಖ್ಯ ಶಿಕ್ಷಕ ನಂಜೇಗೌಡ ಸಿ. ತಿಳಿಸಿದ್ದಾರೆ.

ಬಾಲಸುಬ್ರಹ್ಮಣ್ಯಂಗೆ ಮಂಗಳೂರು ಲಿಟ್ ಫೆಸ್ಟ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಮಂಗಳೂರು: ಮಂಗಳೂರು ಲಿಟ್ ಫೆಸ್ಟ್‌ನ ಈ ವರ್ಷದ ಪ್ರಶಸ್ತಿಗೆ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಸಾಮರ್ಥ್ಯ ಅಭಿವೃದ್ಧಿ ಆಯೋಗದ ಸದಸ್ಯ ಹಾಗೂ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥಾಪಕ ಅಧ್ಯಕ್ಷ ಡಾ.ಆರ್. ಬಾಲಸುಬ್ರಹ್ಮಣ್ಯಂ ಅವರನ್ನು ಆಯ್ಕೆ ಮಾಡಲಾಗಿದೆ.

ಮಂಗಳೂರು ಲಿಟ್ ಫೆಸ್ಟ್ (ಸಾಹಿತ್ಯ ಹಬ್ಬ) ಇದೇ 11 ಮತ್ತು 12ರಂದು ನಗರದಲ್ಲಿ ನಡೆಯಲಿದ್ದು, 12ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಭಾರತ ಫೌಂಡೇಷನ್‌ನ ಸುನಿಲ ಕುಲಕರ್ಣಿ, ಶ್ರೀರಾಜ ಗುಡಿ ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಾಹಿತ್ಯ ಹಬ್ಬವನ್ನು ಎಸ್.ಎಲ್. ಭೈರಪ್ಪ ಉದ್ಘಾಟಿಸಲಿದ್ದು, 34 ಗೋಷ್ಠಿಗಳಲ್ಲಿ 72 ಪರಿಣತರು ವಿಷಯ ಮಂಡಿಸಲಿದ್ದಾರೆ. 6 ಇಂಗ್ಲಿಷ್ ಹಾಗೂ 8 ಕನ್ನಡ ಪುಸ್ತಕ ಬಿಡುಗಡೆಗೊಳ್ಳಲಿವೆ. ಅಂಧರಿಗಾಗಿ ಒಂದು ಗೋಷ್ಠಿ ಏರ್ಪಡಿಸಲಾಗಿದೆ. ಒಂದು ಗೋಷ್ಠಿಯನ್ನು ಸಂಪೂರ್ಣವಾಗಿ ಸಂಸ್ಕೃತದಲ್ಲಿ ನಡೆಸಲಾಗುವುದು. ಸಾಹಿತ್ಯ ಹಬ್ಬದಲ್ಲಿ ಪಾಲ್ಗೊಳ್ಳುವವರು ತಮ್ಮ ಹೆಸರನ್ನಾದರೂ ತುಳುವಿನಲ್ಲಿ ಬರೆಯುವಂತಾಗಬೇಕು ಎಂಬ ಆಶಯದೊಂದಿಗೆ ತುಳು ಲಿಪಿ ಕಾರ್ಯಾಗಾರ ಆಯೋಜಿಸಲಾಗಿದೆ ಎಂದರು.

ಯುಜಿಸಿ ನಿಯಮ ತಿದ್ದುಪಡಿ ಸಂಘರ್ಷಕ್ಕೆ ನಾಂದಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿ, ರಾಜ್ಯದ ವಿಶ್ವವಿದ್ಯಾಲಯ ಕುಲಪತಿಗಳ ನೇಮಕಾತಿ ಅಧಿಕಾರವನ್ನು ರಾಜ್ಯಪಾಲರಿಗೆ ನೀಡುತ್ತಿರುವ ಕೇಂದ್ರ ಸರ್ಕಾರದ ಕ್ರಮ ಖಂಡನೀಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ರಾಜ್ಯ ಸರ್ಕಾರಗಳ ಅಧಿಕಾರವನ್ನು ಮೊಟಕುಗೊಳಿಸುವ ಸಣ್ಣ ಅವಕಾಶವನ್ನೂ ಬಿಟ್ಟುಕೊಡದ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರದ ಕಣ್ಣು ಈಗ ರಾಜ್ಯದ ವಿಶ್ವವಿದ್ಯಾಲಯಗಳ ಮೇಲೆ ಬಿದ್ದಿದೆ. ಯುಜಿಸಿ ನೇಮಕಾತಿಯ ಕರಡು ನಿಯಮಾವಳಿಗಳನ್ನು ರಾಜ್ಯ ಸರ್ಕಾರ ಪರಿಶೀಲಿಸಲಿದೆ. ರಾಜ್ಯ ಸರ್ಕಾರದ ಅಧಿಕಾರ ಮೊಟಕುಗೊಳಿಸುವ ಅಂಶಗಳ ವಿರುದ್ಧ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ ನಡೆಸಲಾಗುವುದು ಎಂದಿದ್ದಾರೆ.

ಈಗಿರುವ ನಿಯಮಾವಳಿಗಳ ಪ್ರಕಾರ ಕುಲಪತಿಗಳ ನೇಮಕಾತಿಗೆ ರಾಜ್ಯ ಸರ್ಕಾರ ಶೋಧನಾ ಸಮಿತಿ ರಚಿಸುತ್ತಿತ್ತು. ಕುಲಾಧಿಪತಿಯೂ ಆದ ರಾಜ್ಯಪಾಲರು ಸಮಿತಿಯ ಸದಸ್ಯರನ್ನೂ ಶಿಫಾರಸು ಮಾಡುವ ಅಧಿಕಾರ ಹೊಂದಿದ್ದರು. ಹೊಸ ನಿಯಮಗಳ ಪ್ರಕಾರ ರಾಜ್ಯಪಾಲರು ಸೂಚಿಸುವ ವ್ಯಕ್ತಿಯೇ ಶೋಧನಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಇದು ರಾಜ್ಯ ಸರ್ಕಾರಗಳ ಮೇಲೆ ಕೇಂದ್ರ ನಡೆಸುತ್ತಿರುವ ಸವಾರಿ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಕುಲಪತಿಗಳ ನೇಮಕಾತಿಗಾಗಿ ರಾಷ್ಟ್ರಮಟ್ಟದ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ಅರ್ಜಿಗಳನ್ನು ಆಹ್ವಾನಿಸಬೇಕು ಎಂದು ಯುಜಿಸಿ ಹೊಸ ನಿಯಮ ಹೇಳುತ್ತಿದೆ. ಇಲ್ಲಿಯವರೆಗೂ ಆಯಾ ರಾಜ್ಯಗಳ ವಿದ್ವಾಂಸರಿಗಷ್ಟೇ ಸೀಮಿತವಾಗಿದ್ದ ಹುದ್ದೆಗಳಲ್ಲಿ ಅನ್ಯಭಾಷಿಕರು ಬಂದು ಕೂರುವ ಅಪಾಯ ಇದೆ. ಅಲ್ಲದೇ, ಕೇವಲ ಬೋಧನಾ ವಲಯದಿಂದ ಮಾತ್ರ ನೇಮಿಸಿಕೊಳ್ಳದೆ, ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರದ ಉದ್ಯಮಿಗಳು, ಸಾರ್ವಜನಿಕ ಆಡಳಿತದ ನೀತಿ–ನಿರೂಪಕರು ಸೇರಿದಂತೆ ಬೇರೆ ಕ್ಷೇತ್ರ-ದಲ್ಲಿರುವ ತಜ್ಞರನ್ನು ಕುಲಪತಿಯಾಗಿ ನೇಮಿಸ ಬಹುದು. ಇದು ಸರಿಯಲ್ಲ ಎಂದಿದ್ದಾರೆ.

ಶಿಕ್ಷಣ ಕ್ಷೇತ್ರದ ನಿರ್ವಹಣೆ ರಾಜ್ಯ ಸರ್ಕಾರದ ಪರಮಾಧಿಕಾರ. ಹೊಸ ನೀತಿ ಕೇಂದ್ರ ಮತ್ತು ರಾಜ್ಯಗಳ ನಡುವೆ ಘರ್ಷಣೆ ನಾಂದಿ ಹಾಡಬಹುದು. ಒಕ್ಕೂಟ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಇಂತಹ ನಡವಳಿಕೆಗಳನ್ನು ರಾಜ್ಯ ಸರ್ಕಾರ ಸಹಿಸುವುದಿಲ್ಲ. ಬಿಜೆಪಿಯೇತರ ಸರ್ಕಾರವಿರುವ ರಾಜ್ಯಗಳ ಜೊತೆಯಲ್ಲಿ ಈ ಕುರಿತು ಚರ್ಚಿಸಿ, ಮುಂದಿನ ಹೆಜ್ಜೆಯ ಬಗ್ಗೆ ತೀರ್ಮಾನ ಮಾಡಲಾಗುವುದು ಎಂದು ಹೇಳಿದ್ದಾರೆ.

ಮೂವರಿಗೆ ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ



ತಾರಾ ಅನೂರಾಧಾ



ಮೀನಾಕ್ಷಿ ಬಾಳಿ



ವೇದರಾಣಿ ದಾಸನೂರು

ವಿಜಯಪುರ: 'ನಟಿ ತಾರಾ ಅನೂರಾಧಾ, ಸಾಹಿತಿ ಮೀನಾಕ್ಷಿ ಬಾಳಿ ಹಾಗೂ ಶಿಗ್ಗಾವಿಯ ಉತ್ಸವ ರಾಕ್ ಗಾರ್ಡನ್ ನಿರ್ವಾಹಕಿ ವೇದರಾಣಿ ದಾಸನೂರು ಅವರಿಗೆ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು' ಎಂದು ಕುಲಪತಿ ಪ್ರೊ. ತುಳಸಿಮಾಲಾ ತಿಳಿಸಿದರು.

'ವಿಶ್ವವಿದ್ಯಾಲಯದ ಆವರಣದಲ್ಲಿ ಗುರುವಾರ ನಡೆಯುವ 16ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಡಾಕ್ಟರೇಟ್ ಪ್ರದಾನ ಮಾಡುವರು' ಎಂದು ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. 'ವಿಶ್ವ-ವಿದ್ಯಾಲಯದ ವಿವಿಧ ಸ್ನಾತಕ, ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಗರಿಷ್ಠ ಅಂಕ ಗಳಿಸಿ ಉತ್ತೀರ್ಣರಾದ ಒಟ್ಟು 63 ವಿದ್ಯಾರ್ಥಿನಿಯರಿಗೆ 80 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಗುವುದು. 13,461 ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರಿಗೆ ಪದವಿ ಮತ್ತು 34 ವಿದ್ಯಾರ್ಥಿನಿಯರಿಗೆ ಪಿಎಚ್.ಡಿ ಪದವಿ ಪ್ರದಾನ ಮಾಡಲಾಗುವುದು' ಎಂದರು.

ಮೂವರು ಕೈದಿಗಳ ಸಾವು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಕೇಂದ್ರ ಕಾರಾಗೃಹದ ಮೂವರು ಸಜಾ ಕೈದಿಗಳು ಅನಾರೋಗ್ಯದಿಂದ ಮೃತಪಟ್ಟಿದ್ದು, ಕಾರಾಗೃಹ ಡಿಐಜಿ ಕೆ.ಸಿ.ದಿವ್ಯಶ್ರೀ ಬುಧವಾರ ಭೇಟಿ ನೀಡಿ ಸ್ಥಳ ಪರಿಶೀಲಿಸಿ, ಅಧಿಕಾರಿಗಳಿಂದ ಮಾಹಿತಿ ಪಡೆದರು.

ಕೊಲೆ ಪ್ರಕರಣದ ಅಪರಾಧಿಗಳಾದ ಗುಂಡ್ಲುಪೇಟೆಯ ಮಾದೇಶ (36), ಕೊಳ್ಳೇಗಾಲದ ನಾಗರಾಜ್ (32), ಅತ್ಯಾಚಾರ ಪ್ರಕರಣದ ಅಪರಾಧಿ ಸಕಲೇಶಪುರದ ರಮೇಶ್ (30) ಮೃತರು. ಇವರು ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದರು. ಸೋಮವಾರ ರಾತ್ರಿ ಮಾದೇಶ, ಮಂಗಳವಾರ ಮಧ್ಯರಾತ್ರಿ ನಾಗರಾಜ್ ಹಾಗೂ ಬುಧವಾರ ಮಧ್ಯಾಹ್ನ ರಮೇಶ್ ಮೃತಪಟ್ಟರು.

ಕಾರಾಗೃಹದ ಬೇಕರಿ ವಿಭಾಗದಲ್ಲಿ ಮೂವರೂ ಕೆಲಸ ಮಾಡುತ್ತಿದ್ದರು. ಡಿಸೆಂಬರ್ 24ರಂದು ಕೆಲಸದ ನಡುವೆ ಕೇಕ್‌ಗೆ ಮಿತಿಮೀರಿದ ಪ್ರಮಾಣದಲ್ಲಿ ಸುಗಂಧ ದ್ರವ್ಯ ಬೆರೆಸಿ ತಿಂದಿದ್ದರಿಂದ ಹೊಟ್ಟೆನೋವು ಕಾಣಿಸಿಕೊಂಡಿತ್ತು. ಜೈಲು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಬಳಿಕ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿತ್ತು.

'ಕೈದಿಗಳು ಕೇಕ್‌ಗೆ ಸುಗಂಧ ದ್ರವ್ಯ ಹಾಕಿ ತಿಂದಿರುವ ವಿಚಾರವನ್ನು ನಮ್ಮಿಂದ ಹಾಗೂ ವೈದ್ಯಾಧಿಕಾರಿಗಳಿಂದ ಮುಚ್ಚಿಟ್ಟಿದ್ದರು. ಇದು ಅವರ ಪ್ರಾಣಕ್ಕೇ ತೊಂದರೆಯಾಯಿತು' ಎಂದು ಕಾರಾಗೃಹದ ಮುಖ್ಯ ಅಧೀಕ್ಷಕ ಪಿ.ಎಸ್. ರಮೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಮಂಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೈದ್ಯರು ಹೇಳುವುದೇನು?: 'ಮೂವರೂ ರೋಗಿಗಳು ಆಸ್ಪತ್ರೆಗೆ ದಾಖಲಾಗುವಾಗ ವಿಪರೀತ ವಾಂತಿ, ಭೇದಿ ಇತ್ತು. ಹೀಗಾಗಿ ಡಯಾಲಿಸಿಸ್ ಚಿಕಿತ್ಸೆ ನೀಡಿದೆವು. ದಿನ ಕಳೆದಂತೆ ಅವರು ಚಿಕಿತ್ಸೆಗೆ ಸ್ಪಂದಿಸಲಿಲ್ಲ, ಕಿಡ್ನಿ ಸಮಸ್ಯೆಯೂ ಕಾಣಿಸಿಕೊಂಡಿತು. ಯಾಕೆ ವಾಂತಿಯಾಗಿದೆ ಎಂದು ಕಾರಣ ಕೇಳಿದಾಗ ಸುಗಂಧ ದ್ರವ್ಯ ಸೇವಿಸಿದ್ದನ್ನು ತಡವಾಗಿ ತಿಳಿಸಿದರು. ನಾವು ಪ್ರತಿನಿತ್ಯ ತಿನ್ನುವ ಆಹಾರದಲ್ಲಿ ಯಾವುದಾದರೊಂದು ರೀತಿಯಲ್ಲಿ ಸುಗಂಧ ದ್ರವ್ಯ ಸೇರಿಕೊಂಡಿರುತ್ತದೆ. ಅದರಿಂದ ಸಾವು ಉಂಟಾಗುವ ಪ್ರಕರಣ ನಡೆದಿರುವುದು ವಿರಳ. ಇದೊಂದು ಅಧ್ಯಯನ ಮಾಡಬಹುದಾದ ವಿಷಯವೂ ಆಗಿದೆ. ಎಫ್‌ಎಸ್‌ಎಲ್ ವರದಿ ಬಂದ ಬಳಿಕ ಸಾವಿನ ಸ್ಪಷ್ಟ ಕಾರಣ ತಿಳಿಯಲಿದೆ' ಎಂದು ಕೆ.ಆರ್ ಆಸ್ಪತ್ರೆಯ ಪ್ರಭಾರ ವೈದ್ಯಕೀಯ ಅಧೀಕ್ಷಕ ಡಾ. ದಿನೇಶ್ ತಿಳಿಸಿದರು.

ಹೊಸಬೆಟ್ಟು: ಸಮುದ್ರಕ್ಕೆ ಈಜಲು ತೆರಳಿದ ಮೂವರ ಸಾವು

ಮಂಗಳೂರು: ಸುರತ್ಕಲ್ ಬಳಿಯ ಹೊಸಬೆಟ್ಟುವಿನಲ್ಲಿ ಅರಬ್ಬಿ ಸಮುದ್ರದಲ್ಲಿ ಈಜಲು ತೆರಳಿದ್ದ ನಾಲ್ವರು ಯುವಕರಲ್ಲಿ ಮೂವರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಒಬ್ಬ ಯುವಕನನ್ನು ಸ್ಥಳೀಯರು ರಕ್ಷಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಉಪ್ಪರಿಗೇನಹಳ್ಳಿಯ ಗುಳಿ ಹೊಸಹಳ್ಳಿಯ ಮಂಜುನಾಥ್ ಎನ್. (30), ವಿಜಯಪುರ ಜಿಲ್ಲೆಯ ಮುಳವಾಡದ ಶಿವಕುಮಾರ್ ಮಠಪತಿ (30) ಹಾಗೂ ಬೆಂಗಳೂರು ಜೆ.ಪಿ.ನಗರದ ಗೋವಿಂದಪ್ಪ ಬಡಾವಣೆಯ ಸತ್ಯವೇಲು (30) ಮೃತರು ಎಂದು ಪೊಲೀಸರು ತಿಳಿಸಿದ್ದಾರೆ.

'ಬೀದರ್ ಜಿಲ್ಲೆಯ ಹಂಗರಗಾದ ಪರಮೇಶ್ವರ್ (30) ಅವರನ್ನು ರಕ್ಷಿಸಲಾಗಿದೆ. ಬೆಂಗಳೂರಿನ ಎಎಂಸಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಇವರು ನಾಲ್ವರೂ ಸಹಪಾಠಿಗಳಾಗಿದ್ದರು. ಬೆಂಗಳೂರಿನ ಬೇರೆ ಬೇರೆ ಕಂಪನಿಗಳಲ್ಲಿ ಉದ್ಯೋಗದಲ್ಲಿದ್ದ ಅವರು ಸ್ವಿಫ್ಟ್ ಕಾರಿನಲ್ಲಿ ನಗರಕ್ಕೆ ಪ್ರವಾಸಕ್ಕೆ ಬಂದಿದ್ದರು' ಎಂದು ಪೊಲೀಸರು ತಿಳಿಸಿದರು.

ಪ್ರವಾಸಿಗರು ಮುಳುಗುತ್ತಿರುವುದನ್ನು ನೋಡಿ ಸ್ಥಳೀಯರಾದ ವಿದ್ಯಾಧರ್ ನೇತೃತ್ವದ ತಂಡವು ರಕ್ಷಣೆಗೆ ಧಾವಿಸಿತ್ತು. ಸಮುದ್ರದಲ್ಲಿ ಮುಳುಗುತ್ತಿದ್ದ ಪ್ರವಾಸಿಗರಲ್ಲಿ ಒಬ್ಬನನ್ನು ಮಾತ್ರ ಬದುಕಿಸಲು ಸಾಧ್ಯವಾಗಿದೆ. ಸುರತ್ಕಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ತಿಳಿಸಿದರು.

ಜ.14ರಿಂದ ಸಿಗಂದೂರು ಚೌಡೇಶ್ವರಿ ಜಾತ್ರೆ

ಪ್ರಜಾವಾಣಿ ವಾರ್ತೆ

ತುಮರಿ (ಶಿವಮೊಗ್ಗ): ನಾಡಿನ ಪ್ರಸಿದ್ಧ ಶಕ್ತಿದೇವತೆ ಸಿಗಂದೂರು ಚೌಡಮ್ಮನ ದೇಗುಲದಲ್ಲಿ ಜನವರಿ 14 ಮತ್ತು 15ರಂದು ಮಕರ ಸಂಕ್ರಮಣ ಜಾತ್ರಾ ಮಹೋತ್ಸವ ನಡೆಯಲಿದೆ.

'ಜ.14ರಂದು ಸಾಗರ ಶಾಸಕ ಗೋಪಾಲಕೃಷ್ಣ ಬೇಳೂರು, ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಸಾರಗನ ಜಡ್ಡು ಕಾರ್ತಿಕೇಯ ಪೀಠದ ಯೋಗೇಂದ್ರ ಅವಧೂತ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ' ಎಂದು ಧರ್ಮಾಧಿಕಾರಿ ಎಸ್.ರಾಮಪ್ಪ ಹೇಳಿದ್ದಾರೆ.

'ಅಂದು ಬೆಳಿಗ್ಗೆ 4 ಗಂಟೆಗೆ ಮಹಾಭಿಷೇಕ, ಅಲಂಕಾರ ಪೂಜೆ, ಗೋಪೂಜೆ, ಗುರುಪೂಜೆ, ಬೆಳಿಗ್ಗೆ 8ರಿಂದ ಚಂಡಿಕಾ ಹವನ, ದೇವಿ ಮೂಲ ಸ್ಥಾನದಲ್ಲಿ ನವ ಚಂಡಿಕಾ ಹವನ ನಡೆಯಲಿದೆ. ಬೆಳಿಗ್ಗೆ 9ರಿಂದ ಮೂಲ ಸ್ಥಾನದಿಂದ ಧರ್ಮಾಧಿಕಾರಿ ನೇತೃತ್ವದ ಪಲ್ಲಕ್ಕಿ ಉತ್ಸವ, ಜ್ಯೋತಿ ಮೆರವಣಿಗೆ ಜರುಗಲಿದೆ.

ಜಾತ್ರೆಯ ಪ್ರಯುಕ್ತ ಸಿಗಂದೂರು ಮೇಳದಿಂದ 'ರಾಗ ಚಂದ್ರಿಕೆ' ಯಕ್ಷಗಾನ ಪ್ರದರ್ಶನ ನಡೆಯಲಿದೆ' ಎಂದು ಹೇಳಿದ್ದಾರೆ. ಜ. 15ರಂದು ಧಾರ್ಮಿಕ ಕಾರ್ಯಕ್ರಮ, ದುರ್ಗಾದೀಪ ಪೂಜೆ, ರಂಗಪೂಜೆ, 8:30 ರಿಂದ ಶಮಿತಾ ಮಲ್ನಾಡ್ ತಂಡದಿಂದ 'ಸ್ವರ ಸಿಂಗಾರ' ಕಾರ್ಯಕ್ರಮ ನಡೆಯಲಿದೆ ಎಂದು ದೇವಸ್ಥಾನ ಆಡಳಿತ ಮಂಡಳಿ ತಿಳಿಸಿದೆ.

ಬಾಲಕಿಯ ಪ್ರೀತಿಸುತ್ತಿದ್ದ ದಲಿತ ಯುವಕನ ಕೊಲೆ

ಪ್ರಜಾವಾಣಿ ವಾರ್ತೆ



ಸುಮಿತ್

ಬೀದರ್: ಗೌಳಿ ಸಮುದಾಯದ ಬಾಲಕಿಯನ್ನು ಪ್ರೀತಿಸುತ್ತಿದ್ದ ದಲಿತ ಯುವಕನನ್ನು ಮನಬಂದಂತೆ ಥಳಿಸಿದ್ದರಿಂದ ಆತ ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಕಮಲನಗರ ತಾಲ್ಲೂಕಿನ ಕುಶನೂರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಕಿಯ ತಂದೆ ಹಾಗೂ ಸಹೋದರನನ್ನು ಬಂಧಿಸಲಾಗಿದೆ.

ಕಮಲನಗರ ತಾಲ್ಲೂಕಿನ ಬೆಡಕುಂದಾ ಗ್ರಾಮದ ಸುಮಿತ್ (19) ಮೃತ ಯುವಕ. ಬಿಎಸ್ಸಿ ಪ್ರಥಮ ವರ್ಷದಲ್ಲಿ ಓದುತ್ತಿದ್ದ ಸುಮಿತ್ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಗೌಳಿ ಸಮುದಾಯಕ್ಕೆ ಸೇರಿದ ಬಾಲಕಿಯನ್ನು ಪ್ರೀತಿಸುತ್ತಿದ್ದರು.

ಸುಮಿತ್ ಭಾನುವಾರ (ಜ.5) ಬಾಲಕಿಯೊಂದಿಗೆ ಆಕೆಯ ಮನೆಯಲ್ಲಿ ಏಕಾಂತದಲ್ಲಿರುವ ವಿಷಯ ತಿಳಿದು, ಬಾಲಕಿಯ ಪೋಷಕರು, ಆತನನ್ನು ಹಿಡಿದು ಬಡಿಗೆ ಸೇರಿದಂತೆ ಇತರೆ ವಸ್ತುಗಳಿಂದ ಮನಬಂದಂತೆ ಥಳಿಸಿದ್ದಾರೆ. ಬಳಿಕ ಅವರ ಕುಟುಂಬದವರಿಗೆ ವಿಷಯ ತಿಳಿಸಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಯುವಕನಿಗೆ ಮಹಾರಾಷ್ಟ್ರದ ಉದಗೀರ್, ಲಾತೂರ್‌ನಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಆದರೆ, ಚಿಕಿತ್ಸೆ ಫಲಿಸದೆ ಮಂಗಳವಾರ (ಜ.7) ರಾತ್ರಿ ಮೃತಪಟ್ಟಿದ್ದಾರೆ. ನಗರದ ಬ್ರಿಮ್ಸ್‌ನಲ್ಲಿ ಶವದ ಮರಣೋತ್ತರ ಪರೀಕ್ಷೆ ನಡೆಸಿ, ಕುಟುಂಬದವರಿಗೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೊಲೆಗೆ ಕಾರಣರಾದವರನ್ನು ಬಂಧಿಸಬೇಕು ಎಂದು ಆಗ್ರಹಿಸಿ ಸುಮಿತ್ ಪೋಷಕರು ಕೆಲಕಾಲ ಬ್ರಿಮ್ಸ್ ಎದುರು ಧರಣಿ ನಡೆಸಿದರು. ಸುಮಿತ್ ಅವರ ತಂದೆ ವಿಜಯಕುಮಾರ ಮಾರುತಿ ಅವರು ಕೊಟ್ಟಿರುವ ದೂರಿನ ಮೇರೆಗೆ ಕುಶನೂರ ಪೊಲೀಸ್ ಠಾಣೆಯಲ್ಲಿ ಎಸ್‌ಸಿ/ಎಸ್‌ಟಿ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಕಾಡುಕೋಣ ದಾಳಿ: ಕಾರ್ಮಿಕ ಮಹಿಳೆ ಸಾವು

ಮೂಡಿಗೆರೆ (ಚಿಕ್ಕಮಗಳೂರು): ತಾಲ್ಲೂಕಿನ ಹಳೇಕೋಟೆ ಗ್ರಾಮದಲ್ಲಿ ಬುಧವಾರ ಬೆಳಿಗ್ಗೆ ಕಾಫಿ ಕೊಯ್ಲು ಮಾಡುತ್ತಿದ್ದಾಗ ಕಾಡುಕೋಣ ದಾಳಿ ನಡೆಸಿದ್ದು, ಅಸ್ಸಾಂ ಮೂಲದ ಬಸೂರಿ ಬೀಬಿ (42) ಎಂಬ ಕಾರ್ಮಿಕ ಮಹಿಳೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹಳೆಕೋಟೆ ಗ್ರಾಮದ ಕಾಫಿ ಬೆಳೆಗಾರ ರಮೇಶ್ ಅವರ ಕಾಫಿ ತೋಟದಲ್ಲಿ ಅಸ್ಸಾಂ ಮೂಲದ ಕಾರ್ಮಿಕರು ಕಾಫಿ ಕೊಯ್ಲು ಮಾಡುತ್ತಿದ್ದಾಗ ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಕಾಡುಕೋಣ ಏಕಾಏಕಿ ಕಾರ್ಮಿಕರ ಮೇಲೆ ದಾಳಿ ನಡೆಸಿದೆ.

ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಆತ್ಮಹತ್ಯೆಗೆ ರೈತ ಮಹಿಳೆಯರ ಯತ್ನ

ಗದಗ: 'ಕಡಲೆ ಖರೀದಿಸಿ ಬಾಕಿ ಹಣ ₹6.50 ಕೋಟಿ ಕೊಡದೇ ವಂಚಿಸಿದವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಆರೋಪಿಸಿ ಗದಗ ಮತ್ತು ಮುಂಡರಗಿ ತಾಲ್ಲೂಕಿನ ರೈತರು ಜಿಲ್ಲಾಡಳಿತ ಭವನದ ಎದುರು ಬುಧವಾರ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದ್ದ ವೇಳೆ ಇಬ್ಬರು ರೈತ ಮಹಿಳೆಯರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದರು.

ಸರಸ್ವತಿ ದಾಸರ ಹಾಗೂ ಗೀತಾ ಬಾಲಪ್ಪನವರ ಅವರು ವಿಷ ಸೇವಿಸಿದ ಕೂಡಲೇ ಅಸ್ವಸ್ಥಗೊಂಡರು. ಇದರಿಂದ ಕೆಲ ಹೊತ್ತು ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಅವರನ್ನು ತಕ್ಷಣವೇ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲಾಯಿತು. 'ಜಿಲ್ಲಾ ಆಸ್ಪತ್ರೆಯಲ್ಲಿ ಇಬ್ಬರಿಗೂ ಚಿಕಿತ್ಸೆ ಮುಂದುವರೆದಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಔಷಧ ಕಾನೂನುಬಾಹಿರ ಮಾರಾಟ

• ವರುಣ ಹೆಗಡೆ

ಬೆಂಗಳೂರು: ಖಾಸಗಿ ಔಷಧ ಮಳಿಗೆಗಳು ಕಾನೂನು ಬಾಹಿರವಾಗಿ ಔಷಧಗಳನ್ನು ಮಾರಾಟ ಮಾಡುತ್ತಿರುವುದು ಔಷಧ ನಿಯಂತ್ರಣ ಇಲಾಖೆ ನಡೆಸಿದ ಪರಿಶೀಲನೆಯಿಂದ ದೃಢಪಟ್ಟಿದೆ. ಅಂತಹ ಸಾವಿರಕ್ಕೂ ಅಧಿಕ ಔಷಧ ಮಳಿಗೆಗಳ ಪರವಾನಗಿ ಅಮಾನತು ಮಾಡಲಾಗಿದೆ.

ಔಷಧ ಮಳಿಗೆಗಳು ಔಷಧ ಮತ್ತು ಕಾಂತಿವರ್ಧಕ ನಿಯಮಾವಳಿಗಳ ಅಡಿ ಕಾರ್ಯನಿರ್ವಹಿಸಬೇಕಿದೆ. ರಾಜ್ಯದಲ್ಲಿ 37 ಸಾವಿರಕ್ಕೂ ಅಧಿಕ ಖಾಸಗಿ ಔಷಧ ಮಳಿಗೆಗಳಿವೆ. ಅವುಗಳ ಕಾರ್ಯವಿಧಾನ ಪರಿಶೀಲನೆ ಹಾಗೂ ಸಾರ್ವಜನಿಕರ ದೂರುಗಳ ಅನ್ವಯ ಔಷಧ ನಿಯಂತ್ರಕರನ್ನು ಒಳಗೊಂಡ ತಂಡವು ನಿಯಮಿತವಾಗಿ ರಾಜ್ಯದ ವಿವಿಧೆಡೆ ಪರಿಶೀಲನೆ ನಡೆಸುತ್ತಿದೆ.



ಔಷಧ ನಿಯಂತ್ರಣ ಇಲಾಖೆ ಪ್ರಕಾರ, 2023–24ನೇ ಸಾಲಿನಲ್ಲಿ 21,694 ಔಷಧ ಮಳಿಗೆಗಳ ಪರಿಶೀಲನೆ ನಡೆಸಲಾಗಿದೆ. ಈ ವೇಳೆ ಸಾವಿರಾರು ಮಳಿಗೆಗಳು ನಿಯಮಬಾಹಿರ ಕಾರ್ಯನಿರ್ವಹಿಸುತ್ತಿರುವುದು ದೃಢಪಟ್ಟಿದೆ. ಈ ಕಾರಣ 1,245 ಔಷಧ ಮಳಿಗೆಗಳ ಪರವಾನಗಿ ಅಮಾನತುಗೊಳಿಸಿದರೆ, 292 ಔಷಧ ಮಳಿಗೆಗಳ ಪರವಾನಗಿಯನ್ನು ರದ್ದುಗೊಳಿಸಲಾಗಿದೆ.

ಔಷಧ ನಿಯಂತ್ರಣಾಧಿಕಾರಿಗಳು ನಡೆಸಿದ ಪರಿಶೀಲನೆ ಅವಧಿಯಲ್ಲಿ ವೈದ್ಯರ ಸಲಹಾ ಚೀಟಿ ಇಲ್ಲದೆ ಔಷಧ ಮಾರಾಟ, ಅವಧಿ ಮೀರಿದ ಔಷಧ ವಿತರಣೆ, ಗೊತ್ತುಪಡಿಸಿದ ದರಕ್ಕಿಂತ ಹೆಚ್ಚಿನ ಹಣಕ್ಕೆ ಮಾರಾಟ, ಅಗತ್ಯ ವಿದ್ಯಾರ್ಹತೆ ಹೊಂದಿರದಿರುವುದು, ಫಾರ್ಮಾಸಿಸ್ಟ್‌ಗಳ ಗೈರು ಹಾಜರಿಯಲ್ಲಿ ಔಷಧ ಮಾರಾಟ, ಅವಧಿ ಮೀರಿದ ಔಷಧಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಎಸೆದಿರುವುದು, ವೈದ್ಯರು ಸೂಚಿಸಿದ ಕಂಪನಿಯ ಔಷಧದ ಬದಲು ಬೇರೆ ಕಂಪನಿಯ ಔಷಧ ವಿತರಣೆ ಸೇರಿ ವಿವಿಧ ಬಗೆಯಲ್ಲಿ ನಿಯಮ ಉಲ್ಲಂಘಿಸಿರುವುದು ಪತ್ತೆಯಾಗಿದೆ. ಈ ಕಾರಣಕ್ಕೆ ಪರವಾನಗಿಯನ್ನು ಅಮಾನತು ಮಾಡಲಾಗಿದೆ.

ಮಾದಕ ಔಷಧ ಮಾರಾಟ: ಔಷಧ ನಿಯಂತ್ರಣಾಧಿಕಾರಿ ಒಳಗೊಂಡ ತಂಡವು ನಡೆಸಿದ ದಾಳಿ ವೇಳೆ ಕೆಲ ಮಳಿಗೆಗಳಲ್ಲಿ ಕಾನೂನು ಬಾಹಿರವಾಗಿ ಮಾದಕ ಔಷಧವನ್ನು ಮಾರಾಟ ಮಾಡುತ್ತಿರುವುದು ದೃಢಪಟ್ಟಿದೆ. ನಿಯಮಿತವಾಗಿ ಔಷಧ ಮಳಿಗೆಗಳ ಪರಿಶೀಲನೆ ಜತೆಗೆ ಮಾದಕ ವಸ್ತುಗಳ ದುರ್ಬಳಕೆ ತಡೆಗೆ ವರ್ಷದಲ್ಲಿ ಮೂರು ದಿನ ವಿಶೇಷ ಪರೀಕ್ಷಾರ್ಥ ದಾಳಿ ನಡೆಸಲಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ 600ಕ್ಕೂ ಅಧಿಕ ಮಳಿಗೆಗಳ ಮೇಲೆ ದಾಳಿ ನಡೆಸಲಾಗಿದ್ದು, 400ಕ್ಕೂ ಅಧಿಕ ಮಳಿಗೆಗಳಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ. ಕಾನೂನುಬಾಹಿರ ಮಾದಕ ಔಷಧಗಳ ಮಾರಾಟದ ಕಾರಣಕ್ಕೆ 80ಕ್ಕೂ ಅಧಿಕ ಮಳಿಗೆಗಳ ಪರವಾನಗಿಯನ್ನು ಅಮಾನತು ಮಾಡಲಾಗಿದೆ.

‘ಔಷಧ ಮತ್ತು ಕಾಂತಿವರ್ಧಕ ನಿಯಮಾವಳಿಗಳ ಅಡಿ ಖಾಸಗಿ ಔಷಧ ಮಳಿಗೆಗಳನ್ನು ನಿಯಂತ್ರಿಸಲಾಗುತ್ತಿದ್ದು, ನಿಯಮ ಉಲ್ಲಂಘನೆ ಪತ್ತೆ ಸಂಬಂಧ ಮಳಿಗೆಗಳ ಮೇಲೆ ಅಧಿಕಾರಿಗಳ ತಂಡವು ನಿಯಮಿತವಾಗಿ ದಾಳಿ ನಡೆಸುತ್ತಿದೆ’ ಎಂದು ಔಷಧ ನಿಯಂತ್ರಣ ಇಲಾಖೆಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಔಷಧ ಮಳಿಗೆಗಳ ವಿವರ

- **37,130** ರಾಜ್ಯದಲ್ಲಿರುವ ಖಾಸಗಿ ಔಷಧ ಮಳಿಗೆಗಳು
- **07** ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಜನತಾ ಬಜಾರ್‌ಗಳು
- **23** ಜನಸಂಜೀವಿನಿ ಕೇಂದ್ರಗಳು
- **178** ಜನೌಷಧಿ ಕೇಂದ್ರಗಳು

ಔಷಧ ಮಳಿಗೆಗಳಲ್ಲಿ ನಿಯಮಬಾಹಿರ ಮಾದಕ ಔಷಧ ಮಾರಾಟ

ವರ್ಷ	ಪರಿಶೀಲನೆ	ಶೋಕಾಸ್ ನೋಟಿಸ್	ಅಮಾನತು	ಪ್ರಕರಣ ದಾಖಲು
2022–23	497	343	65	17
2023–24	205	129	24	06



ಔಷಧ ಮಳಿಗೆಗಳು ನಿಯಮ ಉಲ್ಲಂಘಿಸಿದಲ್ಲಿ ಪರವಾನಗಿ ರದ್ದತಿ ಮಾಡಲಾಗುತ್ತಿದೆ. ಮಾದಕ ವಸ್ತುಗಳ ನಿಯಮಬಾಹಿರ ಮಾರಾಟದ ಬಗ್ಗೆಯೂ ಪರಿಶೀಲನೆ ನಡೆಸಲಾಗುತ್ತಿದೆ

ದಿನೇಶ್ ಗುಂಡೂರಾವ್ ಆರೋಗ್ಯ ಸಚಿವ

ರಾಜಧಾನಿಯಲ್ಲಿಯೇ ಅಧಿಕ

ಕಾನೂನು ಬಾಹಿರ ಮಾದಕ ಔಷಧಗಳ ಮಾರಾಟಕ್ಕೆ ಸಂಬಂಧಿಸಿದಂತೆ ಮಾದಕ ಪದಾರ್ಥಗಳು ಹಾಗೂ ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್) ಅಡಿ ಎರಡು ವರ್ಷಗಳಲ್ಲಿ 23 ಮಳಿಗೆಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇವುಗಳಲ್ಲಿ 11 ಮಳಿಗೆಗಳು ಬೆಂಗಳೂರಿನಲ್ಲಿಯೇ ಇವೆ. ಶೋಕಾಸ್ ನೋಟಿಸ್ ನೀಡಲಾದ ಮಳಿಗೆಗಳ ಪಟ್ಟಿಯಲ್ಲಿಯೂ ಬೆಂಗಳೂರಿನ ಮಳಿಗೆಗಳೇ ಅಧಿಕ ಸಂಖ್ಯೆಯಲ್ಲಿದ್ದು, 2022–23 ರಲ್ಲಿ 93 ಹಾಗೂ 2023–24ರಲ್ಲಿ 45 ಮಳಿಗೆಗಳು ಶೋಕಾಸ್ ನೋಟಿಸ್ ಪಡೆದಿವೆ.

ಮುಖ್ಯವಾಹಿನಿ ಸೇರಿದವರಿಗೆ ಪ್ಯಾಕೇಜ್

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು/ಬೆಂಗಳೂರು: ಮುಖ್ಯವಾಹಿನಿಗೆ ಬಂದ ನಕ್ಸಲರಿಗೆ ತಲಾ ₹3 ಲಕ್ಷ ಪ್ರೋತ್ಸಾಹಧನ (ಮೊದಲ ಕಂತು) ಮಂಜೂರು ಮಾಡಿ ಜಿಲ್ಲಾಧಿಕಾರಿ ಮೀನಾ ನಾಗರಾಜ್ ಆದೇಶ ಹೊರಡಿಸಿದ್ದಾರೆ.

ಎಡಪಂಥೀಯ ತೀವ್ರಗಾಮಿಗಳ ಶರಣಾಗತಿ ಸಮಿತಿ ಮತ್ತು ಪುನರ್ವಸತಿ ಜಿಲ್ಲಾ ಸಮಿತಿ ಸಭೆ ನಡೆಸಲಾಗಿದೆ. ಶರಣಾದವರಿಗೆ ಮೊದಲ ಹಂತದಲ್ಲಿ ₹3 ಲಕ್ಷ ಮಂಜೂರು ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಮುಂಡಗಾರು ಲತಾ, ಸುಂದರಿ ಕುತ್ಲೂರು, ವನಜಾಕ್ಷಿ ಬಾಳೆಹೊಳೆ, ಮಾರೆಪ್ಪ ಆರೋಲಿ ಅವರು ‘ಎ’ ವರ್ಗದಲ್ಲಿದ್ದು, ಅವರಿಗೆ ಒಟ್ಟು ತಲಾ ₹7.50 ಲಕ್ಷ, ಹೊರ ರಾಜ್ಯದವರಾದ ಕೆ.ವಸಂತ ಮತ್ತು ಜಿಷಾ ಅವರಿಗೆ ತಲಾ ₹4 ಲಕ್ಷ ಪ್ರೋತ್ಸಾಹಧನ ಸಿಗಲಿದೆ.

ಅಮಿತ್ ಶಾ ಆನಂದಬಾಷ್ಪ ಗೊತ್ತಿಲ್ಲವೇ?

ರಾಜ್ಯದಲ್ಲಿ ಆರು ಮಂದಿ ನಕ್ಸಲೀಯರು ಶರಣಾಗುತ್ತಿರುವಾಗ ಬೆಚ್ಚಿಬಿದ್ದಿರುವ ಬಿಜೆಪಿ, ಕಳೆದ ತಿಂಗಳು ಛತ್ತೀಸಗಢದಲ್ಲಿ ಶರಣಾದ 30 ನಕ್ಸಲರನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಖುದ್ದಾಗಿ ಬರಮಾಡಿಕೊಂಡು ಆನಂದಬಾಷ್ಪ ಸುರಿಸಿದಾಗ ಯಾಕೆ ಬೆಚ್ಚಿ ಬೀಳಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಅಮಿತ್ ಶಾ ಅವರಿಗೆ ಈ ವಿಷಯ ಕೇಳುವ ದಮ್ಮು ಬಿಜೆಪಿ ಶಾಸಕ ಸುನೀಲ್ ಕುಮಾರ್ ಅವರಿಗೆ ಇದೆಯೇ? ಕಳೆದ ವರ್ಷ ಮಹಾರಾಷ್ಟ್ರದಲ್ಲಿ ಶರಣಾದ ನಕ್ಸಲ್ ದಂಪತಿಗೆ ಅಲ್ಲಿನ ಬಿಜೆಪಿ ಸರ್ಕಾರದ ದೇವೇಂದ್ರ ಫಡಣವೀಸ್ ಅವರು ₹41 ಲಕ್ಷ ರೂಪಾಯಿ ನೆರವು ನೀಡಿರುವುದು ರಾಜ್ಯ ಬಿಜೆಪಿ ನಾಯಕರಿಗೆ ಗೊತ್ತಿರಲಿಲ್ಲವೇ ಎಂದಿದ್ದಾರೆ.

‘ಶರಣಾಗಿರುವ ನಕ್ಸಲರು ಅನುಸರಿಸಿದ ಹಿಂಸಾ ಮಾರ್ಗದ ಬಗ್ಗೆ ವಿರೋಧವಿದೆ. ಆದರೆ, ಅವರಲ್ಲಿ ಯಾರೂ ಜನರ ತೆರಿಗೆ ಹಣವನ್ನು ನುಂಗಿದ ಭ್ರಷ್ಟರಲ್ಲ, ರಾಮ-ಪರಶುರಾಮನ ಮೂರ್ತಿ ನಿರ್ಮಾಣದಲ್ಲಿಯೂ ಮೋಸ ಮಾಡಿ, ಜೇಬು ತುಂಬಿಕೊಂಡವರೂ ಅಲ್ಲ. ಲಾಠಿ-ದೊಣ್ಣೆ, ಕತ್ತಿ-ತ್ರಿಶೂಲಗಳನ್ನು ನೀಡಿ ಅಮಾಯಕರನ್ನು ಹಿಂಸಾಮಾರ್ಗಕ್ಕೆ ಇಳಿಸಿ, ರಾಜಕೀಯ ಲಾಭ ಗಳಿಸುವ ಕುತಂತ್ರದ ರಾಜಕಾರಣವೂ ನಮ್ಮದಲ್ಲ’ ಎಂದು ಟೀಕಿಸಿದ್ದಾರೆ.



ಮಾರೆಪ್ಪ ಆರೋಲಿ, ವಸಂತ್ ಕೆ., ಜಿಷಾ ಎ.ಡಿ., ವನಜಾಕ್ಷಿ ಎಂ., ಸುಂದರಿ ಕುತ್ತಲೂರು, ಲತಾ ಮುಂಡಗಾರು ಅವರು ಕಾಡಿನಿಂದ ಹೊರ ಬರುವ ಮುನ್ನ ಘೋಷಣೆ ಕೂಗಿದ ಸಂದರ್ಭ

> ನಾವೆಲ್ಲ ಮುಖ್ಯವಾಹಿನಿಗೆ ಬರಲು ಸರ್ಕಾರ ಒಪ್ಪಿಗೆ ನೀಡಿತ್ತು. ಹೋರಾಟ ಕೈಬಿಟ್ಟು ಶರಣಾಗಿದ್ದೇವೆ. ನಮ್ಮ ಬೇಡಿಕೆಗಳನ್ನು ಕಾಲಮಿತಿ ಒಳಗೆ ಬೇಡಿಕೆ ಈಡೇರಿಸುವ ಭರವಸೆ ಸಿಕ್ಕಿದೆ
>
> **ಮುಂಡಗಾರು ಲತಾ** ಶರಣಾಗತರಾದ ನಕ್ಸಲ್

> ನಕ್ಸಲರ ಎಲ್ಲ ಪ್ರಕರಣಗಳನ್ನೂ ತ್ವರಿತವಾಗಿ ಇತ್ಯರ್ಥ ಮಾಡಬೇಕು. ಈಗ ಶರಣಾದವರೂ ಸೇರಿದಂತೆ ಹಿಂದೆ ಶರಣಾದ ನಕ್ಸಲರಿಗೂ ಘೋಷಿತ ನೆರವು ಕಲ್ಪಿಸಬೇಕು
>
> **ಬಂಜಗೆರೆ ಜಯಪ್ರಕಾಶ್** ಸದಸ್ಯ, ನಕ್ಸಲ್ ಶರಣಾಗತಿ ಸಮಿತಿ

> ನಕ್ಸಲ್ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ ಎಲ್ಲರೂ ಶರಣಾಗಿದ್ದಾರೆ. ಕೋಟೆಹೊಂಡ ರವಿ ಅಲಿಯಾಸ್ ರವೀಂದ್ರ ಅವರು ಇನ್ನೊಂದು ವಾರದಲ್ಲಿ ಶರಣಾಗಲಿದ್ದಾರೆ
>
> **ಕೆ.ಪಿ. ಶ್ರೀಪಾಲ್** ಸದಸ್ಯ, ನಕ್ಸಲ್ ಶರಣಾಗತಿ ಸಮಿತಿ

6 ಜನ ನಕ್ಸಲರು ಶರಣಾಗತಿ

ಒಂದನೇ ಪುಟದಿಂದ...

ನಕ್ಸಲರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದು. ಈ ಕುರಿತು ತಮಿಳುನಾಡು ಹಾಗೂ ಕೇರಳ ಮುಖ್ಯಮಂತ್ರಿಗಳ ಜತೆಗೂ ಚರ್ಚಿಸಲಾಗುವುದು. ವಿಕ್ರಂಗೌಡ ಎನ್‌ಕೌಂಟರ್ ಪ್ರಕರಣವನ್ನು ಸಿಐಡಿಗೆ ವಹಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕಾಡಿನಿಂದ ಬಂದ ಅವರನ್ನು ಜೈಲಿಗೆ ಕಳುಹಿಸಲಾಗುತ್ತದೆ. ಪ್ರಕರಣ ವಿಚಾರಣೆ ಪೂರ್ಣಗೊಂಡ ನಂತರ ಮತ್ತೆ ನಾಡಿಗೆ ಬರಲಿದ್ದಾರೆ. ನಂತರ ಸಂವಿಧಾನದ ಚೌಕಟ್ಟಿನಲ್ಲಿ ಬದುಕು ನಡೆಸಲಿದ್ದಾರೆ ಎಂದರು.

ನಕ್ಸಲ್ ನಿಗ್ರಹ ಪಡೆ ವಿಸರ್ಜನೆ?

ಒಂದನೇ ಪುಟದಿಂದ...

‘ಕಾಡಿನಲ್ಲಿದ್ದುಕೊಂಡು ಶಸ್ತ್ರಾಸ್ತ್ರ ಮೂಲಕ ಹೋರಾಟ ನಡೆಸುತ್ತಿದ್ದ ನಕ್ಸಲರ ಮನವೊಲಿಸಿ ಅವರನ್ನು ನಾಡಿಗೆ ಕರೆದು ತರುವ ಪ್ರಯತ್ನವನ್ನು ನಾನು ಮುಖ್ಯಮಂತ್ರಿಯಾಗಿದ್ದ ಮೊದಲ ಅವಧಿಯಲ್ಲಿಯೇ ಪ್ರಾರಂಭಿಸಲಾಗಿತ್ತು. ಕಳೆದ ಅವಧಿಯಲ್ಲಿ ಹನ್ನೆರಡು ನಕ್ಸಲರು ಶರಣಾಗಿ ಬಂದು ಮುಖ್ಯವಾಹಿನಿ ಸೇರಿಕೊಂಡಿದ್ದರು. ಇದೀಗ ಆರು ಮಂದಿ ನಕ್ಸಲರು ಬಂದಿದ್ದಾರೆ. ಆ ಮೂಲಕ ಕರ್ನಾಟಕ ನಕ್ಸಲ್‌ಮುಕ್ತ ರಾಜ್ಯವಾಗುವತ್ತ ಹೆಜ್ಜೆ ಇಟ್ಟಿದೆ’ ಎಂದರು.

ಶರಣಾಗತಿ ನಂತರ ಬಂಧನ

ಶರಣಾಗತರಾದ ಆರೂ ನಕ್ಸಲರನ್ನು ಮುಖ್ಯಮಂತ್ರಿ ಗೃಹ ಕಚೇರಿಯಿಂದ ಹೊರಬರುತ್ತಿದ್ದಂತೆ ಚಿಕ್ಕಮಗಳೂರು ಪೊಲೀಸರು ವಶಕ್ಕೆ ಪಡೆದರು. ಬಿಗಿ ಬಂದೋಬಸ್ತ್‌ನಲ್ಲಿ ಅವರನ್ನು ಮತ್ತೆ ಚಿಕ್ಕಮಗಳೂರಿಗೆ ಕರೆದುಕೊಂಡು ಹೋದರು. ಗುರುವಾರ ಅವರನ್ನು ನ್ಯಾಯಾಧೀಶರ ಮುಂದೆ ಹಾಜರು ಪಡಿಸಲಾಗುತ್ತದೆ. ನಂತರ ಕಾನೂನು ಪ್ರಕ್ರಿಯೆಗಳು ಆರಂಭವಾಗಲಿವೆ ಎಂದು ಪೊಲೀಸರು ಮಾಹಿತಿ ನೀಡಿದರು.

ಕೊನೆ ಕ್ಷಣದಲ್ಲಿ ಸ್ಥಳ ಬದಲು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಆರು ನಕ್ಸಲರು ಮುಖ್ಯವಾಹಿನಿಗೆ ಸೇರುವ ಕಾರ್ಯಕ್ರಮ ಡಿಢೀರ್ ಬೆಂಗಳೂರಿಗೆ ವರ್ಗಾವಣೆಗೊಂಡಿತು.

ಚಿಕ್ಕಮಗಳೂರಿನ ಪ್ರವಾಸಿ ಮಂದಿರದಲ್ಲಿ ಶಾಂತಿಗಾಗಿ ನಾಗರಿಕ ವೇದಿಕೆ, ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಮುಖಂಡರು, ನಕ್ಸಲರ ಕುಟುಂಬದವರು ಕಾದಿದ್ದರು. ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.

ಶರಣಾಗತಿ ಮತ್ತು ಪುನರ್ವಸತಿ ಸಮಿತಿ ಸದಸ್ಯರು, ಶಾಂತಿಗಾಗಿ ನಾಗರಿಕರ ವೇದಿಕೆಯ ಸದಸ್ಯರು ಆರು ನಕ್ಸಲರೊಂದಿಗೆ ಕಾಡಿನಿಂದ ಚಿಕ್ಕಮಗಳೂರು ಕಡೆಗೆ ಕಾರುಗಳಲ್ಲಿ ಬರುತ್ತಿದ್ದರು. ಈ ವೇಳೆ ಪೊಲೀಸರು ಆಲ್ದೂರು ಬಳಿ ತಡೆದು ಸಮಾಲೋಚನೆ ನಡೆಸಿದರು. ಮುಖ್ಯಮಂತ್ರಿ ಸೂಚನೆ ಮೇರೆಗೆ ಎಲ್ಲರನ್ನೂ ಬೆಂಗಳೂರಿಗೆ ಕರೆದೊಯ್ದರು.

‘ನನ್ನ ಸಮ್ಮುಖದಲ್ಲೇ ನಕ್ಸಲರು ಮುಖ್ಯವಾಹಿನಿಗೆ ಬರಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಯಸಿದ್ದರಿಂದ ಕಾರ್ಯಕ್ರಮ ಸ್ಥಳಾಂತರ ಆಯಿತು’ ಎಂದು ಶಾಂತಿಗಾಗಿ ನಾಗರಿಕರ ವೇದಿಕೆಯ ಕೆ.ಎಲ್.ಅಶೋಕ್ ತಿಳಿಸಿದರು. ನಕ್ಸಲರ ಕುಟುಂಬ ಸದಸ್ಯರನ್ನೂ ಬೆಂಗಳೂರಿಗೆ ಪೊಲೀಸ್ ವಾಹನಗಳಲ್ಲೇ ಕರೆದೊಯ್ಯಲಾಯಿತು.

‘ನಮಗೂ ಪರಿಹಾರ ಕೊಡಿ’

ಹೆಬ್ರಿ (ಉಡುಪಿ): ‘ನಕ್ಸಲರನ್ನು ಮುಖ್ಯವಾಹಿನಿಗೆ ತರುವ ಸಿದ್ಧತೆಯಲ್ಲಿರುವಾಗಲೇ ನಮ್ಮ ಅಣ್ಣ ಪೊಲೀಸ್ ಎನ್‌ಕೌಂಟರ್‌ನಲ್ಲಿ ಮೃತಪಟ್ಟಿದ್ದಾನೆ. ಅಣ್ಣ ಇದ್ದಿದ್ದರೆ ಶರಣಾಗತಿ ಆಗುತ್ತಿದ್ದನೋ ಏನೋ. ಆದರೆ, ಈಗ ಅಣ್ಣ ಇಲ್ಲ. ನಮ್ಮ ಇಡೀ ಕುಟುಂಬ ಕಷ್ಟದಲ್ಲಿದೆ. ನಮ್ಮ ಕುಟುಂಬಕ್ಕೂ ಪರಿಹಾರ ನೀಡಬೇಕು’ ಎಂದು ಮೃತ ನಕ್ಸಲ್ ವಿಕ್ರಂ ಗೌಡ ಅವರ ಸಹೋದರ ಸುರೇಶ್ ಗೌಡ ಮನವಿ ಮಾಡಿದ್ದಾರೆ.

‘ಶರಣಾಗುವ ನಕ್ಸಲರಿಗೆ ನೀಡುವ ಎಲ್ಲ ಸೌಲಭ್ಯ, ಪರಿಹಾರವನ್ನು ನಮ್ಮ ಕುಟುಂಬಕ್ಕೂ ನೀಡಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

‘ಸರ್ಕಾರವೇ ಶರಣಾಗಿದೆಯೋ’

ಕಾರ್ಕಳ (ಉಡುಪಿ): ‘ನಕ್ಸಲರು ಸರ್ಕಾರಕ್ಕೆ ಶರಣಾಗಿದ್ದಾರೋ ಅಥವಾ ನಕ್ಸಲರಿಗೆ ಸರ್ಕಾರ ಶರಣಾಗಿದೆಯೋ’ ಎಂದು ಶಾಸಕ ಸುನಿಲ್ ಕುಮಾರ್ ಪ್ರಶ್ನಿಸಿದ್ದಾರೆ.

‘ಭೂಗತ ಚಟುವಟಿಕೆ ನಡೆಸಿ ತಲೆಮರೆಸಿಕೊಂಡಿದ್ದ ನಕ್ಸಲರು ಶರಣಾಗಬೇಕಿರುವುದು ಸಂಬಂಧಪಟ್ಟ ಎಸ್‌ಪಿ ಕಚೇರಿ ಅಥವಾ ಸಬ್ ಇನ್‌ಸ್ಪೆಕ್ಟರ್ ಎದುರು. ಆದರೆ, ಇಲ್ಲೇನಾಗುತ್ತಿದೆ? ಸಿ.ಎಂ ಸಿದ್ದರಾಮಯ್ಯ ತಮ್ಮ ಅಧಿಕೃತ ಕಚೇರಿಯಲ್ಲಿ 6 ಮಂದಿ ನಕ್ಸಲರನ್ನು ಸ್ವಾಗತಿಸಲು ನಡು ಬಗ್ಗಿಸಿ ನಿಂತಿದ್ದಾರೆ. ರಾಜ್ಯದಲ್ಲಿ ಕಾನೂನಿನ ಕೊಲೆಯಾಗಿದೆ’ ಎಂದು ಅವರು ಟೀಕಿಸಿದ್ದಾರೆ. ‘ನಕ್ಸಲ್ ವಿಕ್ರಂಗೌಡನನ್ನು ಎನ್‌ಕೌಂಟರ್ ಮಾಡಿದ ಪೊಲೀಸರ ದಿಟ್ಟ ಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಪ್ರಾಯಶ್ಚಿತ್ತ ಮಾಡಿಕೊಂಡಿದ್ದಾರೆ. ಪೊಲೀಸ್‌ರನ್ನು ಅಣಕಿಸುವ ರೀತಿ ಸಿ.ಎಂ ನಡೆದುಕೊಂಡಿದ್ದಾರೆ. ಇಲ್ಲಿ ಯಾರ ಶರಣಾಗತಿ? ಸರ್ಕಾರದ ಮುಂದೆ ನಕ್ಸಲರ ಶರಣಾಗತಿಯೋ? ಅಥವಾ ಬುದ್ಧಿಜೀವಿಗಳ ಒತ್ತಡಕ್ಕೆ ಮಣಿದ ಸಿದ್ದರಾಮಯ್ಯ ನಕ್ಸಲರಿಗೆ ಶರಣಾದರೊ?’ ಎಂದಿದ್ದಾರೆ.

₹21 ಕೋಟಿ ಅಕ್ರಮ ಆಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಏಳು ಅಧಿಕಾರಿಗಳು ಮತ್ತು ಒಬ್ಬ ನಿವೃತ್ತ ಅಧಿಕಾರಿಗೆ ಸಂಬಂಧಿಸಿದ ಮನೆ ಹಾಗೂ ಇತರ ಸ್ವತ್ತುಗಳ ಮೇಲೆ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು ಒಟ್ಟು ₹21.05 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಮಾಡಿದ್ದಾರೆ.

ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಆರೋಪದ ಸಂಬಂಧ ಬೆಂಗಳೂರು ನಗರ, ತುಮಕೂರು, ಗದಗ, ಬೀದರ್, ಚಿಕ್ಕಮಗಳೂರು, ಬಳ್ಳಾರಿ, ಬೆಳಗಾವಿ ಮತ್ತು ರಾಯಚೂರಿನ 38 ಸ್ಥಳಗಳ ಮೇಲೆ ಲೋಕಾಯುಕ್ತ ಪೊಲೀಸರ ತಂಡವು ಬುಧವಾರ ಬೆಳಿಗ್ಗೆಯೇ ದಾಳಿ ನಡೆಸಿತು.

ಯಲಹಂಕ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಯಾಗಿ ನಿವೃತ್ತರಾಗಿದ್ದ ತುಮಕೂರಿನ ಎಸ್.ರಾಜು ಮತ್ತು ಅವರ ಆಪ್ತ ಡಿ.ಎನ್.ಸತೀಶ್ ಅವರ ಮನೆ ಹಾಗೂ ಕಚೇರಿಗಳ ಮೇಲೆ ದಾಳಿ ನಡೆಸಲಾಗಿತ್ತು. ರಾಜ್ಯದಲ್ಲಿ ಬುಧವಾರ ನಡೆಸಲಾದ ದಾಳಿಯಲ್ಲಿ ರಾಜು ಅವರ ಬಳಿಯೇ ಅತಿಹೆಚ್ಚು ಅಕ್ರಮ ಆಸ್ತಿ (₹5.02 ಕೋಟಿ) ಪತ್ತೆಯಾಗಿದೆ ಎಂದು ಲೋಕಾಯುಕ್ತ ಪ್ರಕಟಣೆ ತಿಳಿಸಿದೆ.

ಅಧಿಕಾರಿಗಳು ನಿವೇಶನ ಮತ್ತು ಕೃಷಿ ಜಮೀನುಗಳ ಮೇಲೆ ಹೂಡಿಕೆ ಮಾಡಿರುವುದಕ್ಕೆ ಸಂಬಂಧಿಸಿದ ದಾಖಲೆಗಳು ಶೋಧದ ವೇಳೆ ಪತ್ತೆಯಾಗಿವೆ. ತನಿಖೆ ಮುಂದುವರಿಸಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದರು.



ಪ್ರಕಾಶ ಗಾಯಕವಾಡ ಅವರ ಮನೆಯಲ್ಲಿ ದೊರೆತ ಚಿನ್ನ ಹಾಗೂ ಬೆಳ್ಳಿಯ ಸಾಮಗ್ರಿಗಳು

‘ಲೋಕಾ’ ದಾಳಿ

ಕೋಟಿ ಕುಬೇರರು

ರಾಜ್ಯದ ವಿವಿಧೆಡೆ ಲೋಕಾಯುಕ್ತ ಪೊಲೀಸರು ಬುಧವಾರ ನಡೆಸಿದ ದಾಳಿಯ ವೇಳೆ ಪತ್ತೆಯಾದ ಅಕ್ರಮ ಆಸ್ತಿಯ ವಿವರ

1. ಎಸ್.ರಾಜು, ಪ್ರಾದೇಶಿಕ ಸಾರಿಗೆ ಅಧಿಕಾರಿ (ನಿವೃತ್ತ).
- 4 ಎಕರೆ ಕೃಷಿ ಜಮೀನು, 1 ನಿವೇಶನ, 2 ಮನೆ ಸೇರಿ ₹4.27 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹57 ಲಕ್ಷ ಮೌಲ್ಯದ ಚಿನ್ನಾಭರಣ, ₹15 ಲಕ್ಷದ ಗೃಹೋಪಯೋಗಿ ವಸ್ತುಗಳು, ₹1.33 ಲಕ್ಷ ನಗದು ಮತ್ತು ₹80,000 ಮೌಲ್ಯದ ವಾಹನಗಳು

₹5.02 ಕೋಟಿ ಆಸ್ತಿಯ ಒಟ್ಟು ಮೌಲ್ಯ

2. ಪ್ರಕಾಶ್ ಶ್ರೀಧರ್ ಗಾಯಕವಾಡ, ತಹಶೀಲ್ದಾರ್, ಖಾನಾಪೂರ ತಾಲ್ಲೂಕು, ಬೆಳಗಾವಿ
- 28 ಎಕರೆ ಕೃಷಿ ಜಮೀನು, 2 ನಿವೇಶನ, 3 ಮನೆ ಸೇರಿ ₹3.58 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹25.66 ಲಕ್ಷ ಮೌಲ್ಯದ ಚಿನ್ನಾಭರಣ, ₹46,000 ನಗದು ಮತ್ತು ₹57 ಲಕ್ಷ ಮೌಲ್ಯದ ವಾಹನಗಳು

₹4.41 ಕೋಟಿ ಆಸ್ತಿಯ ಒಟ್ಟು ಮೌಲ್ಯ

3. ಎಂ.ಶೋಭಾ, ಜಂಟಿ ಆಯುಕ್ತೆ, ಸಾರಿಗೆ ಇಲಾಖೆ, ಬೆಂಗಳೂರು
- 21 ಎಕರೆ ಕೃಷಿ ಜಮೀನು, 1 ನಿವೇಶನ, 1 ಮನೆ ಸೇರಿ ₹45.36 ಲಕ್ಷ ಮೌಲ್ಯದ ಸ್ಥಿರಾಸ್ತಿ
- ₹1.60 ಕೋಟಿ ಠೇವಣಿ, ₹60 ಲಕ್ಷ ಮೌಲ್ಯದ ಚಿನ್ನಾಭರಣ, ₹23.50 ಲಕ್ಷದ ಗೃಹೋಪಯೋಗಿ ವಸ್ತುಗಳು, ₹35,300 ನಗದು ಮತ್ತು ₹20 ಲಕ್ಷ ಮೌಲ್ಯದ ವಾಹನಗಳು

₹3.09 ಕೋಟಿ ಆಸ್ತಿಯ ಒಟ್ಟು ಮೌಲ್ಯ

4. ರವೀಂದ್ರ ಮೇತ್ರೆ, ಸಹಾಯಕ ಎಂಜಿನಿಯರ್, ಎಇಇ ಕಚೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪವಿಭಾಗ, ಬಸವಕಲ್ಯಾಣ, ಬೀದರ್
- 7 ಎಕರೆ ಕೃಷಿ ಜಮೀನು, 5 ನಿವೇಶನ, 2 ಮನೆ ಸೇರಿ ₹1.72 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹16.18 ಲಕ್ಷ ಮೌಲ್ಯದ ಚಿನ್ನಾಭರಣ, ₹18.15 ಲಕ್ಷದ ಗೃಹೋಪಯೋಗಿ ವಸ್ತುಗಳು, ₹2.46 ಲಕ್ಷ ನಗದು ಮತ್ತು ₹16.80 ಲಕ್ಷ ಮೌಲ್ಯದ ವಾಹನಗಳು

₹2.25 ಕೋಟಿ ಆಸ್ತಿಯ ಒಟ್ಟು ಮೌಲ್ಯ

5. ಆರ್.ಎಚ್.ಲೋಕೇಶ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ, ಬಳ್ಳಾರಿ
- 6 ಎಕರೆ ಕೃಷಿ ಜಮೀನು, 2 ನಿವೇಶನ, 1 ಮನೆ ಸೇರಿ ₹1.46 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹7.79 ಲಕ್ಷ ಮೌಲ್ಯದ ಚಿನ್ನಾಭರಣ, ₹33.21 ಲಕ್ಷದ ಗೃಹೋಪಯೋಗಿ ವಸ್ತುಗಳು, ₹9,100 ನಗದು ಮತ್ತು ₹16.50 ಲಕ್ಷ ಮೌಲ್ಯದ ವಾಹನಗಳು

₹2.03 ಕೋಟಿ ಆಸ್ತಿಯ ಒಟ್ಟು ಮೌಲ್ಯ

6. ಹುಚ್ಚಪ್ಪ ಎ ಬಂಡಿವಡ್ಡರ್, ಎಇಇ, ಪುರಸಭೆ, ಗದಗ
- 2 ಮನೆ, 1 ವಾಣಿಜ್ಯ ಸಂಕೀರ್ಣ ಸೇರಿ ₹76.50 ಲಕ್ಷ ಮೌಲ್ಯದ ಸ್ಥಿರಾಸ್ತಿ
- ₹18.91 ಲಕ್ಷ ಮೌಲ್ಯದ ಚಿನ್ನಾಭರಣ, ₹21.01 ಲಕ್ಷ ಠೇವಣಿ, ₹33.21 ಲಕ್ಷದ ಗೃಹೋಪಯೋಗಿ ವಸ್ತುಗಳು, ₹43,970 ನಗದು ಮತ್ತು ₹42.10 ಲಕ್ಷ ಮೌಲ್ಯದ ವಾಹನಗಳು

₹1.58 ಕೋಟಿ ಆಸ್ತಿಯ ಒಟ್ಟು ಮೌಲ್ಯ

7. ಹುಲಿರಾಜ್ @ ಹುಲುಗಪ್ಪ, ಕಿರಿಯ ಎಂಜಿನಿಯರ್, ಜೆಸ್ಕಾಂ, ಗಿಲ್ಲೆಸೂಗೂರು, ರಾಯಚೂರು
- 24 ಎಕರೆ ಕೃಷಿ ಜಮೀನು, 3 ನಿವೇಶನ, 2 ಮನೆ ಸೇರಿ ₹1.20 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹13,500 ಮೌಲ್ಯದ ಚಿನ್ನಾಭರಣ, ₹4.35 ಲಕ್ಷದ ಗೃಹೋಪಯೋಗಿ ವಸ್ತುಗಳು, ₹90,000 ನಗದು ಮತ್ತು ₹12.50 ಲಕ್ಷ ಮೌಲ್ಯದ ವಾಹನಗಳು

₹1.38 ಕೋಟಿ ಆಸ್ತಿಯ ಒಟ್ಟು ಮೌಲ್ಯ

8. ಎಸ್.ಎನ್.ಉಮೇಶ್, ತಾಲ್ಲೂಕು ಆರೋಗ್ಯಾಧಿಕಾರಿ, ಕಡೂರು, ಚಿಕ್ಕಮಗಳೂರು
- 8 ಎಕರೆ ಕೃಷಿ ಜಮೀನು, 2 ನಿವೇಶನ, 1 ಮನೆ ಸೇರಿ ₹56.78 ಲಕ್ಷ ಮೌಲ್ಯದ ಸ್ಥಿರಾಸ್ತಿ
- ₹12.50 ಲಕ್ಷ ಮೌಲ್ಯದ ಚಿನ್ನಾಭರಣ, ₹10 ಲಕ್ಷದ ಗೃಹೋಪಯೋಗಿ ವಸ್ತುಗಳು, ₹8,430 ನಗದು ಮತ್ತು ₹45.83 ಲಕ್ಷ ಮೌಲ್ಯದ ವಾಹನಗಳು

₹1.25 ಕೋಟಿ ಆಸ್ತಿಯ ಒಟ್ಟು ಮೌಲ್ಯ

ನಿಯಂತ್ರಣಕ್ಕೆ ಬಾರದ ಆಂತರಿಕ ಸಂಘರ್ಷ

ಒಂದನೇ ಪುಟದಿಂದ...

ಈ ಹೇಳಿಕೆಯ ಬಳಿಕ ‘ಕೈ’ ಪಡೆಯಲ್ಲಿ ಒಳ ಬೇಗುದಿ, ಗುದ್ದಾಟ, ತೆರೆಮರೆಯಲ್ಲಿ ತಂತ್ರ, ಪ್ರತಿತಂತ್ರ ಜೋರಾಗಿತ್ತು. ಸತೀಶ ಜಾರಕಿಹೊಳಿ ನಿವಾಸದಲ್ಲಿ ಜ. 2ರಂದು ನಡೆದಿದ್ದ ಔತಣಕೂಟ ಸಭೆಯ ಬೆನ್ನಲ್ಲೆ ಸಮುದಾಯದ ಜನಪ್ರತಿನಿಧಿಗಳ, ಮುಖಂಡರ ಸಭೆಯನ್ನು ಆಯೋಜಿಲು ಪರಮೇಶ್ವರ ಮುಂದಾಗಿದ್ದರು. ಪಕ್ಷದ ಒಳಗಿನ ಈ ಬೆಳವಣಿಗೆಗೆ ತಡೆ ನೀಡಿ ಡಿ.ಕೆ. ಶಿವಕುಮಾರ್ ‘ನಿಯಂತ್ರಣ’ ಸಾಧಿಸಿದ್ದಾರೆ. ಇದು ತಿಕ್ಕಾಟವನ್ನು ಮತ್ತಷ್ಟು ಹೆಚ್ಚಿಸಿದೆ. ಬಜೆಟ್ ಅಧಿವೇಶನದ ಬಳಿಕ ಈ ಬೆಳವಣಿಗೆ ಗಂಭೀರ ಸ್ವರೂಪ ಪಡೆದುಕೊಳ್ಳುವ ಸೂಚನೆಯಿದೆ.

ಪರಮೇಶ್ವರ ಆಯೋಜಿಸಿದ್ದ ಸಭೆಯನ್ನು ಡಿ.ಕೆ. ಶಿವಕುಮಾರ್ ರದ್ದು ಪಡಿಸಿದ್ದಾರೆಂದು ಅಸಮಾಧಾನಗೊಂಡಿರುವ ದಲಿತ ಸಮುದಾಯದ ಸಚಿವರು, ಮುಂದಿನ ನಡೆಯ ಬಗ್ಗೆ ಚರ್ಚೆ ನಡೆಸಿದ್ದಾರೆ. ಸದಾಶಿವನಗರದಲ್ಲಿರುವ ಪರಮೇಶ್ವರ ಅವರ ನಿವಾಸಕ್ಕೆ ಬುಧವಾರ ಬೆಳಿಗ್ಗೆ ತೆರಳಿದ ಕೆ.ಎನ್. ರಾಜಣ್ಣ ಅರ್ಧಗಂಟೆ ಮಾತುಕತೆ ನಡೆಸಿದರು. ಸಭೆ ರದ್ದುಪಡಿಸಿರುವ ಕಾರಣ ಮುಂದೇನು ಮಾಡಬೇಕೆಂಬ ಬಗ್ಗೆಯೂ ಸಮಾಲೋಚನೆ ನಡೆಸಿದರು. ಮುಂದೆ ಸಭೆ ನಡೆಸಲೇಬೇಕೆಂದು ತೀರ್ಮಾನಿಸಿರುವ ಉಭಯ ನಾಯಕರು, ಅದಕ್ಕೂ ಮೊದಲು ಹೈಕಮಾಂಡ್ ನಾಯಕರಿಗೆ ವಸ್ತುಸ್ಥಿತಿ ಮನವರಿಕೆ ಮಾಡಲು ನಿರ್ಧರಿಸಿದ್ದಾರೆ ಎಂದೂ ಗೊತ್ತಾಗಿದೆ.

ಡಿಕೆಶಿ ಕೈಹಿಡಿದು ನಿಲ್ಲಿಸಿದ ಪರಮೇಶ್ವರ: ಬುಧವಾರ ಬೆಳಿಗ್ಗೆ ನಡೆದ ಚಾಮರಾಮಪೇಟೆ ಪೊಲೀಸ್ ಠಾಣೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ನಾಮಫಲಕ ಅನಾವರಣದ ವೇಳೆ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ಪರಸ್ಪರ ದೂರ ನಿಂತಿದ್ದರು.

ಅದನ್ನು ಗಮನಿಸಿದ ಪರಮೇಶ್ವರ ಅವರು ಡಿ.ಕೆ. ಶಿವಕುಮಾರ್ ಅವರ ಕೈಹಿಡಿದು ಮುಖ್ಯಮಂತ್ರಿ ಸಿದ್ದರಾಮಯ್ಯ ಪಕ್ಕ ನಿಲ್ಲಿಸಿದರು. ಇದಕ್ಕೂ ಮೊದಲು ಸಿದ್ದರಾಮಯ್ಯ ಅವರು ಟೇಪ್ ಕತ್ತರಿಸಿ ಕಟ್ಟಡವನ್ನು ಉದ್ಘಾಟಿಸಿದರು. ‘ಬಲಗಾಲನ್ನು ಇಟ್ಟು ಒಳಗೆ ಹೋಗಬೇಕಾ’ ಎಂದು ಶಿವಕುಮಾರ್ ಅವರನ್ನು ಕೇಳಿದರು.

13ರಂದು ಸಿಎಲ್‌ಪಿ: ಪಕ್ಷದಲ್ಲಿನ ಈ ಬೆಳವಣಿಗೆಗಳ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ 13ರಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆದಿದ್ದಾರೆ.

ಬಿಜೆಪಿಯಲ್ಲೂ ಔತಣ ರಾಜಕೀಯ ಶುರು?

ಒಂದನೇ ಪುಟದಿಂದ...

ಆಗಾಗ ಒಟ್ಟಿಗೆ ಊಟ ಮಾಡುತ್ತೇವೆ: ಔತಣ ಕೂಟದ ನೆಪದಲ್ಲಿ ಸಭೆ ನಡೆದ ಕುರಿತು ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಬಸವರಾಜ ಬೊಮ್ಮಾಯಿ, ‘ನಾವು ಆಗಾಗ ಒಟ್ಟಿಗೆ ಊಟ ಮಾಡುತ್ತೇವೆ. ವಿಧಾನಮಂಡಲ ಹಾಗೂ ಸಂಸತ್ ಅಧಿವೇಶನ ಬಳಿಕ ಸ್ನೇಹಿತರು ಊಟಕ್ಕೆ ಸೇರಲು ನಿರ್ಧರಿಸಿದ್ದೆವು. ಹಾಗಾಗಿ, ಒಟ್ಟಿಗೆ ಕುಳಿತು ಊಟ ಮಾಡಿದ್ದೇವೆ. ರಾಜಕೀಯ ಚರ್ಚೆಯ ಉದ್ದೇಶ ಇರಲಿಲ್ಲ’ ಎಂದಿದ್ದಾರೆ. ‘ರಾಜ್ಯ ಬಿಜೆಪಿಯ ಗೊಂದಲಗಳ ಬಗ್ಗೆ ಪಕ್ಷದ ವರಿಷ್ಠರು ಗಮನಹರಿಸಿದ್ದಾರೆ. ಎಲ್ಲ ಗೊಂದಲಗಳು ಸರಿ ಹೋಗಲಿವೆ’ ಎಂದು ಹೇಳಿದ್ದಾರೆ.

ಎರಡೂ ಬಣ ಒಗ್ಗೂಡಿಸಲು ಯತ್ನ: ಸುನಿಲ್

‘ನಾವು ಊಟಕ್ಕೆ ಸೇರಿದ್ದು ನಿಜ. ಆದರೆ, ಅದು ಪೂರ್ವ ನಿರ್ಧಾರಿತವಲ್ಲ. ನಾವು ಕೆಲವರು ವಿಧಾನಮಂಡಲ ಸಮಿತಿ ಸಭೆಗೆ ಬಂದಿದ್ದೆವು. ಆರ್.ಅಶೋಕ ಅವರ ಸುದ್ದಿಗೋಷ್ಠಿ ಮುಗಿಸಿದ ಬಳಿಕ. ಈಡನ್ ಪಾರ್ಕ್‌ಗೆ ಊಟಕ್ಕೆ ಕರೆದರು. ಅಲ್ಲಿಗೆ ಬೊಮ್ಮಾಯಿ ಅವರೂ ಬಂದರು. ರಾಜಕೀಯವಾಗಿ ಹೆಚ್ಚಿನ ಚರ್ಚೆ ನಡೆಯಲಿಲ್ಲ. ಎರಡು ಬಣಗಳನ್ನು ಒಗ್ಗೂಡಿಸಲು ಏನು ಮಾಡಬೇಕು ಎಂಬ ಬಗ್ಗೆ ಔಪಚಾರಿಕವಾಗಿ ಮಾತನಾಡಿದೆವು’ ಎಂದು ಬಿಜೆಪಿ ಶಾಸಕ ವಿ.ಸುನಿಲ್‌ಕುಮಾರ್ ತಿಳಿಸಿದರು.

ಇದು ಬಹಳ ದಿನ ನಡೆಯಲ್ಲ: ರಾಜಣ್ಣ

ತುಮಕೂರು: ‘ಮುಖ್ಯಮಂತ್ರಿ ಮತ್ತು ಸಚಿವರ ಔತಣ ಸಭೆಯಿಂದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೇಜಾರಾಗಲು, ಯಾರಾದರೂ ಅವರ ಆಸ್ತಿ ಬರೆಸಿಕೊಂಡಿದ್ದಾರೆಯೇ’ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಪ್ರಶ್ನಿಸಿದರು.

ಪರಮೇಶ್ವರ ಆಯೋಜಿಸಿದ್ದ ಔತಣಕೂಟ ಸಭೆಯ ವಿರುದ್ಧ ಹೈಕಮಾಂಡ್‌ಗೆ ಡಿ.ಕೆ. ಶಿವಕುಮಾರ್ ದೂರು ನೀಡಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಪರಿಶಿಷ್ಟ ಜಾತಿ, ಪಂಗಡದ ಮಕ್ಕಳಿಗೆ ವಿದ್ಯಾರ್ಥಿ ವೇತನ ಸಿಗುತ್ತಿಲ್ಲ. ಆಡಳಿತ ಮಂಡಳಿಯ ಕೋಟಾದಡಿ ಪ್ರವೇಶ ಪಡೆದವರಿಗೆ ಹಾಸ್ಟೆಲ್ ಪ್ರವೇಶ ನೀಡುತ್ತಿಲ್ಲ. ಇಂತಹ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಭೆ ಕರೆಯಲಾಗಿತ್ತು. ಸಭೆ ಮಾಡಬೇಡಿ ಎಂದರೆ ಇವರು ಪರಿಶಿಷ್ಟ ಸಮುದಾಯದ ವಿರೋಧಿಗಳೇ? ಇದು ಬಹಳ ದಿನ ನಡೆಯುವುದಿಲ್ಲ’ ಎಂದು ಅಸಮಾಧಾನ ಹೊರಹಾಕಿದರು.

‘ಸತೀಶ ಜಾರಕಿಹೊಳಿ ಮನೆಯಲ್ಲಿ ಇತ್ತೀಚೆಗೆ ನಡೆದ ಸಭೆಯಿಂದ ಪಕ್ಷದಲ್ಲಿ ಗೊಂದಲ ಮೂಡಿದೆ. ಅದರ ಜತೆಗೆ ಮತ್ತೊಂದು ಗೊಂದಲ ಸೃಷ್ಟಿ ಆಗುವುದು ಬೇಡ ಎಂದು ಹೈಕಮಾಂಡ್ ನೀಡಿದ ಸಲಹೆ ಪಾಲಿಸಿದ್ದೇವೆ’ ಎಂದರು.

‘ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲು ಕರೆದ ಸಭೆಗೆ ರಾಜಕೀಯ ಲೇಪನ ಕೊಟ್ಟು ವಿರೋಧ ವ್ಯಕ್ತಪಡಿಸುವುದು ಪರಿಶಿಷ್ಟ ಸಮುದಾಯಗಳಿಗೆ ಮಾಡುವ ಅನ್ಯಾಯ’ ಎಂದರು.

‘ಚಾಮರಾಜನಗರದಲ್ಲಿ ಫೆ. 13ರಂದು ಸಚಿವ ಸಂಪುಟದ ಸಭೆ ನಡೆಯಲಿದೆ. ಚಾಮರಾಜನಗರಕ್ಕೆ ಹೋದರೆ ಮುಖ್ಯಮಂತ್ರಿ ಸ್ಥಾನ ಹೋಗುತ್ತದೆ ಎನ್ನುತ್ತಿದ್ದರು. ಈಗ ಅಲ್ಲಿಯೇ ಸಚಿವ ಸಂಪುಟ ಸಭೆ ನಡೆಸಲಾಗುವುದು. ಸಚಿವ ಸಂಪುಟಕ್ಕೂ ಮುನ್ನ ಅಥವಾ ಸಭೆಯ ನಂತರ ಎಸ್‌ಸಿ, ಎಸ್‌ಟಿ ಸಚಿವರು, ಶಾಸಕರ ಸಭೆ ನಡೆಸಲಾಗುವುದು’ ಎಂದರು.

ಡಿಕೆಶಿ ಸಹನೆ ಕಟ್ಟೆ ಒಡೆಯುತ್ತಿದೆ: ಬೊಮ್ಮಾಯಿ

ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಪಕ್ಷದ ನಾಯಕರ ಮಧ್ಯೆ ಅಭದ್ರತೆ. ಒಳ ಬೇಗುದಿ ಹೆಚ್ಚಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಹನೆಯ ಕಟ್ಟೆ ಒಡೆಯುವ ಕಾಲ ಸನ್ನಿಹಿತವಾಗಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ಈ ಅನಿರೀಕ್ಷಿತ ಬೆಳವಣಿಗೆಯಲ್ಲಿ ಶಿವಕುಮಾರ್ ಅವರು ತಮ್ಮ ವ್ಯಕ್ತಿತ್ವಕ್ಕೆ ವಿರುದ್ಧವಾಗಿ ಸಹನೆ ಪ್ರದರ್ಶನ ಮಾಡುತ್ತಿದ್ದಾರೆ. ಅದು ಮುತ್ಸದ್ದಿತನವೋ? ಹೈಕಮಾಂಡ್ ಸೂಚನೆಯೋ ನೋಡಬೇಕು ಎಂದರು.

ಕಾಂಗ್ರೆಸ್ ಸರ್ಕಾರದಲ್ಲಿ ಕೇವಲ ಗುತ್ತಿಗೆ ವಿಷಯವಲ್ಲ, ಎಲ್ಲದರಲ್ಲೂ ಕಮಿಷನ್ ನಡೆಯುತ್ತಿದೆ. ಭ್ರಷ್ಟಾಚಾರದಿಂದ ಜನರು ಹೈರಾಣಾಗಿದ್ದಾರೆ. ಗ್ರಾಮೀಣ ಹಾಗೂ ನಗರ ಪ್ರದೇಶದ ಸಾಮಾನ್ಯ ಜನರು ಒಂದು ನಿವೇಶನ ತೆಗೆದುಕೊಳ್ಳಲಾಗದ ವಾತಾವರಣ ನಿರ್ಮಾಣವಾಗಿದೆ. ಆಡಳಿತ ಯಂತ್ರ ಕುಸಿದಿದೆ. ಸಾಮಾನ್ಯ ಜನರು ತೊಂದರೆ ಅನುಭವಿಸುವಂತಾಗಿದೆ. ಕರ್ನಾಟಕವನ್ನು ದಿವಾಳಿ ಮಾಡುತ್ತಿದ್ದಾರೆ. ಬಿಜೆಪಿ ವಿರೋಧ ಪಕ್ಷವಾಗಿ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಅನಗತ್ಯ ಆತಂಕಗಳೇಕೆ?– ಸತೀಶ

ಬೆಂಗಳೂರು: ‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶಾಸಕರು, ಸಚಿವರ ಸಭೆಯ ಬಗ್ಗೆ ಅನಗತ್ಯ ಆತಂಕಗಳೇಕೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪ್ರಶ್ನಿಸಿದರು.

‘ನಮ್ಮ ಸಭೆಯಲ್ಲಿ ನಾವು ಊಟ ಮಾಡಿಕೊಳ್ಳುತ್ತೇವೆ. ನಮ್ಮದೇ ಆದ ಕಾರ್ಯಸೂಚಿಗಳ ಬಗ್ಗೆ ಚರ್ಚೆ ಮಾಡುತ್ತೇವೆ. ಇದರ ಬಗ್ಗೆ ಬೇರೆಯವರು ಆತಂಕ ಪಡುವುದೇಕೆ?’ ಎಂದು ಪ್ರಶ್ನಿಸಿದರು.

‘ಪರಮೇಶ್ವರ ಅವರು ಯಾವ ಉದ್ದೇಶಕ್ಕೆ ಸಭೆ ಕರೆದಿದ್ದರು ಎಂದು ನನಗೆ ಮಾಹಿತಿ ಇಲ್ಲ. ನನ್ನನ್ನೂ ಆಹ್ವಾನಿಸಲಾಗಿತ್ತು. ಸಭೆಯ ಕಾರ್ಯಸೂಚಿಗಳೇನು ಎಂದೂ ಗೊತ್ತಿರಲಿಲ್ಲ. ಏಕೆ ಸಭೆ ರದ್ದಾಯಿತು ಎಂಬ ಮಾಹಿತಿಯೂ ಇಲ್ಲ. ಬೇರೆಯವರು ಈ ವಿಚಾರವಾಗಿ ಗೊಂದಲಗೊಳ್ಳುವುದೇಕೆ’ ಎಂದು ಕೇಳಿದರು.

‘ಡಿ.ಕೆ. ಶಿವಕುಮಾರ್ ಅವರಿಗಾಗಲಿ, ಬೇರೆ ಯಾರಿಗಾದರೂ ಆಗಲಿ ಆತಂಕ ಬೇಡ. ಮುಂದಿನ ದಿನಗಳಲ್ಲಿ ಸಭೆ ಸೇರುವ ಬಗ್ಗೆ ಹೈಕಮಾಂಡ್ ನಾಯಕರ ಮನವೊಲಿಸಲಾಗುವುದು. ರಾಜಕೀಯದಲ್ಲಿ ಹಿನ್ನಡೆ, ಮುನ್ನಡೆ ಸಹಜ. ಒಮ್ಮೆ ನಾವು ಗೆಲ್ಲುತ್ತೇವೆ, ಇನ್ನೊಮ್ಮೆ ಬೇರೆಯವರು ಗೆಲ್ಲುತ್ತಾರೆ. ರಾಜಕೀಯದಲ್ಲಿ ಈ ರೀತಿಯ ಮುಸುಕಿನ ಗುದ್ದಾಟಗಳು ಇದ್ದೇ ಇರುತ್ತವೆ’ ಎಂದು ಹೇಳಿದರು.

‘ಸಭೆ ನಡೆಸಬಾರದು ಎಂದು ಯಾರೂ ಹೇಳಿಲ್ಲ. ಹೈಕಮಾಂಡ್ ಗಮನಕ್ಕೆ ಹೋಗಿರುವುದರಿಂದ ಅದರಲ್ಲೂ ಪರ-ವಿರೋಧ ಇರುವುದರಿಂದ ಹೈಕಮಾಂಡ್ ಅನುಮತಿ ಪಡೆದು ಸಭೆ ನಡೆಸಲಾಗುವುದು’ ಎಂದರು.

ತಕ್ಕ ಉತ್ತರ ಕೊಡುತ್ತೇವೆ– ಪರಮೇಶ್ವರ

‘ನಮ್ಮ ಸಮುದಾಯದ (ಎಸ್‌ಸಿ, ಎಸ್‌ಟಿ) ಸಮಾವೇಶ, ಸಭೆ ಮಾಡಿದರೆ ಸಹಿಸುವುದಿಲ್ಲ ಎಂದು ಯಾರಾದರೂ ಹೇಳಿದರೆ ಅದಕ್ಕೆ ತಕ್ಕ ಉತ್ತರ ಕೊಡುತ್ತೇವೆ. ಆ ಶಕ್ತಿ ನಮಗಿದೆ’ ಎಂದು ಜಿ. ಪರಮೇಶ್ವರ ಹೇಳಿದರು.

‘ಔತಣಕೂಟವನ್ನು ರದ್ದು ಮಾಡಿಲ್ಲ. ಮುಂದೂಡಿದ್ದೇವೆ ಅಷ್ಟೆ. ನಮ್ಮ ಔತಣಕೂಟಕ್ಕೆ ಹೈಕಮಾಂಡ್ ವಿರೋಧ ಇಲ್ಲ. ಚಿತ್ರದುರ್ಗ ಸಮಾವೇಶ ಬಗ್ಗೆ ಚರ್ಚಿಸಲು ಈ ಸಭೆ ಕರೆದಿದ್ದೆವು. ಔತಣಕೂಟ ಬಗ್ಗೆ ವರಿಷ್ಠರಿಗೆ ಏನೂ ಹೇಳಿರಲಿಲ್ಲ’ ಎಂದರು.

‘ಶಾಸಕರ ಸಭೆ ಅಂದಾಗ ವರಿಷ್ಠರ ಗಮನಕ್ಕೆ ಹೋಗುತ್ತದೆ. ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಕರೆ ಮಾಡಿ, ಅವರೂ ಭಾಗವಹಿಸಲು ಉತ್ಸುಕವಾಗಿರುವುದಾಗಿ ತಿಳಿಸಿದರು. ಹೀಗಾಗಿ ಅವರಿಗೂ ಆಹ್ವಾನ ಕೊಟ್ಟಿದ್ದೇವೆ. ಮುಂದೆ ಸಮಯ ಕೊಡುತ್ತೇನೆಂದು ಅವರು ನಮಗೆ ಹೇಳಿದ್ದಾರೆ. ಹೀಗಾಗಿ ಔತಣಕೂಟ ಮುಂದೂಡಿದ್ದೇವೆ’ ಎಂದು ಸ್ಪಷ್ಟಪಡಿಸಿದರು.

‘ಹೈಕಮಾಂಡ್‌ಗೆ ಡಿ.ಕೆ. ಶಿವಕುಮಾರ್ ದೂರು ನೀಡಿದ್ದಾರೆಯೇ’ ಎಂಬ ಪ್ರಶ್ನೆಗೆ, ‘ಆ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಸಭೆಗೆ ಡಿ.ಕೆ. ಶಿವಕುಮಾರ್ ಅವರನ್ನೂ ಕರೆಯಬೇಕೆಂದು ಚರ್ಚೆ ಆಗಿತ್ತು. ಇದರಲ್ಲಿ ಮುಚ್ಚಿಡುವಂಥದ್ದು ಏನೂ ಇಲ್ಲ. ಮುಚ್ಚಿಟ್ಟುಕೊಂಡು ರಾಜಕಾರಣ ಮಾಡುವಂಥದ್ದು ಏನಿದೆ? ಯಾವುದಾದರು ವಿಷಯದ ಬಗ್ಗೆ ಚರ್ಚೆ ಮಾಡುವುದಾದರೆ ಬಹಿರಂಗವಾಗಿಯೇ ಮಾಡುತ್ತೇವೆ. ಯಾರಿಗೂ ಗೊತ್ತಾಗದಂತೆ ನಾಲ್ಕು ಗೋಡೆ ಮಧ್ಯೆ ಚರ್ಚಿಸುವಂಥ ಅನಿವಾರ್ಯ ಇಲ್ಲ’ ಎಂದರು.

ಸಾರ್ವಜನಿಕರಿಗೆ ಉತ್ತಮ, ಗುಣಮಟ್ಟದ ಸೌಲಭ್ಯ ಮತ್ತು ಸುರಕ್ಷಿತ ಪ್ರವಾಸ ಕಲ್ಪಿಸುವ ಉದ್ದೇಶ: ಸಚಿವ ಪಾಟೀಲ

ಎಂಎಸ್ಐಎಲ್‌ನಿಂದ ಪ್ರವಾಸ ಪ್ಯಾಕೇಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ (ಎಂಎಸ್ಐಎಲ್) ಟೂರ್ಸ್ ಅಂಡ್ ಟ್ರಾವೆಲ್ಸ್ ವಿಭಾಗವು ಸಾರ್ವಜನಿಕರಿಗೆ ಪ್ರವಾಸ ಪ್ಯಾಕೇಜ್ ಸೇವೆಯನ್ನು ಆರಂಭಿಸಿದೆ. 'ಸಾರ್ವಜನಿಕರಿಗೆ ಉತ್ತಮ, ಗುಣಮಟ್ಟದ ಮತ್ತು ಸುರಕ್ಷಿತ ಪ್ರವಾಸ ಸೇವೆಯನ್ನು ನೀಡುವ ಉದ್ದೇಶದಿಂದ ಈ ಸೇವೆ ಆರಂಭಿಸಲಾಗಿದೆ' ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ನಗರದ ಖನಿಜ ಭವನದಲ್ಲಿ ಬುಧವಾರ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಖಾಸಗಿ ಕಂಪನಿಗಳು ಹಲವು ಪ್ರವಾಸ ಪ್ಯಾಕೇಜ್‌ಗಳನ್ನು ಒದಗಿಸುತ್ತಿವೆ. ಅದಕ್ಕಿಂತ ಭಿನ್ನವಾದ ಪ್ರವಾಸ ಸೇವೆಯನ್ನು ಎಂಎಸ್ಐಎಲ್ ಒದಗಿಸಲಿದೆ' ಎಂದರು.

ಎಂಎಸ್ಐಎಲ್‌ನ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್, 'ರಾಜ್ಯದಿಂದ ಹೊರ ರಾಜ್ಯಗಳಿಗೆ ಪ್ರವಾಸ ಹೋಗುವವರು ಎದುರಿಸುವ ದೊಡ್ಡ ಸಮಸ್ಯೆ ಆಹಾರದ್ದು. ಹೊರ ರಾಜ್ಯಗಳ ಆಹಾರ ಹೊಂದಿಕೆಯಾಗದೆ, ಪ್ರವಾಸವೇ ಹಾಳಾಗುವ ಸ್ಥಿತಿ ಇದೆ. ಈ ಕ್ಷೇತ್ರದಲ್ಲಿ ಈಗಾಗಲೇ ಖಾಸಗಿ ಸಂಸ್ಥೆಗಳು ಇವೆ. ಆದರೆ ಅವು ಯಾವುವೂ ನೀಡದಿರುವ ಸವಲತ್ತುಗಳನ್ನು ನೀಡಿ, ನಾವು ಸೇವೆ ಆರಂಭಿಸುತ್ತಿದ್ದೇವೆ' ಎಂದರು.

'ಎಂಎಸ್ಐಎಲ್ ಟೂರ್ಸ್ ಅಂಡ್ ಟ್ರಾವೆಲ್ಸ್ ವಿಭಾಗವು ಈ ಮೊದಲು ಸರ್ಕಾರಿ ಅಧಿಕಾರಿಗಳು ಮತ್ತು ಸರ್ಕಾರಿ ಸಂಸ್ಥೆಗಳ ಪ್ರವಾಸಗಳನ್ನು ಮಾತ್ರ ನಿರ್ವಹಣೆ ಮಾಡುತ್ತಿತ್ತು. ಅದನ್ನೇ ಸಾರ್ವಜನಿಕರಿಗೂ ವಿಸ್ತರಿಸುವ ಮೂಲಕ ಉತ್ತಮ ಸೇವೆ ನೀಡುವುದರ ಜತೆಗೆ, ಸಂಸ್ಥೆಯ ಆದಾಯ ಹೆಚ್ಚಿಸುವ ಉದ್ದೇಶ ಇದರ ಹಿಂದೆ ಇದೆ' ಎಂದರು.

ಚಿಟ್ ಫಂಡ್ ವಹಿವಾಟು ವಿಸ್ತರಣೆ: 'ಎಂಎಸ್ಐಎಲ್ ಹಲವು ದಶಕಗಳಿಂದ ಚಿಟ್ ಫಂಡ್ ಸೇವೆ ನೀಡುತ್ತಿದ್ದರೂ ಕೇರಳದ ಮಟ್ಟಕ್ಕೆ ಬೆಳವಣಿಗೆಯಾಗಿಲ್ಲ. ಕೇರಳದಲ್ಲಿ ಸರ್ಕಾರಿ ಸ್ವಾಮ್ಯದ ಚಿಟ್ ಫಂಡ್ ವಹಿವಾಟು ವಾರ್ಷಿಕ ₹35,000 ಕೋಟಿಯಷ್ಟಿದೆ. ಎಂಎಸ್ಐಎಲ್ ಚಿಟ್ ಫಂಡ್ ವ್ಯವಹಾರವನ್ನೂ ವಿಸ್ತರಿಸುವ ಉದ್ದೇಶದಿಂದ ಕೇರಳದ ತಜ್ಞರ ನೆರವು ಕೋರಲಾಗಿದೆ' ಎಂದು ಸಚಿವ ಎಂ.ಬಿ. ಪಾಟೀಲ ಮಾಹಿತಿ ನೀಡಿದರು.

'ಮುಂದಿನ ಐದು ವರ್ಷಗಳಲ್ಲಿ ಎಂಎಸ್ಐಎಲ್ ಚಿಟ್‌ನ ವಾರ್ಷಿಕ ವಹಿವಾಟನ್ನು ₹5,000 ಕೋಟಿ ಮತ್ತು ಹತ್ತು ವರ್ಷಗಳಲ್ಲಿ ₹10,000 ಕೋಟಿಗೆ ಹೆಚ್ಚಿಸುವ ಗುರಿ ಹಾಕಿಕೊಳ್ಳಲಾಗಿದೆ. ಇದಕ್ಕಾಗಿ ಇಡೀ ವ್ಯವಸ್ಥೆಯನ್ನು ಕಂಪ್ಯೂಟರೀಕರಣ ಮಾಡಲಾಗಿದೆ. ನೂತನ ವ್ಯವಸ್ಥೆಯನ್ನು ಮುಖ್ಯಮಂತ್ರಿ ಶೀಘ್ರವೇ ಉದ್ಘಾಟಿಸಲಿದ್ದಾರೆ' ಎಂದರು.



ಎಂಎಸ್ಐಎಲ್‌ನ ಪ್ರವಾಸಿ ಪ್ಯಾಕೇಜ್ ಸೇವೆಯ ಪೋಸ್ಟರ್‌ಗಳನ್ನು ಸಚಿವ ಎಂ.ಬಿ.ಪಾಟೀಲ ಬಿಡುಗಡೆ ಮಾಡಿದರು. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ನಿರ್ದೇಶಕಿ ಗುಂಜನ್ ಕೃಷ್ಣ, ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್ ಮತ್ತು ಎಂಎಸ್ಐಎಲ್ ಅಧ್ಯಕ್ಷ ಪುಟ್ಟರಂಗಶೆಟ್ಟಿ ಉಪಸ್ಥಿತರಿದ್ದರು

ಕೈಗಾರಿಕೆಗಳ ಬೆಳವಣಿಗೆಗೆ ಒತ್ತು

'ರಾಜ್ಯದ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳ ಬೆಳವಣಿಗೆಗೆ ಸರ್ಕಾರ ಒತ್ತು ನೀಡುತ್ತಿದೆ. ಇದರಿಂದ ಹಲವು ಕೈಗಾರಿಕೆಗಳು ಉತ್ತಮ ಪ್ರಗತಿ ಸಾಧಿಸಿವೆ.

ಕೆಎಸ್‌ಡಿಎಲ್‌ನ ಲಾಭದ ಪ್ರಮಾಣ ಒಂದು ವರ್ಷದಲ್ಲಿ ₹300 ಕೋಟಿಯಿಂದ ₹500 + ಕೋಟಿಗೆ ಏರಿಕೆಯಾಗಿದೆ' ಎಂದು ಸಚಿವ ಪಾಟೀಲ ಮಾಹಿತಿ ನೀಡಿದರು.

'ಅದೇ ರೀತಿ ಹುಬ್ಬಳ್ಳಿ ಎನ್‌ಜಿಇಎಫ್ ವಹಿವಾಟು ವಿಸ್ತರಣೆಗಾಗಿ ಬಿಎಚ್ಇಎಲ್ ಜತೆಗೆ ಮಾತುಕತೆ ನಡೆಸಲಾಗುತ್ತದೆ. ಮೈಸೂರು ಪೇಂಟ್ಸ್ ಕಂಪನಿಯ ವಹಿವಾಟನ್ನು ಕೈಗಾರಿಕಾ ಪೇಂಟ್ ಮತ್ತು ಗೃಹಬಳಕೆ ಪೇಂಟ್‌ಗಳ ನಿರ್ಮಾಣಕ್ಕೂ ವಿಸ್ತರಿಸುವ ಯೋಜನೆ ಪ್ರಗತಿಯಲ್ಲಿದೆ. ಎಂಎಸ್ಐಎಲ್ ಮದ್ಯದಂಗಡಿಗಳನ್ನು ಬಳಕೆದಾರ ಸ್ನೇಹಿಯನ್ನಾಗಿ ಪರಿವರ್ತಿಸಿದ ನಂತರ ಹೆಣ್ಣುಮಕ್ಕಳೂ ಮದ್ಯ ಖರೀದಿಗೆ ಬರುತ್ತಿದ್ದಾರೆ. ವಹಿವಾಟು ಏರಿಕೆಯಾಗಿದೆ' ಎಂದರು.

ಎಂಎಸ್ಐಎಲ್ 'ಲೇಖಕ್ ಎ 4 ಕಾಪಿಯರ್' ಕಾಗದಗಳ ತಯಾರಿಕೆ ಆರಂಭಿಸಿದ್ದು, ಸಚಿವರು ಅದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದರು.

ವಿಶೇಷಗಳು

ಅಡುಗೆ ಮನೆಯೊಂದಿಗೆ ಪಯಣ: ಗುಂಪು ಪ್ರವಾಸಗಳಲ್ಲಿ ರಾಜ್ಯದ ತಿನಿಸು–ಆಹಾರವನ್ನೇ ಒದಗಿಸಲಾಗುತ್ತದೆ. ಇದಕ್ಕಾಗಿ ಬಾಣಸಿಗರ ತಂಡ ಪ್ರವಾಸಿಗಳೊಂದಿಗೆ ಇರಲಿದೆ

ಮನೆಬಾಗಿಲಿನಿಂದ ಮನೆ ಬಾಗಿಲಿಗೆ: ಒಂಟಿ ಪ್ರವಾಸಿಗರು, ವೃದ್ಧರು ಮತ್ತು ಹಿರಿಯ ನಾಗರಿಕರನ್ನು ಮನೆಯಿಂದಲೇ ಪ್ರವಾಸಕ್ಕೆ ಕರೆದುಕೊಂಡು ಹೋಗಿ, ಮನೆಗೆ ವಾಪಸ್ ಕರೆತರುವ ಪ್ಯಾಕೇಜ್

ಸಾರ್ವಜನಿಕರಿಗೆ ಇಎಂಐ ಪ್ರವಾಸ: ಪ್ರವಾಸಿ ಪ್ಯಾಕೇಜ್‌ಗಳಿಗೆ ಕೆಲ ತಿಂಗಳ ಕಂತನ್ನು ಕಟ್ಟಿ, ನಂತರದಲ್ಲಿ ಪ್ರವಾಸ ಹೋಗುವ ಸವಲತ್ತು. ಲಕ್ಕಿ ಡಿಪ್ ಮೂಲಕ ಕೆಲ ಪ್ರವಾಸಿಗರನ್ನು ಆಯ್ಕೆ ಮಾಡಿ, ಅವರ ಬಾಕಿ ಮೊತ್ತವನ್ನು ಮನ್ನಾ ಮಾಡುವ ಯೋಜನೆ

ಸರ್ಕಾರಿ ಉದ್ಯೋಗಿಗಳಿಗೆ ಇಎಂಐ ಸವಲತ್ತು: ಪ್ರವಾಸ ಹೋಗುವ ಸಂದರ್ಭದಲ್ಲಿ ಒಟ್ಟು ವೆಚ್ಚದ ಶೇ 50ರಷ್ಟನ್ನು ಪಾವತಿ ಮಾಡಿಸಿಕೊಂಡು, ಬಾಕಿಯನ್ನು ಇಎಂಐ ಮೂಲಕ ಕಟ್ಟಿಸಿಕೊಳ್ಳುವ ಸವಲತ್ತು

- ತಲಾ ₹20,000 ಶುಲ್ಕದಲ್ಲಿ 15–18 ದಿನಗಳ ಉತ್ತರ ಭಾರತ ಪ್ರವಾಸ ಪ್ಯಾಕೇಜ್. ವಿವಿಧ ಆಯ್ಕೆಗಳು
- ಪ್ರವಾಸದುದ್ದಕ್ಕೂ ಎಂಎಸ್ಐಎಲ್ ಸಿಬ್ಬಂದಿ ಪ್ರವಾಸಿಗರ ಜತೆಯಲ್ಲಿ ಇರಲಿದ್ದಾರೆ. 24 ಗಂಟೆಗಳ ಸಹಾಯವಾಣಿ ಸೇವೆ
- ಪ್ರವಾಸದ ಎಲ್ಲ ಸ್ಥಳಗಳಲ್ಲಿ ವೈದ್ಯರ ಸೇವೆ. 50ಕ್ಕಿಂತ ಹೆಚ್ಚು ಜನರಿರುವ ಗುಂಪು ಪ್ರವಾಸದಲ್ಲಿ ವೈದ್ಯರು ಜತೆಯಲ್ಲಿ ಇರಲಿದ್ದಾರೆ
- ಕಾಶಿ, ವಾರಾಣಸಿ, ಅಯೋಧ್ಯೆ, ಕೈಲಾಸ ಪರ್ವತ ಸೇರಿ ಉತ್ತರ ಭಾರತದ ಪ್ರವಾಸ ಪ್ಯಾಕೇಜ್ (ಇದೇ ಸೆಪ್ಟೆಂಬರ್‌ನಲ್ಲಿ ಮೊದಲ ತಂಡ ಪ್ರವಾಸಕ್ಕೆ ಹೋಗಲಿದೆ)
- ದುಬೈ, ಸಿಂಗಪುರ, ವಿಯೆಟ್ನಾಂ, ಶ್ರೀಲಂಕಾ, ನೇಪಾಳ, ಥಾಯ್ಲೆಂಡ್ ಮತ್ತು ಯೂರೋಪಿನ ಹಲವು ದೇಶಗಳಿಗೆ ವಿದೇಶಿ ಪ್ರವಾಸ ಪ್ಯಾಕೇಜ್


ಉತ್ತರಕನ್ನಡ ಜಿಲ್ಲೆ ಜೊಯಿಡಾದಲ್ಲಿ ಬುಧವಾರ ನಡೆದ ಗೆಡ್ಡೆಗೆಣಸು ಮೇಳದಲ್ಲಿ ಗಮನಸೆಳೆದ ದೊಡ್ಡ ಗಾತ್ರದ ನಾಗರ ಗೆಡ್ಡೆಗಳು –ಪ್ರಜಾವಾಣಿ ಚಿತ್ರ

ಶಾಸಕ ಸಿ.ಟಿ. ರವಿ ಪ್ರಕರಣ ಸಿ.ಎಂಗೆ ರಾಜ್ಯಪಾಲರ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನ ಪರಿಷತ್ ಬಿಜೆಪಿ ಸದಸ್ಯ ಸಿ.ಟಿ. ರವಿ ಅವರ ಬಂಧನ ಪ್ರಕರಣದಲ್ಲಿ ಗಂಭೀರ ಸಮಸ್ಯೆಗಳಾಗಿವೆ. ಈ ವಿಷಯದಲ್ಲಿ ಮಧ್ಯಪ್ರವೇಶಿಸಿ, ಅಗತ್ಯ ಕ್ರಮ ತೆಗೆದುಕೊಳ್ಳಿ' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

2024ರ ಡಿಸೆಂಬರ್ 31ರಂದು ಬರೆದಿರುವ ಪತ್ರದಲ್ಲಿ, 'ತಮ್ಮ ಬಂಧನದ ನಂತರ ಬೆಳಗಾವಿ ಪೊಲೀಸ್ ಆಯುಕ್ತ, ಪೊಲೀಸ್ ಎಸ್‌ಪಿ ಮತ್ತು ಅಧೀನ ಅಧಿಕಾರಿಗಳು ಅಪಾಯಕಾರಿ ಸ್ಥಳಗಳಿಗೆ ಕರೆದೊಯ್ದಿದ್ದರು. ರಾತ್ರಿಯಿಡೀ 400 ಕಿ.ಮೀ. ಓಡಾಡಿಸಿದ್ದಾರೆ. ಪೊಲೀಸರ ಬಂಧನದಲ್ಲಿ ಇದ್ದ ವೇಳೆಯೇ ತಮಗೆ ಗಾಯವಾಗಿದೆ ಎಂದು ಸಿ.ಟಿ. ರವಿ ದೂರು ನೀಡಿದ್ದಾರೆ' ಎಂದು ರಾಜ್ಯಪಾಲ ಉಲ್ಲೇಖಿಸಿದ್ದಾರೆ.

'ತಮ್ಮ ಮೇಲೆ ಮಾನಸಿಕವಾಗಿ, ದೈಹಿಕವಾಗಿ ಹಲ್ಲೆ ನಡೆಸಿದ್ದಾರೆ. ತಾವು ನೀಡಿದ ದೂರಿನ ಅನ್ವಯ ಎಫ್‌ಐಆರ್ ಸಹ ದಾಖಲಿಸಿರಲಿಲ್ಲ ಎಂದು ಸಿ.ಟಿ. ರವಿ ವಿವರಿಸಿದ್ದಾರೆ. ಸಂಬಂಧಿತ ದಾಖಲೆಗಳನ್ನೂ ಸಲ್ಲಿಸಿದ್ದಾರೆ. ಅವೆಲ್ಲವನ್ನೂ ಪರಿಶೀಲಿಸಿದ್ದೇನೆ. ಈ ವಿಷಯ ಅತ್ಯಂತ ಗಂಭೀರವಾದುದು ಮತ್ತು ನೀವು ಮಧ್ಯಪ್ರವೇಶಿಸಬೇಕು' ಎಂದು ರಾಜ್ಯಪಾಲ ಅವರು ಮುಖ್ಯಮಂತ್ರಿಗೆ ಹೇಳಿದ್ದಾರೆ.

'ಇದು ಜನಪ್ರತಿನಿಧಿಗೆ ಸಂಬಂಧಿಸಿದ ವಿಚಾರವಾಗಿರುವ ಕಾರಣ ಸಂಬಂಧಿತ ಎಲ್ಲ ದಾಖಲೆಗಳನ್ನು ನೀವು ವೈಯಕ್ತಿಕವಾಗಿ ಪರಿಶೀಲಿಸಬೇಕು ಮತ್ತು ಅಗತ್ಯ ಕ್ರಮ ತೆಗೆದುಕೊಳ್ಳಬೇಕು' ಎಂದು ಹೇಳಿದ್ದಾರೆ. ಈ ಪತ್ರಕ್ಕೆ ಮುಖ್ಯಮಂತ್ರಿಯವರು ಇನ್ನೂ ಉತ್ತರ ನೀಡಿಲ್ಲ ಎಂದು ಮೂಲಗಳು ತಿಳಿಸಿವೆ.

21ಕ್ಕೆ 'ಜೈ ಸಂವಿಧಾನ' ಸಮಾವೇಶ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಗಾಂಧಿ ಭಾರತ' ಕಾರ್ಯಕ್ರಮದ ನಿಮಿತ್ತ ಬೆಳಗಾವಿಯ ಸುವರ್ಣ ವಿಧಾನಸೌಧದ ಆವರಣದಲ್ಲಿ ಗಾಂಧಿ ಪ್ರತಿಮೆ ಅನಾವರಣ ಮತ್ತು ಬೆಳಗಾವಿ ನಗರದಲ್ಲಿ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಸಮಾವೇಶವನ್ನು ಇದೇ 21ರಂದು ಹಮ್ಮಿಕೊಳ್ಳಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗಾಂಧೀಜಿಯವರು ಕಾಂಗ್ರೆಸ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಕಳೆದ ಡಿ. 26ಕ್ಕೆ ನೂರು ವರ್ಷ ತುಂಬಿದ ಹಿನ್ನೆಲೆಯಲ್ಲಿ ಅಂದು ಬೆಳಗಾವಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ನಡೆಸಲಾಗಿತ್ತು. ಮರುದಿನ ನಡೆಯಬೇಕಿದ್ದ ಕಾರ್ಯಕ್ರಮಗಳನ್ನು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ನಿಧನರಾದ ಕಾರಣಕ್ಕೆ ಮುಂದೂಡಲಾಗಿತ್ತು' ಎಂದರು.

'ಪಕ್ಷದ ಮುಂದಿನ ಹೋರಾಟದ ಬಗ್ಗೆ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಚರ್ಚಿಸಿ 21ರಂದು ಈ ಕಾರ್ಯಕ್ರಮ ನಡೆಸಲು ತೀರ್ಮಾನಿಸಿದ್ದಾರೆ. 1924ರ ಕಾಂಗ್ರೆಸ್ ಅಧಿವೇಶನದ ಕುರಿತ ಮಾಹಿತಿಯನ್ನು ಒಳಗೊಂಡ ಪುಸ್ತಕಗಳನ್ನು ಅಂದು ಬಿಡುಗಡೆ ಮಾಡಲಾಗುವುದು' ಎಂದರು.

'ಎಐಸಿಸಿ ಸಮಾವೇಶ ಏರ್ಪಡಿಸಿದ್ದು, ಪ್ರತಿ ಕ್ಷೇತ್ರದಿಂದ ಮುಖಂಡರು, ಕಾರ್ಯಕರ್ತರು ಸೇರಿ ಕನಿಷ್ಠ 100 ಮಂದಿ ಈ ಸಮಾವೇಶದಲ್ಲಿ ಭಾಗವಹಿಸಲು ಕರೆ ನೀಡುತ್ತಿದ್ದೇವೆ. ಸಮಾವೇಶದಲ್ಲಿ ಭಾಗವಹಿಸಲಿರುವ ಪಕ್ಷದ ಹಿರಿಯ ನಾಯಕರ ಬಗ್ಗೆ ಮುಂದಿನ ದಿನಗಳಲ್ಲಿ ತಿಳಿಸಲಾಗುವುದು' ಎಂದರು.

'ಈ ಕಾರ್ಯಕ್ರಮದ ಸಿದ್ಧತೆಗಳ ಕುರಿತು ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ನೇತೃತ್ವದಲ್ಲಿ ಪಕ್ಷದ ಎಲ್ಲ ಪದಾಧಿಕಾರಿಗಳು, ಬ್ಲಾಕ್ ಮತ್ತು ಜಿಲ್ಲಾ ಘಟಕಗಳ ಅಧ್ಯಕ್ಷರು, ಶಾಸಕರು, ವಿವಿಧ ಘಟಕಗಳ ಅಧ್ಯಕ್ಷರು, ಮಾಜಿ ಸಚಿವರು, ಶಾಸಕರ ಸಭೆ ಇದೇ 13ರಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ. ಸಂಜೆ 4 ಗಂಟೆಗೆ ಕೆಪಿಸಿಸಿ ಪದಾಧಿಕಾರಿಗಳ ಸಭೆ ನಡೆಯಲಿದ್ದು, ಸಂಜೆ 6 ಗಂಟೆಗೆ ಮುಖ್ಯಮಂತ್ರಿಯವರು ಶಾಸಕಾಂಗ ಪಕ್ಷದ ಸಭೆ ನಡೆಸಲಿದ್ದಾರೆ' ಎಂದು ತಿಳಿಸಿದರು.

'ಎಲ್ಲ ಶಾಸಕರು, ಪರಾಜಿತ ಅಭ್ಯರ್ಥಿಗಳು ಜ. 15 ಮತ್ತು 16ರಂದು ತಮ್ಮ ಕ್ಷೇತ್ರಗಳಲ್ಲಿ ಪಕ್ಷ ಸಂಘಟನೆಗೆ ಪೂರ್ವಭಾವಿ ಸಭೆ ನಡೆಸಬೇಕು. ಸಭೆಯಲ್ಲಿ ಕ್ಷೇತ್ರದ ಪದಾಧಿಕಾರಿಗಳು, ಉಸ್ತುವಾರಿ, ವೀಕ್ಷಕರು ಭಾಗ ವಹಿಸಲಿದ್ದಾರೆ' ಎಂದರು.

ಮಾಜಿ ಸಿ.ಎಂ ವೀರಪ್ಪ ಮೊಯಿಲಿ, ಸಚಿವರಾದ ಜಿ. ಪರಮೇಶ್ವರ, ಕೆ.ಎಚ್. ಮುನಿಯಪ್ಪ, ಸತೀಶ ಜಾರಕಿಹೊಳಿ, ಲಕ್ಷ್ಮೀ ಹೆಬ್ಬಾಳಕರ, ಶಾಸಕ ಶ್ರೀನಿವಾಸ್, ಮೇಲ್ಮನೆ ಸದಸ್ಯ ಎಸ್. ರವಿ ಇದ್ದರು.

ಜಲಜೀವನ್: ಕೇಂದ್ರದ ಪಾಲು ಕಡಿತ

ಸಿಗಬೇಕಿದ್ದು ₹3,804 ಕೋಟಿ, ಕೊಟ್ಟಿದ್ದು ₹570 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಅನುಷ್ಠಾನಗೊಳ್ಳುತ್ತಿರುವ ಜಲಜೀವನ್ ಮಿಷನ್ ಕಾಮಗಾರಿಗಳಿಗೆ 2024–25ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ₹3,804 ಕೋಟಿ ಅನುದಾನ ನೀಡಬೇಕಿತ್ತು. ಆದರೆ, ಈವರೆಗೆ ₹570 ಕೋಟಿಯನ್ನಷ್ಟೇ ನೀಡಿದೆ. ಕೇಂದ್ರದ ಪಾಲು ಗಣನೀಯವಾಗಿ ಕಡಿತ ಆಗಿದೆ ಎಂದು ರಾಜ್ಯ ಸರ್ಕಾರ ಬಲವಾಗಿ ಆಕ್ಷೇಪ ವ್ಯಕ್ತಪಡಿಸಿದೆ.

ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ ಹಾಗೂ ರಾಜ್ಯ ಸಚಿವ ವಿ.ಸೋಮಣ್ಣ ನೇತೃತ್ವದಲ್ಲಿ ನವದೆಹಲಿಯಲ್ಲಿ ನಡೆದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಕೇಂದ್ರದ ಧೋರಣೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಬಾಕಿ ಅನುದಾನವನ್ನು ಕೂಡಲೇ ಬಿಡುಗಡೆ ಮಾಡುವಂತೆ ಆಗ್ರಹಿಸಿದರು.

ಜಲಜೀವನ್ ಮಿಷನ್ ಯೋಜನೆಯಲ್ಲಿ ರಾಜ್ಯ ಉತ್ತಮ ಸಾಧನೆ ಮಾಡಿದೆ. 2023–24 ಹಾಗೂ 2024–25ನೇ ಸಾಲಿನಲ್ಲಿ ಕ್ರಮವಾಗಿ 9.23 ಲಕ್ಷ ಹಾಗೂ 6.82 ಲಕ್ಷ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ ಎಂದು ಅವರು ತಿಳಿಸಿದರು.

ಮುಖ್ಯಾಂಶಗಳು

- ಪ್ರಗತಿ ಪರಿಶೀಲನೆ ಸಭೆಯಲ್ಲಿ ರಾಜ್ಯದಿಂದ ತೀವ್ರ ಆಕ್ಷೇಪ
- ಬಾಕಿ ಅನುದಾನ ಕೂಡಲೇ ಬಿಡುಗಡೆ ಮಾಡಲು ಆಗ್ರಹ

'ಈ ಯೋಜನೆಗೆ 2023–24ನೇ ಸಾಲಿನಲ್ಲಿ ₹12,292 ಕೋಟಿ ವೆಚ್ಚ ಮಾಡಲಾಗಿದೆ. ಇದರಲ್ಲಿ ಕೇಂದ್ರದ ಪಾಲು ಶೇ 45.26 ಹಾಗೂ ರಾಜ್ಯದ ಪಾಲು ಶೇ 56.74. ಆದರೆ, 2024ನೇ ಸಾಲಿನಲ್ಲಿ ಕೇಂದ್ರದ ಪಾಲು ಶೇ 16.24ಕ್ಕೆ ಇಳಿಕೆಯಾಗಿದೆ. 2024–25ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ₹7,652 ಕೋಟಿ ಹಂಚಿಕೆ ಮಾಡಿ ₹5,467 ಕೋಟಿ ಬಿಡುಗಡೆಗೊಳಿಸಿದೆ. ಆದರೆ, ಕೇಂದ್ರ ತನ್ನ ಪಾಲನ್ನು ನೀಡಿಲ್ಲ' ಎಂದು ಅವರು ದೂರಿದರು.

'ಜಲ ಜೀವನ್ ಮಿಷನ್ ಅಡಿಯಲ್ಲಿ ಹೊಸದಾಗಿ 23 ಯೋಜನೆಗಳನ್ನು ಕೈಗೆತ್ತಿಕೊಳ್ಳಲು ರಾಜ್ಯ ಸರ್ಕಾರ ಉದ್ದೇಶಿಸಿದೆ. ಇದಕ್ಕಾಗಿ ₹13 ಸಾವಿರ ಕೋಟಿಯ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಕಳುಹಿಸಿ ಹಲವು ಸಮಯ ಕಳೆದಿದೆ. ಆದರೆ, ಅದಕ್ಕೆ ಇನ್ನೂ ಅನುಮೋದನೆ ನೀಡಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಸ್ವಚ್ಛ ಭಾರತ್ ಮಿಷನ್‌ನಲ್ಲಿ (ಗ್ರಾಮೀಣ) ರಾಜ್ಯದ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಸಿ.ಆರ್. ಪಾಟೀಲ, 'ರಾಜ್ಯದ ಶೇ 18ರಷ್ಟು ಗ್ರಾಮಗಳು ಬಯಲು ಮಲ ವಿಸರ್ಜನೆ ಮುಕ್ತ ಮಾದರಿ ಗ್ರಾಮ ಸ್ಥಾನಮಾನ ಗಳಿಸಿವೆ. ಸ್ವಚ್ಛ ಭಾರತ್ ಮಿಷನ್‌ನ ಗುರಿ ತಲುಪಲು ರಾಜ್ಯವು ಪ್ರಾದೇಶಿಕ ನಾಯಕನಾಗಬೇಕು' ಎಂದು ಸಲಹೆ ನೀಡಿದರು.

'ಗ್ರಾಮೀಣ ಪ್ರದೇಶದ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಂಟಿಯಾಗಿ ಜಾರಿಗೊಳಿಸುತ್ತಿರುವ ಜಲ ಜೀವನ್ ಮಿಷನ್ ಯೋಜನೆಗೆ 2019ರಲ್ಲಿ ಚಾಲನೆ ನೀಡಲಾಗಿತ್ತು. ಇಡೀ ದೇಶದಲ್ಲಿ ನಳ ನೀರು ಸಂಪರ್ಕ ಕಲ್ಪಿಸಲು ₹3.5 ಲಕ್ಷ ಕೋಟಿ ಬೇಕಾಗುತ್ತದೆ ಎಂದು ಅಂದಾಜಿಸಲಾಗಿತ್ತು. ಆದರೆ, ಈಗ ಯೋಜನೆಯ ಮೊತ್ತ ₹11 ಲಕ್ಷ ಕೋಟಿಗೆ ಏರಿದೆ. ಗುತ್ತಿಗೆದಾರಿಗೆ ಬಾಕಿ ಪಾವತಿಸದ ಕಾರಣ ಅಸ್ಸಾಂ, ಮಧ್ಯಪ್ರದೇಶದಲ್ಲಿ ಕಾಮಗಾರಿಗಳು ಸ್ಥಗಿತವಾಗಿದೆ. ಯೋಜನಾ ವೆಚ್ಚದಲ್ಲಿ ಭಾರಿ ಹೆಚ್ಚಳ ಆಗಿರುವುದು ರಾಜ್ಯಗಳಿಗೆ ಅನುದಾನ ಕಡಿತಕ್ಕೆ ಕಾರಣ' ಎಂದು ರಾಜ್ಯ ಸರ್ಕಾರದ ಮೂಲಗಳು ತಿಳಿಸಿವೆ.

'ವೈ ವಿ ಡೈ' ಕೃತಿ ಸಂವಾದ • ಪ್ರೊ.ವೆಂಕಿ ರಾಮಕೃಷ್ಣನ್ ಅಭಿಮತ

'ವಿಜ್ಞಾನಿಗಳು ಸ್ವಂತಿಕೆ ತೋರಲಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಭಾರತೀಯ ವಿಜ್ಞಾನಿಗಳು ಸಂಶೋಧನೆಯಲ್ಲಿ ಸ್ವಂತ ಪ್ರತಿಭೆಯನ್ನು ಹೆಚ್ಚು ಅನಾವರಣಗೊಳಿಸುತ್ತಿಲ್ಲ. ಹಳೆ ವಿಷಯಗಳಲ್ಲೇ ಸುತ್ತುತ್ತಿದ್ದಾರೆ' ಎಂದು ನೊಬೆಲ್ ಪುರಸ್ಕೃತ ವಿಜ್ಞಾನಿ ಪ್ರೊ.ವೆಂಕಿ ರಾಮಕೃಷ್ಣನ್ ಪ್ರತಿಪಾದಿಸಿದರು.

ನಗರದಲ್ಲಿ ಬುಧವಾರ 'ಮೈಸೂರು ಲಿಟ್ರರಿ ಫೋರಂ ಚಾರಿಟಬಲ್ ಟ್ರಸ್ಟ್' ಹಾಗೂ 'ಮೈಸೂರು ಬುಕ್ ಕ್ಲಬ್ಸ್–2015' ಆಯೋಜಿಸಿದ್ದ ತಮ್ಮ ಕೃತಿ 'ವೈ ವಿ ಡೈ' ಕುರಿತ ಸಂವಾದದಲ್ಲಿ ಮಾತನಾಡಿ, 'ವಿಶ್ವದರ್ಜೆಯ ಆವಿಷ್ಕಾರ ಮಾಡುವ ಸಾಮರ್ಥ್ಯವುಳ್ಳ ಭಾರತದ ವಿಜ್ಞಾನಿಗಳು ಜೀವವೈವಿಧ್ಯ, ಪ್ರಾಣಿಗಳ ವರ್ತನೆ, ಪರಿಸರ ವಿಷಯಗಳತ್ತ ಮುಖ ಮಾಡಲಿ' ಎಂದರು.

'ವಿಕಾಸವಾದವು ವ್ಯಕ್ತಿಯ ಸಾಮರ್ಥ್ಯ, ಫಿಟ್‌ನೆಸ್ ಆಧರಿಸಿರುತ್ತದೆ. ನಾವು ರೋಗ ನಿಯಂತ್ರಿಸಬಹುದಷ್ಟೇ. ಚಿಕಿತ್ಸೆ ಮೂಲಕ ಕ್ಯಾನ್ಸರ್‌ನಿಂದಲೂ ತಪ್ಪಿಸಿಕೊಳ್ಳಬಹುದು. ಆದರೆ, ವಯಸ್ಸಾಗುವುದನ್ನು ಹಾಗೂ ಸಾವನ್ನು ತಡೆಯಲಾಗದು' ಎಂದರು.

'ಆಯುಷ್ಯವನ್ನು ಪ್ರೋಟಿನ್‌ಗಳು ನಿರ್ಧರಿಸುತ್ತವೆ. ಸರಿಯಾದ ಸಮಯ ಹಾಗೂ ಪ್ರಮಾಣದಲ್ಲಿ ಪ್ರೋಟಿನ್ ಉತ್ಪಾದಿಸುವ ಹಾಗೂ ನಿಷ್ಕ್ರಿಯಗೊಳಿಸುವ ಸಾಮರ್ಥ್ಯ ದೇಹಕ್ಕಿರುವವರೆಗೂ ಬದುಕಿರುತ್ತೇವೆ. ಸುಮ್ಮನೆ ಕುಳಿತಿದ್ದರೂ ನಮ್ಮೊಳಗಿನ ಸಾವಿರಾರು ಜೀವಕೋಶಗಳು ಸಾಯುತ್ತಿರುತ್ತವೆ. ಸತ್ತರೂ ಬಹುತೇಕ ಜೀವಂತವಾಗಿರುತ್ತವೆ. ಮೂತ್ರಪಿಂಡ, ಹೃದಯ ಸೇರಿ ಅಂಗಾಂಗ ದಾನ ಮಾಡಬಹುದು' ಎಂದರು.

'ದೀರ್ಘಾಯುಷ್ಯ ದಾಖಲೆಯ ಮಿತಿ 122 ದಾಟಿಲ್ಲ. ಆದರೆ, ವಯಸ್ಕರ ಪ್ರಮಾಣ ಹಾಗೂ ಜೀವಿತಾವಧಿಯನ್ನು ಹೆಚ್ಚಿಸಲು ದಕ್ಷಿಣ ಕೊರಿಯಾ ಹಾಗೂ ಚೀನಾ ಮುಂದಾಗಿವೆ. 700ಕ್ಕೂ ಹೆಚ್ಚು ಕಂಪನಿಗಳು ಕೋಟ್ಯಂತರ ಹಣ ಹೂಡುತ್ತಿವೆ' ಎಂದರು.

ಲೇಖಕ ಪ್ರೊ.ಸಿ.ನಾಗಣ್ಣ ಹಾಗೂ ವಿಜ್ಞಾನಿ ಪ್ರೊ.ಮೇವಾ ಸಿಂಗ್ ಸಂವಾದ ನಡೆಸಿಕೊಟ್ಟರು.


'ವೈ ವಿ ಡೈ' ಕೃತಿ ಸಂವಾದದಲ್ಲಿ ನೊಬೆಲ್ ಪುರಸ್ಕೃತ ವಿಜ್ಞಾನಿ ಪ್ರೊ.ವೆಂಕಿ ರಾಮಕೃಷ್ಣನ್ ಮಾತನಾಡಿದರು. ಪ್ರೊ.ಮೇವಾ ಸಿಂಗ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಕೃತಿ: 'ವೈ ವಿ ಡೈ: ದಿ ನ್ಯೂ ಸೈನ್ಸ್ ಆಫ್ ಏಜಿಂಗ್ ಅಂಡ್ ಲಾಂಗ್ವಿಟಿ'
ಲೇಖಕ: ಪ್ರೊ.ವೆಂಕಿ ರಾಮಕೃಷ್ಣನ್
ಪ್ರಕಾಶನ: ಹ್ಯಾಶೆಟ್ ಇಂಡಿಯಾ
ಪುಟ: 810, **ಬೆಲೆ:** ₹ 699



❦ ಸುಭಾಷಿತ ❦
ಸಂಗೀತ, ನೃತ್ಯ, ಚಿತ್ರಕಲೆಯಂತಹ ಕಲಾಪ್ರಕಾರಗಳು ಹಾಗೂ ಸಾಹಿತ್ಯ ಎಲ್ಲಿ ಜೀವಂತವಾಗಿ ಇರುತ್ತವೆಯೋ ಅಲ್ಲಿಯ ಸಮಾಜವೂ ಜೀವಂತವಾಗಿ ಇರುತ್ತದೆ.
–ರಾಜೀವ್ ತಾರಾನಾಥ್

ರಾಜ್ಯಪಾಲರ ನಡೆ ಸರಿಯಲ್ಲ ಸಣ್ಣತನದ ರಾಜಕಾರಣ ಬೇಡ

ತಮಿಳುನಾಡಿನ ರಾಜ್ಯಪಾಲ ಆರ್.ಎನ್. ರವಿ ಅವರು ಪದೇ ಪದೇ ತಪ್ಪುಗಳನ್ನು ಮಾಡುತ್ತಿದ್ದಾರೆ. ವಿವಾದಗಳನ್ನು ಹಾಗೂ ರಾಜ್ಯ ಸರ್ಕಾರದ ಜೊತೆ ಸಂಘರ್ಷವನ್ನು ಉದ್ದೇಶಪೂರ್ವಕವಾಗಿ ಸೃಷ್ಟಿಸುತ್ತಿದ್ದಾರೆ. ಸೋಮವಾರ ಅವರು ಸದನದ ಕಲಾಪ ಆರಂಭವಾಗುವಾಗ ಸಾಂಪ್ರದಾಯಿಕವಾಗಿ ತಾವು ಓದಬೇಕಿದ್ದ ಭಾಷಣವನ್ನು ಓದದೆಯೇ ಸದನದಿಂದ ಹೊರನಡೆದಿದ್ದಾರೆ. ತಾವು ಭಾಷಣ ಓದುವ ಮೊದಲು ರಾಷ್ಟ್ರಗೀತೆಯನ್ನು ನುಡಿಸಲಿಲ್ಲ ಎಂಬ ಕಾರಣಕ್ಕೆ ಸದನದಿಂದ ಹೊರನಡೆದಿದ್ದಾಗಿ ಅವರು ಹೇಳಿಕೊಂಡಿದ್ದಾರೆ. ಸದನದಲ್ಲಿ 'ಭಾರತದ ಸಂವಿಧಾನ ಮತ್ತು ರಾಷ್ಟ್ರಗೀತೆಗೆ ಮತ್ತೆ ಅವಮಾನ ಮಾಡಲಾಯಿತು' ಮತ್ತು ಆ ಕೃತ್ಯದಲ್ಲಿ ಭಾಗಿಯಾಗಬಾರದು ಎಂದು ರಾಜ್ಯಪಾಲರು ಸದನದಿಂದ ಹೊರನಡೆದರು ಎಂದು ರಾಜಭವನ ಪ್ರಕಟಣೆಯಲ್ಲಿ ಹೇಳಲಾಗಿದೆ. ತಮಿಳುನಾಡು ಸದನದಲ್ಲಿ ಸಂಪ್ರದಾಯದ ಪ್ರಕಾರ, ಆರಂಭದಲ್ಲಿ ತಮಿಳುನಾಡಿನ ನಾಡಗೀತೆಯನ್ನು ನುಡಿಸಲಾಗುತ್ತದೆ, ಕೊನೆಯಲ್ಲಿ ರಾಷ್ಟ್ರಗೀತೆ ನುಡಿಸಲಾಗುತ್ತದೆ. ರಾಜ್ಯಪಾಲರ ನಡೆಯು 'ಮಕ್ಕಳಾಟದಂತೆ' ಇತ್ತು, ಅವರ ಹುದ್ದೆಗೆ ತಕ್ಕುದಾಗಿ ಇರಲಿಲ್ಲ ಎಂದು ರಾಜ್ಯ ಸರ್ಕಾರ ಹೇಳಿದೆ.



ತಮಿಳುನಾಡಿನ ರಾಜ್ಯಪಾಲರ ಕೆಲವು ನಡೆಗಳು ಸಂವಿಧಾನಕ್ಕೆ ವಿರುದ್ಧ, ಪ್ರಜಾತಂತ್ರಕ್ಕೆ ಕೆಡುಕು ಉಂಟುಮಾಡುವಂಥವು

ರಾಜ್ಯ ಸರ್ಕಾರದ ಜೊತೆ ಸಂಘರ್ಷ ಸೃಷ್ಟಿಸಲು ರಾಜ್ಯಪಾಲರು ಹೊಸ ವಿಷಯಗಳನ್ನು ಅರಸುತ್ತಿದ್ದಾರೆ ಎಂಬುದು ಸ್ಪಷ್ಟ. ರಾಜ್ಯದ ವಿಧಾನಸಭೆಯನ್ನು ಉದ್ದೇಶಿಸಿ ಭಾಷಣ ಮಾಡುವ ವಿಚಾರವಾಗಿ ರಾಜ್ಯಪಾಲರು ಸತತ ಮೂರನೆಯ ವರ್ಷವೂ ವಿವಾದವನ್ನು, ಯಾರಿಗೂ ಬೇಕಾಗಿಲ್ಲದ ಸಂದರ್ಭವನ್ನು ಸೃಷ್ಟಿಸಿದ್ದಾರೆ. 2023ರಲ್ಲಿ ಅವರು ತಮಗೆ ರಾಜ್ಯ ಸರ್ಕಾರ ನೀಡಿದ್ದ ಭಾಷಣದ ಕೆಲವು ಭಾಗಗಳನ್ನು ಓದಲಿಲ್ಲ. ಅವರು ಓದದೆ ಕೈಬಿಟ್ಟ ಭಾಗಗಳಲ್ಲಿ 'ದ್ರಾವಿಡ ಮಾದರಿ ಆಡಳಿತ'ದ ಉಲ್ಲೇಖವೂ ಒಂದಾಗಿತ್ತು. ಕಳೆದ ವರ್ಷ ರವಿ ಅವರು ಲಿಖಿತ ಭಾಷಣ ಓದಲು ನಿರಾಕರಿಸಿದ್ದರು. ರಾಜ್ಯ ಸರ್ಕಾರ ಸಿದ್ಧಪಡಿಸಿದ ಭಾಷಣದಲ್ಲಿನ ಪಠ್ಯವನ್ನು ಮಾತ್ರ ಸದನದ ಕಡತಗಳಲ್ಲಿ ಉಳಿಸಬೇಕು ಎಂದು ಸ್ಪೀಕರ್ ಅವರು ಒತ್ತಾಯಿಸುವ ನಿರ್ಣಯವನ್ನು ಸದನದಲ್ಲಿ ಮಂಡಿಸಿದಾಗ ರವಿ ಅವರು ಕೋಪ ಮಾಡಿಕೊಂಡು ಹೊರನಡೆದಿದ್ದರು. ಆಗ ಇದ್ದ ಸಂದರ್ಭದಲ್ಲಿ ರಾಷ್ಟ್ರಗೀತೆಯನ್ನು ನುಡಿಸದೆ ಇರುವುದನ್ನು ರಾಷ್ಟ್ರಗೀತೆಗೆ ಮಾಡುವ ಅವಮಾನ ಎಂದು ರಾಜ್ಯಪಾಲರು ಪರಿಗಣಿಸಿದ್ದು ಆಶ್ಚರ್ಯಕರ. ರಾಜ್ಯಪಾಲರ ಭಾಷಣಕ್ಕೂ ಮೊದಲು ರಾಷ್ಟ್ರಗೀತೆಯನ್ನು ನುಡಿಸಬೇಕು ಎಂಬ ಶಿಷ್ಟಾಚಾರ ಇಲ್ಲ. ಹೀಗಾಗಿ, ಸೋಮವಾರ ಸದನದಲ್ಲಿ ರಾಷ್ಟ್ರಗೀತೆ ಅಥವಾ ಸಂವಿಧಾನಕ್ಕೆ ಅವಮಾನ ಆಗಿಲ್ಲ. ವಾಸ್ತವದಲ್ಲಿ, ಕಳೆದ ವರ್ಷ ಅವರು ರಾಷ್ಟ್ರಗೀತೆ ನುಡಿಸುವುದಕ್ಕೂ ಮೊದಲೇ ಸದನದಿಂದ ಹೊರನಡೆದಿದ್ದರು. ಅವರಿಂದಾಗಿ ರಾಷ್ಟ್ರಗೀತೆಗೆ ಅವಮಾನ ಆಯಿತು ಎಂಬ ಆರೋಪ ಇತ್ತು.

ರಾಜ್ಯಪಾಲ ರವಿ ಅವರು ತಮಿಳುನಾಡಿನ ಡಿಎಂಕೆ ನೇತೃತ್ವದ ಸರ್ಕಾರಕ್ಕೆ ದೇಶಭಕ್ತಿ ಇಲ್ಲ ಎಂದು ತೋರಿಸುವ ಉದ್ದೇಶದಿಂದ ಇಂತಹ ಸಂದರ್ಭಗಳನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ರಾಜ್ಯ ಸರ್ಕಾರ ಸಿದ್ಧಪಡಿಸಿಕೊಟ್ಟ ಭಾಷಣವನ್ನು ಸದನದಲ್ಲಿ ಓದುವುದು ರಾಜ್ಯಪಾಲರ ಸಾಂವಿಧಾನಿಕ ಕರ್ತವ್ಯ. ಈ ಕರ್ತವ್ಯ ನಿರ್ವಹಿಸಲು ರವಿ ಅವರು ನಿರಾಕರಿಸುತ್ತಿದ್ದಾರೆ, ಭಾಷಣದ ವಿಚಾರವಾಗಿ ಕೋಪ ಪ್ರದರ್ಶಿಸುವ ಕೆಲಸ ಮಾಡುತ್ತಿದ್ದಾರೆ. ಮಸೂದೆಗಳಿಗೆ ಅಂಕಿತ ಹಾಕದೆ ಅವುಗಳನ್ನು ಹಾಗೆಯೇ ಇರಿಸಿಕೊಳ್ಳುವುದು, ಸರ್ಕಾರದ ಬಗ್ಗೆ ಟೀಕೆಗಳು ಇರುವ ಹೇಳಿಕೆಗಳನ್ನು ನೀಡುವುದು, ಕೆಲವು ನಿರ್ಧಾರಗಳನ್ನು ಕೈಗೊಳ್ಳುವುದು ಸೇರಿದಂತೆ ರವಿ ಅವರ ಹಲವು ನಡೆಗಳು ತಾವು ಹೊಂದಿರುವ ಸಾಂವಿಧಾನಿಕ ಹುದ್ದೆಯನ್ನು ಸರ್ಕಾರಕ್ಕೆ ರಾಜಕೀಯ ಪ್ರತಿರೋಧ ಒಡ್ಡುವ ಮಟ್ಟಕ್ಕೆ ಇಳಿಸಿವೆ. ಬಿಜೆಪಿಯನ್ನು ರಾಜಕೀಯವಾಗಿ ವಿರೋಧಿಸುವ ಪಕ್ಷಗಳ ನೇತೃತ್ವದ ಸರ್ಕಾರ ಇರುವ ಇತರ ಕೆಲವು ರಾಜ್ಯಗಳಲ್ಲಿಯೂ ರಾಜ್ಯಪಾಲರು ಇದೇ ರೀತಿಯಲ್ಲಿ ನಡೆದುಕೊಂಡ ನಿದರ್ಶನಗಳಿವೆ. ಇಂತಹ ನಡೆಗಳು ಸಂವಿಧಾನಕ್ಕೆ ವಿರುದ್ಧ, ಪ್ರಜಾತಂತ್ರಕ್ಕೆ ಕೆಡುಕು ಉಂಟುಮಾಡುವಂಥವು.

ದಿನದ ಟ್ವೀಟ್

ಪೋಷಕರ ಮೇಲಿದೆ ಹೊಣೆಗಾರಿಕೆ

ಮಕ್ಕಳು ಕನ್ನಡದಲ್ಲಿ ಮಾತನಾಡದೇ ಇರುವುದರಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳ ಪಾತ್ರ ಇರುತ್ತದಾದರೂ ಅವರು ಕನ್ನಡದಲ್ಲಿ ಮಾತನಾಡುವಂತೆ ನೋಡಿಕೊಳ್ಳಬೇಕಾದ ಹೊಣೆಗಾರಿಕೆ ಅಂತಿಮವಾಗಿ ಪೋಷಕರ ಮೇಲೇ ಇರುತ್ತದೆ. ಮನೆಯಲ್ಲಿನ ನಿರಂತರ ಪ್ರಯತ್ನ, ಅಂದರೆ ಕುಟುಂಬದ ಸದಸ್ಯರ ನಡುವಿನ ಸಂಭಾಷಣೆಯಂತಹ ಪ್ರಯತ್ನಗಳು ನಿರ್ಣಾಯಕ. ಕನ್ನಡದ ಹೆಸರಿನಲ್ಲಿ ವೃತ್ತಿಬದುಕು ಕಂಡುಕೊಂಡಿರುವ ವ್ಯಕ್ತಿಯು ಮುಂದಿನ ಪೀಳಿಗೆಗೆ ಆ ಭಾಷೆಯನ್ನು ಕಲಿಸದಿರುವುದು ದುಃಖದ ವಿಚಾರ.

(ಚಿತ್ರನಟ ಸುದೀಪ್ ಅವರ ಪುತ್ರಿ ಟಿ.ವಿ. ಕಾರ್ಯಕ್ರಮವೊಂದರಲ್ಲಿ ಕನ್ನಡದಲ್ಲಿ ಮಾತನಾಡದೇ ಇದ್ದುದು ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಗೆ ಗ್ರಾಸವಾಗಿರುವುದಕ್ಕೆ ಪ್ರತಿಕ್ರಿಯೆ)

ಅಕ್ಷಯ್

ಕಿಡಿನುಡಿ

ಸಾರ್ವಜನಿಕವಾಗಿ ಇಷ್ಟೊಂದು ನಿರ್ಭೀತಿಯಿಂದ ಅವರು ಹೀಗೆ ಮಾಡಲು ಹೇಗೆ ಸಾಧ್ಯ... ಮುಖ್ಯ ರಸ್ತೆಯ ಸಿಗ್ನಲ್‌ಗಳಲ್ಲಿ ಕ್ಯಾಮೆರಾಗಳು ಇರುತ್ತವೆ, ಆದರೂ ಅವರು ಅದನ್ನು ಲೆಕ್ಕಕ್ಕೆ ಇಟ್ಟುಕೊಂಡಂತೆ ಕಾಣುವುದಿಲ್ಲ.

(ಬೆಂಗಳೂರಿನ ಕೋರಮಂಗಲದ ಸಿಗ್ನಲ್ ಬಳಿ, ಕಾರೊಂದನ್ನು ಬೈಕ್‌ನಲ್ಲಿ ಹಿಂಬಾಲಿಸಿಕೊಂಡು ಬಂದ ಇಬ್ಬರು ಯುವಕರು, ಆ ಕಾರನ್ನು ನಿಲ್ಲಿಸಿದ ಕೂಡಲೇ ಅದರ ಮೇಲೆ ಹತ್ತಿ ದಾಂದಲೆ ನಡೆಸಿರುವುದಕ್ಕೆ ಪ್ರತಿಕ್ರಿಯೆ. ಕೆಲ ದಿನಗಳ ಹಿಂದೆ ನಡೆದಿರುವ ಈ ಪ್ರಕರಣ ಡ್ಯಾಷ್‌ಕ್ಯಾಮ್‌ನಲ್ಲಿ ದಾಖಲಾಗಿದ್ದು, ಇತ್ತೀಚೆಗೆ ಬಹಿರಂಗಗೊಂಡಿದೆ)

ಹರೀಶ್ ಕಿರಣ್, ಎಂಜಿನಿಯರ್

25 ವರ್ಷಗಳ ಹಿಂದೆ
ಭಾನುವಾರ, 9-1-2000

- **ಯೋಜನೆ ನಿಲ್ಲಿಸಲು ಆಂಧ್ರಕ್ಕೆ ಆಗ್ರಹ**

ಬೆಂಗಳೂರು, ಜ. 8– 'ಕೃಷ್ಣಾ ನದಿ ಕಣಿವೆಯಲ್ಲಿ ಆಂಧ್ರಪ್ರದೇಶ ಕೈಗೊಳ್ಳುತ್ತಿರುವ, ಕೇಂದ್ರದಿಂದ ಅನುಮೋದನೆ ಪಡೆಯದ ನೀರಾವರಿ ಯೋಜನೆಗಳನ್ನು ನಿಲ್ಲಿಸುವಂತೆ ಆ ರಾಜ್ಯಕ್ಕೆ ಸೂಚಿಸಬೇಕು' ಎಂದು ಕೇಂದ್ರ ಸರ್ಕಾರವನ್ನು ಕೋರಲಾಗುವುದು ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ಇಲ್ಲಿ ತಿಳಿಸಿದರು.

ದೆಹಲಿಯಿಂದ ಹಿಂದಿರುಗಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು 'ಆಂಧ್ರಪ್ರದೇಶ ಕೈಗೊಳ್ಳುತ್ತಿರುವ ನೀರಾವರಿ ಯೋಜನೆಗಳನ್ನು ತಡೆಯಲು ಮಧ್ಯ-ಪ್ರವೇಶಿಸುವಂತೆ ಪ್ರಧಾನಿ ಅವರಿಗೆ ಪತ್ರ ಬರೆಯುವುದಾಗಿ' ಹೇಳಿದರು.

- **'ಪಾಕಿಸ್ತಾನ ಭಯೋತ್ಪಾದಕ ರಾಷ್ಟ್ರ ಘೋಷಣೆ'**

ನವದೆಹಲಿ, ಜ. 8 (ಯುಎನ್‌ಐ)– ಪಾಕಿಸ್ತಾನವನ್ನು ಭಯೋತ್ಪಾದಕ ರಾಷ್ಟ್ರ ಎಂದು ಘೋಷಿಸುವುದಕ್ಕೆ ಅಂತರರಾಷ್ಟ್ರೀಯ ಸಹಕಾರವನ್ನು ಪಡೆಯುವ ನಿಟ್ಟಿನಲ್ಲಿ ಭಾರತ ಕಾರ್ಯಪ್ರವೃತ್ತವಾಗಿದೆ ಎಂದು ಪ್ರಧಾನಿಯ ರಾಷ್ಟ್ರೀಯ ಭದ್ರತಾ ಸಲಹೆಗಾರ ಹಾಗೂ ಪ್ರಧಾನ ಕಾರ್ಯದರ್ಶಿ ಬ್ರಜೇಶ್ ಮಿಶ್ರಾ ಅವರು ಹೇಳಿದ್ದಾರೆ.

'ಪಾಕಿಸ್ತಾನವು ಭಾರತದಲ್ಲಿ ಪ್ರಾರಂಭಿಸಿರುವ ಭಯೋತ್ಪಾದಕ ಚಟುವಟಿಕೆಗಳನ್ನು ನಿಲ್ಲಿಸಲೇಬೇಕಾಗುವುದು. ಇದರಲ್ಲಿ ಎರಡಭಿಪ್ರಾಯವೇ ಇಲ್ಲ: ಆದರೆ, ಇದನ್ನು ಮಾಡುವುದು ಹೇಗೆ ಎಂಬ ವಿಚಾರದಲ್ಲಿ ಎರಡಭಿಪ್ರಾಯ ಇರಬಹುದು. ಈ ವಿಷಯದಲ್ಲಿ ನಾವು ಅಂತರರಾಷ್ಟ್ರೀಯ ಸಹಕಾರವನ್ನು ಕೇಳಲು ಪ್ರಾರಂಭಿಸಿದ್ದೇವೆ. ಪಾಕಿಸ್ತಾನ ಭಯೋತ್ಪಾದಕ ರಾಷ್ಟ್ರ ಎಂದೇ ನಾವು ಪರಿಗಣಿಸಿದ್ದೇವೆ' ಎಂದು ಅವರು ಸ್ಟಾರ್ ಟಿ.ವಿಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದರು.

50 ವರ್ಷಗಳ ಹಿಂದೆ
ಗುರುವಾರ, 9-1-1975

- **ಧಾರ್ಮಿಕ ಸಹಿಷ್ಣುತೆಯ ವಾತಾವರಣಕ್ಕೆ ಅಹಮದ್ ಕರೆ**

ನವದೆಹಲಿ, ಜ. 8– ರಾಷ್ಟ್ರದ ಅಭಿವೃದ್ಧಿಗಾಗಿ ಹಿಂದೂಗಳು ಮತ್ತು ಮುಸ್ಲಿಮರು ಒಟ್ಟಿಗೆ ಕಲೆತು ಕೆಲಸ ಮಾಡಬೇಕೆಂದು ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹಮದ್ ಇಂದು ಇಲ್ಲಿ ತಿಳಿಸಿದರು.

'ರಾಷ್ಟ್ರ ನಿರ್ಮಾಪಕ ಛತ್ರಪತಿ ಶಿವಾಜಿ' ಎಂಬ ವಿಷಯದ ಬಗ್ಗೆ ರಾಷ್ಟ್ರೀಯ ವಿಚಾರ-ಗೋಷ್ಠಿಯನ್ನು ಉದ್ಘಾಟಿಸುತ್ತಾ ಅಹಮದ್ ಅವರು 'ಈ ಸನಾತನ ದೇಶದಲ್ಲಿ ಹಿಂದೂ ಮತ್ತು ಮುಸ್ಲಿಂ ಜನರು ಶತಮಾನಗಳಿಂದಲೂ ಸಹೋದರರಂತೆ ವಾಸ ಮಾಡಿಕೊಂಡು ಬಂದಿದ್ದಾರೆ. ಇನ್ನು ಮುಂದೆಯೂ ಸಹೋದರರಂತೆಯೇ ಇರುತ್ತಾರೆ. ಧಾರ್ಮಿಕ ಸಹಿಷ್ಣುತೆಯು ಶಿವಾಜಿಯ ಮುಖ್ಯ ಗುಣಗಳಲ್ಲಿ ಒಂದು. ಇಂಥ ಸಹಿಷ್ಣುತೆ ಇರುವ ಮನೋಭಾವ ಇಂದು ಅಗತ್ಯವಾಗಿದೆ' ಎಂದು ತಿಳಿಸಿದರು.

- **ಪ್ರಧಾನಿಯಿಂದ ಪ್ರಜಾಸತ್ತೆಯ 'ಕೊಲೆ': ಜೆ.ಪಿ. ಆರೋಪ**

ಕೋಟ, ಜ. 8– 'ಬಿಹಾರ ಚಳವಳಿ ಪ್ರಜಾಸತ್ತಾತ್ಮಕ ಕಾರ್ಯವ್ಯವಸ್ಥೆಯನ್ನು ಬಲಗೊಳಿಸುತ್ತಿದ್ದರೆ, ಇಂದಿರಾ ಗಾಂಧಿ ಅವರು ಪ್ರಜಾಸತ್ತೆಯ ಹತ್ಯೆಯಲ್ಲಿ ನಿರತರಾಗಿದ್ದಾರೆ' ಎಂದು ಸರ್ವೋದಯ ನಾಯಕ ಜಯಪ್ರಕಾಶ್ ನಾರಾಯಣ್ ಅವರು ಇಂದು ಇಲ್ಲಿ ತಿಳಿಸಿದರು.

'ಜವಾಹರಲಾಲ್ ನೆಹರೂ ಅವರು ಪ್ರಜಾತಂತ್ರವಾದಿಯಾಗಿದ್ದು ಉತ್ತಮ ದಾರ್ಶನಿಕರಾಗಿದ್ದರು. ಆದರೆ, ಇಂದಿರಾ ಗಾಂಧಿ ನಿರಂಕುಶಾಧಿಕಾರಿಯಾಗಿದ್ದಾರೆ' ಎಂದು ಜಯಪ್ರಕಾಶ್ ನಾರಾಯಣರು ಸ್ಥಳೀಯ ಕಾಲೇಜುವೊಂದರ ವಿದ್ಯಾರ್ಥಿ ಸಂಘವನ್ನು ಉದ್ಘಾಟಿಸುತ್ತಾ ಹೇಳಿದರು.

ತಾಪಮಾನದ ಕಿಚ್ಚಿಗೆ ಗಾಳಿ ಹಾಕುವ, ಯಾಂಬು ಕೈಕುಲುಕುವ ಪೈಪೋಟಿ ಎಲ್ಲೆಡೆ

ಕುಂಡಲಿಯಲ್ಲಿ ಕಂಡ ಅಗ್ನಿಕುಂಡಗಳು



ವಿಜ್ಞಾನ ವಿಶೇಷ
ನಾಗೇಶ ಹೆಗಡೆ

2025ರಲ್ಲಿ ಭೂಮಿಯ ಭವಿಷ್ಯವನ್ನು ತೋರಿಸುವ ಬಹುತೇಕ ಎಲ್ಲ ಕುಂಡಲಿಗಳೂ ಅಗ್ನಿಕುಂಡವನ್ನೇ ತೋರಿಸುತ್ತಿವೆ. ಭೂಮಿಯ ತಾಪಮಾನ ಇನ್ನಷ್ಟು ಏರಲಿದೆ; ಯಾಂತ್ರಿಕ ಬುದ್ಧಿಮತ್ತೆ (ಯಾಂಬು) ತನ್ನ ತೋಳುಗಳನ್ನು ಇನ್ನಷ್ಟು ವಿಸ್ತಾರಕ್ಕೆ ಚಾಚಿಕೊಳ್ಳಲಿದೆ... ಇವೇ.

ಈ ಎರಡೂ ಸೇರಿ ನಮ್ಮನ್ನು ಹೇಗೆ ಕಂಗೆಡಿಸಲಿವೆ? ಮೊನ್ನೆ ಜನವರಿ 6, 7ರಂದು ನಡೆದ 'ಹಾಸನ ಸಾಹಿತ್ಯ ಉತ್ಸವ'ದಲ್ಲಿ ಈ ಎರಡು ವಿಷಯಗಳೇ ಮುನ್ನೆಲೆಗೆ ಬಂದವು. ವಿಜ್ಞಾನ-ತಂತ್ರಜ್ಞಾನದ ದಾಂಗುಡಿಯನ್ನು ಚರ್ಚಿಸುವ 'ನಾಳೆಗಳು ನಮಗಾಗಿ' ಮತ್ತು 'ಎಐ ಎಂಬ ಅಮಾನುಷ ಕೈ' ಹೆಸರಿನ ಎರಡು ಗೋಷ್ಠಿಗಳಿದ್ದವು. ಸಾಹಿತ್ಯ ಸಮಾವೇಶವೊಂದರ ಪ್ರಧಾನ ವೇದಿಕೆಯಲ್ಲಿ ಇಂಥ ಸಮಕಾಲೀನ ವಿಷಯಗಳನ್ನು ಚರ್ಚಿಸಿದ್ದು, ಕಿಕ್ಕಿರಿದ ಸಭಿಕರು ಏಕಾಗ್ರತೆಯಿಂದ ಕೇಳಿಸಿಕೊಂಡಿದ್ದು ಇದೇ ಮೊದಲಿರಬೇಕು. ಸಮಾವೇಶದ ಆರಂಭವೂ ಅಷ್ಟೇ ವಿನೂತನವಾಗಿತ್ತು: ಹೊಸ ಫಸಲಿನ ಕೊಯ್ಲಿನ ಈ ದಿನಗಳಲ್ಲೇ ಭತ್ತವನ್ನು ತೂರುವುದರ ಮೂಲಕ ಉದ್ಘಾಟನೆ ನೆರವೇರಿತು.

ಅಂದಹಾಗೆ ಈ ಎರಡು ಮಹಾಸುನಾಮಿಗಳ ಚರ್ಚೆ ಅತ್ತ ನಡೆಯುತ್ತಿದ್ದ ಸಂದರ್ಭದಲ್ಲೇ ಅವಕ್ಕೆ ಸಂಬಂಧಿಸಿದ ಮೂರು ಸಂಚಲನಗಳು ಸುದ್ದಿರೂಪದಲ್ಲಿ ಹೊಮ್ಮಿದವು. ಇತ್ತ ಟಿಬೆಟನ್ ಪ್ರಸ್ಥಭೂಮಿಯಲ್ಲಿ ಬಲವಾದ ಭೂಕಂಪನ ಸಂಭವಿಸಿದೆ. ಯಾರ್ಲುಂಗ್ (ಬ್ರಹ್ಮಪುತ್ರ) ನದಿಗೆ ಜಗತ್ತಿನ ಅತಿ ದೊಡ್ಡ ಅಣೆಕಟ್ಟನ್ನು ನಿರ್ಮಿಸಹೊರಟ ಚೀನಾ, ಅವಸರದಲ್ಲಿ 'ಅಪಾಯವಿಲ್ಲ' ಎಂದು ಸಾರಿದೆ. ಕೃತಕ ಬುದ್ಧಿಮತ್ತೆಯನ್ನು ಎಲ್ಲೆಲ್ಲೂ ವಿಸ್ತರಿಸುವ ಉದ್ದೇಶದಿಂದ ಭಾರತದಲ್ಲಿ 300 ಕೋಟಿ ಡಾಲರ್ ಹೂಡಿಕೆ ಮಾಡುತ್ತೇನೆಂದು ಹೇಳುತ್ತ ಮೈಕ್ರೊಸಾಫ್ಟ್ ಮುಖ್ಯಸ್ಥ ಸತ್ಯ ನಾದೆಲ್ಲಾ ಇದೇ ವೇಳೆಗೆ ಪ್ರಧಾನಿ ನರೇಂದ್ರ ಮೋದಿಯವರ ಜೊತೆ ಫೋಟೊ ತೆಗೆಸಿಕೊಂಡಿದ್ದಾರೆ. ಇವೆಲ್ಲಕ್ಕಿಂತ ದೊಡ್ಡ ಕಂಪನವನ್ನು ಸೃಷ್ಟಿಸಬಲ್ಲ ಹೇಳಿಕೆಯನ್ನು ಅತ್ತ ಟ್ರಂಪ್ ಮಹಾಶಯ ನೀಡಿದ್ದಾರೆ. ಈತ ಕೆನಡಾ ಕಡೆ ಕೈಬೀಸುತ್ತ ಇಡೀ ದೇಶವನ್ನು ತನ್ನ ತೆಕ್ಕೆಯಲ್ಲಿ ತೆಗೆದುಕೊಳ್ಳಲು ಹೊರಟಂತೆ ಯಾಂಬು ರೂಪಿಸಿದ ಚಿತ್ರವೊಂದನ್ನು ಜಾಗತಿಕ ಮಟ್ಟದಲ್ಲಿ ಬಿತ್ತರಿಸಲಾಗಿದೆ. ತನ್ನ ಅಧ್ಯಕ್ಷತೆಯಲ್ಲಿ ಕೆನಡಾ ಮತ್ತು ಗ್ರೀನ್‌ಲ್ಯಾಂಡ್ ಎರಡನ್ನೂ ತನ್ನೊಳಗೆ ಲೀನಗೊಳಿಸಲು ಅಮೆರಿಕ ಸಿದ್ಧ ಇರುವುದಾಗಿ ಆತ ಹೇಳಿದ್ದಾರೆ.

ಪೃಥ್ವಿಯ ನೆತ್ತಿಗೆ ಹತ್ತಿರದಲ್ಲೇ ಇರುವ ಈ ಎರಡೂ ದೇಶಗಳ ಹಿಮದ ಹಾಸಿನಲ್ಲಿ ಭಾರೀ ಸಂಪತ್ತಿನ ನಿಕ್ಷೇಪಗಳಿವೆ. ಜಗತ್ತಿನ ಶಕ್ತಿ ಬೇಡಿಕೆಯ ಶೇ 30ರಷ್ಟನ್ನು ಪೂರೈಸಬಲ್ಲ ನೈಸರ್ಗಿಕ ಅನಿಲ, ಶೇ 13ರಷ್ಟು ತೈಲ ಮತ್ತು ಯಾಂಬು ಚಾಲನೆಗೆ ಬೇಕಾದ ಸಾವಿರ ಶತಕೋಟಿ ಡಾಲರ್ ಮೌಲ್ಯದ ಅಪರೂಪದ ರೇರರ್ಥ್ ಖನಿಜಗಳು ಇವೆಯೆಂದು ಅಂದಾಜು ಮಾಡಲಾಗಿದೆ.

ಭೂತಾಪ ಹೆಚ್ಚುತ್ತ ಹೋದರೆ ಅಲ್ಲಿನ ಹಿಮಹಾಸು ಕರಗುತ್ತದೆ. ನಿಸರ್ಗವೇ ಹೂತಿಟ್ಟ ಹೆಪ್ಪು ಮೀಥೇನ್ ಹಠಾತ್ ಅನಿಲವಾಗಿ ವಾಯುಮಂಡಲಕ್ಕೆ ಸೇರುತ್ತದೆ. ಇದು ಇಂಗಾಲದ ಡೈಆಕ್ಸೈಡ್‌ಗಿಂತ 24 ಪಟ್ಟು ಹೆಚ್ಚು ಪ್ರಮಾಣದಲ್ಲಿ ಆಕಾಶದ ಶಾಖವನ್ನು ಹೆಚ್ಚಿಸಬಹುದಾಗಿದೆ. ಹಿಮದ ಕನ್ನಡಿಯಿಂದ ಪ್ರತಿಫಲನವಾಗಬೇಕಿದ್ದ ಸೂರ್ಯನ ಕಿರಣಗಳನ್ನು ಹೀರಿಕೊಂಡು ನೆಲವೂ ಬಿಸಿಯಾಗುತ್ತದೆ. ಆದರೆ ಟ್ರಂಪ್, ಪುಟಿನ್ನರಿಗೆ ಆ ನೆಲದ ಕೆಳಗಿರುವ ಖನಿಜ, ತೈಲ ಮತ್ತು ಅನಿಲವೇ ಮಹತ್ವದ್ದಾಗಿ ಕಾಣುತ್ತಿದೆ.

ಪೃಥ್ವಿಯ ನೆತ್ತಿಯ ಹೆಪ್ಪುಗಟ್ಟಿರುವ ಈ ಸಂಪತ್ತಿಗಾಗಿ ರಷ್ಯಾದ ವಿಜ್ಞಾನಿಗಳು ಹದಿನೆಂಟು ವರ್ಷಗಳ ಹಿಂದೆಯೇ ಅಪರೂಪದ ಸಾಹಸವನ್ನು ಮೆರೆದಿದ್ದರು. ಹಿಮದಲ್ಲಿ ರಂಧ್ರ ಕೊರೆದು ತಳದ ಸಾಗರಕ್ಕೆ ಪುಟ್ಟ ಜಲಾಂತರ್ಗಾಮಿ ನೌಕೆಯನ್ನು ಇಳಿಸಿ, ನಾಲ್ಕೂವರೆ ಕಿ.ಮೀ. ಆಳಕ್ಕೆ ತಲುಪಿ ಅಲ್ಲಿ (ಟೈಟಾನಿಯಂ ಲೋಹಖಚಿತ) ರಷ್ಯಾದ ಧ್ವಜವನ್ನು ನೆಟ್ಟು ಬಂದಿದ್ದರು. ಮರಳಿ ಬರುವಾಗ ತುಸುವೇ ದಾರಿ ತಪ್ಪಿದ್ದರೂ ಹಿಮರಂಧ್ರಕ್ಕೆ ತಲುಪಲಾಗದೆ ಎಲ್ಲರೂ ಸಮಾಧಿ ಆಗಬಹುದಿತ್ತು. 'ಅದು ಚಂದ್ರಯಾನದಷ್ಟೇ ದೊಡ್ಡ ಸಾಹಸವಾಗಿತ್ತು' ಎಂದು ರಷ್ಯಾದ ಧ್ರುವ ಸಂಶೋಧನ ಸಂಸ್ಥೆಯ ವಕ್ತಾರರು 2007ರಲ್ಲಿ ಹೇಳಿದ್ದರು. ಅಮೆರಿಕ, ಕೆನಡಾ, ಡೆನ್ಮಾರ್ಕ್, ನಾರ್ವೆ ಮತ್ತು ರಷ್ಯಾ- ಈ ಐದೂ ದೇಶಗಳು ಆ ಭೂಭಾಗವನ್ನು ತಮ್ಮದೆಂದು ಹೇಳಿಕೊಳ್ಳುತ್ತಿವೆ. ಭೂಮಿಗೆ ಬರಲಿರುವ ಶಾಖಸಂಕಟದ ನಿವಾರಣೆಗೆ ಒಂದಾಗುವ ಬದಲು ಈ ಬಲಿಷ್ಠ ರಾಷ್ಟ್ರಗಳು ಹೊಸ ಕಂಟಕಗಳ ಪ್ರಪಾತದತ್ತ ಭೂಗ್ರಹವನ್ನು ತಳ್ಳಲು ಪೈಪೋಟಿ ನಡೆಸಿವೆ.

ಭೂಮಿಯ ನೆತ್ತಿಯ ಸಂಪತ್ತಿನ ಸಂಗತಿ ಒತ್ತಟ್ಟಿಗಿರಲಿ. ನಮ್ಮ ನೆತ್ತಿಯೊಳಗಿನ ಸಂಪತ್ತೂ ಹೊರಕ್ಕೆ ಬಂದು ವಿರಾಟ್ ರೂಪ ತಳೆಯುತ್ತಿದೆ. ತನ್ನಂತಾನೇ ವಿಕಾಸವಾಗುವ ಡಿಜಿಟಲ್ ಜೀವಿಯೊಂದಕ್ಕೆ ನಾವು ಜನ್ಮಕೊಟ್ಟಿದ್ದೇವೆ. ಇದರ ಬುದ್ಧಿಮತ್ತೆಗೆ ಮಿತಿಯಿಲ್ಲ. ಇದಕ್ಕೆ ಹಗಲು-ರಾತ್ರಿ, ಸೂಟಿ- ಸುಸ್ತು ಏನೇನೂ ಇಲ್ಲ. ಭಾಷೆಯ ಗಡಿಮಿತಿ ಇಲ್ಲ; ಇಂದ್ರಿಯಗಳ ಬಂಧನವಿಲ್ಲ. ಬಿಸಿ-ತಂಪು, ವಿಕಿರಣ, ಕ್ಷಕಿರಣಗಳ ಭಯವಿಲ್ಲ. ಕವಿ, ಕತೆಗಾರ, ಕಲಾಕಾರ, ಜಾದೂಗಾರ, ನಿರ್ದೇಶಕ, ವಿಜ್ಞಾನಿ, ತತ್ವಜ್ಞಾನಿ, ವದಂತಿಗಳ ಸೃಷ್ಟಿಕರ್ತ, ಲಯಕರ್ತ, ಪತ್ರಕರ್ತ ಏನೆಲ್ಲ ರೂಪಗಳಲ್ಲಿ ಸೃಜನಶೀಲತೆಯ ಮಹಾಧಾರೆಯೇ ಆಗಬಲ್ಲ ಇದು ಏಕಕಾಲಕ್ಕೆ ಸಕಲ ಸಂಕಟಗಳ ವಿಮೋಚನೆಗೂ ಸೈ, ಹೊಸ ಸಂಕಟಗಳ ಉಗಮಕ್ಕೂ ಸೈ. ಅರ್ಜುನನಿಗೆ ಕಂಡ ವಿಶ್ವರೂಪಕ್ಕಿಂತ ವಿರಾಟ್ ಎನ್ನಿಸುವ 'ಜೀವಿ'ಯಿಂದ ಆದಷ್ಟೂ ಹೆಚ್ಚು ಶಕ್ತಿ ಮತ್ತು ಸಾಮರ್ಥ್ಯವನ್ನು ಮೊಗೆಯುವ ತುಡಿತ ಎಲ್ಲೆಡೆ ಕಾಣುತ್ತಿದೆ. 'ಅದು ಪ್ರಜಾತಂತ್ರವನ್ನೇ ಹೊಸಕಿ ಹಾಕಲೂಬಹುದು' ಎನ್ನುತ್ತಾರೆ ಚಿಂತಕ ಯುವಾಲ್ ನೋವಾ ಹರಾರೆ. ಮುಸೋಲಿನಿ, ಲೆನಿನ್ ಇವರೆಲ್ಲ ಡಿಕ್ಟೇಟರ್‌ಗಳಾಗುವ ಮುನ್ನ ಮಾಧ್ಯಮವನ್ನು ಮುಷ್ಟಿಯಲ್ಲಿ ಹಿಡಿದ ಸಂಪಾದಕರಾಗಿದ್ದರು ಎಂಬುದನ್ನು ನೆನಪಿಸುತ್ತ 'ಈಗಾಗಲೇ ಸಂಪರ್ಕ ಮಾಧ್ಯಮಗಳೆಲ್ಲ ಯಾಂಬು ತೆಕ್ಕೆಗೆ ಬಂದಿವೆ ನೋಡಿ' ಎನ್ನುತ್ತಾರೆ.

ಹಿಂದೆಲ್ಲ ಕೃತಕ ಬುದ್ಧಿಮತ್ತೆ ಎಂದರೆ ರೋಬಾಟ್ ಎಂದೇ ಕಲ್ಪಿಸಲಾಗುತ್ತಿತ್ತು. 'ಅದಕ್ಕೇನು ಬಿಡಿ, ಪ್ಲಗ್ ಕಿತ್ತು, ಬ್ಯಾಟರಿ ಡೆಡ್ ಮಾಡಿದರೆ ಮುದುರಿ ಮೂಲೆಗೆ ಕೂರುತ್ತದೆ' ಎಂಬ ಕಲ್ಪನೆಯಿತ್ತು. ಯಾಂಬು ಹಾಗಲ್ಲ; ಅದು ನಮ್ಮನ್ನೇ ರೋಬಾಟ್‌ಗಳನ್ನಾಗಿ ಮಾಡಿಕೊಳ್ಳುತ್ತದೆ. ನಿಮ್ಮ ಕೈಯಲ್ಲೊ, ಕಿವಿಯಲ್ಲೊ, ಕಿಸೆಯಲ್ಲೊ ಕೂತು ನಿಮ್ಮನ್ನು ಆಡಿಸುತ್ತದೆ. ನಿಮಗೆ ಹೊಸ ವಿದ್ಯೆ ಕಲಿಸುವ ಶಿಕ್ಷಕನಾಗಿ, ವೈದ್ಯನಾಗಿ, ವಕೀಲನಾಗಿ, ಮತಬಾಂಧವನಾಗಿ ಸಕಲ ವ್ಯವಹಾರಗಳ ಸಲಹಾಕಾರನಾಗಿ, ಹಣ ಗಳಿಸುವ ಅಥವಾ ಲಪಟಾಯಿಸುವ ಗುರುವೋ ಗೆಳೆಯನೋ ಆಗುತ್ತದೆ. ದೇವರೂ ಆದೀತೆ, ಕೇಳಬೇಡಿ. ಅದನ್ನು ದೇವರನ್ನಾಗಿಸುವ ಸಿದ್ಧತೆಗಳು ನಡೆಯುತ್ತಿವೆ. ಅಮೆರಿಕದ ಅನೇಕ ಚರ್ಚ್‌ಗಳಲ್ಲಿ ಧರ್ಮೋಪದೇಶಕ್ಕೆ ಯಾಂಬು ಬಳಕೆಗೆ ಬಂದಿದೆ. ಹೊಸ ಧರ್ಮವೂ ಅವತಾರ ಎದ್ದುಬಂದೀತು.

ಅನಾದಿ ಕಾಲದ ಅಮೀಬಾದಂತೆ, ಈಗಿನ್ನೂ ವಿಕಾಸದ ಮೊದಲ ಹಂತದಲ್ಲಿರುವ ಈ ಡಿಜಿಟಲ್ ಜೀವಿಯನ್ನು ಪೋಷಿಸುವ ಪೈಪೋಟಿ, ಪಳಗಿಸುವ ಪರದಾಟ, ದುಡಿಮೆಗೆ ಹಚ್ಚುವ ತುಡಿತ ಎಲ್ಲಕ್ಕೂ ಈ ವರ್ಷ ಹೈಸ್ಪೀಡ್ ನೂಕುಬಲ ಸಿಗತೊಡಗಿದೆ. ಡಿಜಿಟಲ್ ಕಂಪನಿಗಳ ದಿಗ್ಗಜರೆಲ್ಲ ಅಷ್ಟದಿಕ್ಕುಗಳಿಗೆ ಧಾವಿಸುತ್ತ ವಿವಿಧ ಭೂಖಂಡಗಳ ಶಕ್ತಿಕೇಂದ್ರಗಳಿಗೆ ಅಂಟಿಕೊಳ್ಳತೊಡಗಿದ್ದಾರೆ. ಟ್ರಂಪ್ ತೆಕ್ಕೆಗೆ ಎಲಾನ್ ಮಸ್ಕ್ ಸೇರಿದ್ದನ್ನೂ ನಾದೆಲ್ಲಾ ಬಂದು ಮೋದಿಯವರ ಕೈಕುಲುಕಿ ಒಂದು ಕೋಟಿ ಜನರಿಗೆ ಕೆಲಸ ಕೊಡಿಸುವುದಾಗಿ ಹೇಳಿದ್ದನ್ನೂ ಈ ದೃಷ್ಟಿಯಲ್ಲಿ ನೋಡಬೇಕು.

ಕೃತಕ ಬುದ್ಧಿಮತ್ತೆಯ ವಿಕಾಸಕ್ಕೆ ಬ್ರೇಕ್ ಹಾಕುವ ಪ್ರಶ್ನೆ ಹಾಸನದ ಸಮಾವೇಶದಲ್ಲಿ ಚರ್ಚೆಗೆ ಬಂತು. ಸುಚಿರ್ ಬಾಲಾಜಿ ಎಂಬ ಪ್ರತಿಭಾವಂತ ಯುವಕ ಯಾಂಬು ಪ್ರಸೂತಿ ಗೃಹದಲ್ಲೇ (ಓಪನ್ ಎಐ ಕಂಪನಿಯಲ್ಲಿ) ಕೆಲಸದಲ್ಲಿದ್ದ. ಅದರ ಅನೈತಿಕ ಕೆಲಸಗಳ ಬಗ್ಗೆ ತಗಾದೆ ಎತ್ತುತ್ತಿದ್ದ. ಸ್ಯಾನ್‌ಫ್ರಾನ್ಸಿಸ್ಕೊ ನಗರದಲ್ಲಿ ಆತ ಈಚೆಗೆ ಆತ್ಮಹತ್ಯೆ ಮಾಡಿಕೊಂಡ. 'ಅದು ಆತ್ಮಹತ್ಯೆ ಅಲ್ಲ, ಹತ್ಯೆ' ಎಂದು ಭಾರತೀಯ ಮೂಲದ ಅವನ ಅಪ್ಪ-ಅಮ್ಮ ಹೆಚ್ಚಿನ ತನಿಖೆಗೆ ಒತ್ತಾಯಿಸಿದ್ದಾರೆ.

ಯಾಂಬು ಭೂತವನ್ನು ಬಾಟಲಿಯೊಳಕ್ಕೆ ಮತ್ತೆ ತೂರಿಸುವುದು ಹೇಗೆ? ಸರಳ ಉಪಾಯವಿದೆ: 'ಅಯ್ಯಾ ಯಾಂಬು, ನಿನ್ನನ್ನು ದಿಗ್ಬಂಧನದಲ್ಲಿ ಇಡಬೇಕಾಗಿದೆ. ಒಂದು ಸುಭದ್ರ ಡಿಜಿಟಲ್ ಲಾಕಪ್ ಬೇಕಾಗಿದೆ. ಅದಕ್ಕೆ ಬೇಕಾದ ಅಲ್ಗೊರಿದಮ್ಮನ್ನು ನೀನೇ ಸೃಷ್ಟಿ ಮಾಡು ನೋಡೋಣ' ಎನ್ನೋಣವೆ?



ಚುರುಮುರಿ



ಔತಣ ಪಾಲಿಟಿಕ್ಸ್!

• ಗುರು ಪಿ.ಎಸ್.

'ನಾಳೆ ನಮ್ಮ ಆಪ್ತ ನಾಯಕರನ್ನೆಲ್ಲ ಡಿನ್ನರ್‌ಗೆ ಕರೆದಿದ್ದೇನೆ, ಯಾವುದೇ ತೊಂದರೆ ಆಗದಂಗೆ ನೋಡ್ಕೊ' ಎಮ್ಮೆಲ್ಲೆ ವಿಜಿ, ಪಿಎ ಮುದ್ದಣ್ಣನಿಗೆ ಹೇಳಿದ.

'ಏನ್ ವಿಶೇಷ ಸರ್' ಕುತೂಹಲದಿಂದ ಕೇಳಿದ ಮುದ್ದಣ್ಣ.

'ಏನಿಲ್ಲ, ಸುಮ್ಮನೆ ಹೊಸ ವರ್ಷಕ್ಕೆ ಸೇರೋಣ ಅಂತ'.

'ಹೊಸ ವರ್ಷ ಬಂದು ಒಂದು ವಾರ ಆಯ್ತು, ಈಗ ಪಾರ್ಟಿ ಯಾಕೆ ಸರ್?'

'ಹೇಳಿದಷ್ಟು ಮಾಡು, ಔತಣಕೂಟದ ಬಗ್ಗೆ ನಿನಗ್ಯಾಕಿಷ್ಟು ಆಸಕ್ತಿ?' ಸಿಟ್ಟಿನಲ್ಲಿ ಹೇಳಿದ ವಿಜಿ.

'ನನಗಲ್ಲ ಸರ್, ಮಾಧ್ಯಮದವರಿಗೆ ಆಸಕ್ತಿ, ಏನೇನೋ ಸುದ್ದಿ ಬರ್ತಿದೆ ನಿಮ್ಮ ಔತಣಕೂಟದ ಬಗ್ಗೆ'.

'ಏನೇನು ಬರ್ತಿದೆ?'

'ಪಾರ್ಟಿಗೆ ಎಲ್ಲರನ್ನೂ ಕರೀಬೇಕು, ಆದರೆ, ಕೆಲವೇ ಕೆಲವರನ್ನ ಮಾತ್ರ ಯಾಕೆ ಕರೀತಿದಾರೆ, ಅದರಲ್ಲೂ ನಿರ್ದಿಷ್ಟ ಸಮುದಾಯದವರಿಗೆ ಮಾತ್ರ ಆಹ್ವಾನ ಏಕೆ ಅಂತೆಲ್ಲ ಕೇಳ್ತಿದ್ದಾರೆ. ಅಲ್ಲದೆ, ಇದೆಲ್ಲ ರಾಜಕಾರಣ ಅಂತ ಹೇಳ್ತಿದ್ದಾರೆ ಸರ್'.

'ರಾಜಕಾರಣಿಗಳೆಲ್ಲ ಒಂದ್ಕಡೆ ಸೇರಿದ ಮೇಲೆ ರಾಜಕಾರಣದ ಬಗ್ಗೆ ಮಾತನಾಡದೇ ಇರೋಕಾಗುತ್ತಾ?' ಎಮ್ಮೆಲ್ಲೆಗೆ ಮತ್ತೆ ಸಿಟ್ಟು ಬಂತು.

'ಆದರೂ ಒಬ್ಬರಾದ ಮೇಲೆ ಒಬ್ಬೊಬ್ಬ ನಾಯಕರು ಔತಣಕೂಟ ಮಾಡ್ತಿರೋದೇಕೆ ಅಂತ'.

'ಇದೊಳ್ಳೆ ಆಯ್ತಲ್ಲ, ರಾಜಕಾರಣಿಗಳಾದರೆ ನಾವು ಊಟ–ತಿಂಡಿಗೂ ಜೊತೆಗೆ ಸೇರಬಾರದಾ?'

'ಸೇರಬಹುದು ಸರ್, ಆದರೆ ಸೇರುತ್ತಿರುವ ಟೈಮ್ ಬಗ್ಗೆ ಮಾಧ್ಯಮದವರ ತಕರಾರು'.

'ಮಾಧ್ಯಮದವರ ತಕರಾರು ತಾನೆ, ಜನ ಏನೂ ಕೇಳ್ತಿಲ್ಲವಲ್ಲ'.

'ಆದರೂ, ಇತರ ಎಮ್ಮೆಲ್ಲೆಗಳಲ್ಲಿ ಅಸಮಾಧಾನ ಇದೆ ಸರ್'.

'ಯಾಕ್ ಅಸಮಾಧಾನ?'

'ಬ್ರೇಕ್‌ಫಾಸ್ಟ್, ಲಂಚ್, ಡಿನ್ನರ್‌ಗೆ ಕರೆಯುತ್ತಿರುವ ನಾಯಕರು ಆಯ್ದ ಎಮ್ಮೆಲ್ಲೆಗಳಿಗೆ ಮಾತ್ರ ಆಹ್ವಾನ ನೀಡ್ತಿದ್ದಾರೆ ಅನ್ನೋದು' ನಕ್ಕ ಮುದ್ದಣ್ಣ.

'ಎಲ್ಲರೂ, ಎಲ್ಲರನ್ನ ಕರೆದರೆ ಹೈಕಮಾಂಡ್‌ಗೆ ಹೇಗೆ ಗೊತ್ತಾಗಬೇಕು ಯಾರ ಪವರ್, ಎಷ್ಟು ಅಂತ' ನಿಗೂಢವಾಗಿ ನಕ್ಕ ಎಮ್ಮೆಲ್ಲೆ ವಿಜಿ.

ಸಂಗತ

ಹೈಬ್ರಿಡ್ ಜಪಕ್ಕೆ ಜವಾರಿ ಸವಾಲು

ಬೀಜ ಬ್ಯಾಂಕ್ ಸ್ಥಾಪನೆಯಂಥ ವಿಶಿಷ್ಟ ಪ್ರಯೋಗಗಳ ಮೂಲಕ ದೇಸಿ ತಳಿಗಳಿಗೆ ವ್ಯವಸ್ಥಿತ ಚೌಕಟ್ಟು ರೂಪಿಸಿ ರೈತರಲ್ಲಿ ಆತ್ಮವಿಶ್ವಾಸ ಮೂಡಿಸಬೇಕಾಗಿದೆ

• ಆನಂದತೀರ್ಥ ಪ್ಯಾಟಿ

ಹವಾಮಾನ ಬದಲಾವಣೆ ತಂದೊಡ್ಡಿರುವ ಬಿಕ್ಕಟ್ಟು ಎಲ್ಲ ಕ್ಷೇತ್ರಗಳಂತೆ ನಿಧಾನವಾಗಿ ಕೃಷಿ ವಲಯವನ್ನೂ ಆವರಿಸಿಕೊಳ್ಳುತ್ತಿದೆ. ವಾಸ್ತವವಾಗಿ ಈ ಪಿಡುಗಿನಿಂದ ಹೆಚ್ಚು ಹಾನಿ ಅನುಭವಿಸುತ್ತಿರುವವರು ರೈತರೇ. ಬಿರುಬೇಸಿಗೆಯಲ್ಲೂ ಧಾರಾಕಾರ ಮಳೆ, ಮಳೆಗಾಲದಲ್ಲಿ ಬಿರುಬಿಸಿಲು ಕೃಷಿಕರನ್ನು ಹೈರಾಣ ಮಾಡಿವೆ. ಕುತೂಹಲದ ವಿಷಯವೆಂದರೆ, ಪ್ರಾಕೃತಿಕ ಏರುಪೇರಿನ ಹಂಗಾಮುಗಳಲ್ಲಿ ತಕ್ಕಮಟ್ಟಿಗೆ ಇಳುವರಿ ಕೊಡುತ್ತಿರುವುದು ದೇಸಿ ತಳಿಗಳೇ ಆಗಿವೆ!

ಅಧಿಕ ಇಳುವರಿಯ ತಳಿಗಳು ಕೃಷಿ ಕ್ಷೇತ್ರಕ್ಕೆ ಕಾಲಿಟ್ಟ ಕೆಲವೇ ದಶಕಗಳಲ್ಲಿ ಸಾಂಪ್ರದಾಯಿಕ ತಳಿಗಳು ಹೊಲ-ಗದ್ದೆಗಳಿಂದ ಕಾಣೆಯಾದವು. ಸಾವಿರಾರು ವರ್ಷಗಳಿಂದ ಆಯಾ ವಾತಾವರಣಕ್ಕೆ ಹೊಂದಿಕೊಂಡು ಬೆಳೆಯುತ್ತಿದ್ದ ಜವಾರಿ ತಳಿಗಳು, ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಟ ನಡೆಸಬೇಕಾಯಿತು. ಹೆಚ್ಚು ಇಳುವರಿ ಕೊಡುವ ತಳಿಗಳನ್ನು ರೈತರು ಹೆಚ್ಚೆಚ್ಚು ಅವಲಂಬಿಸಿದ್ದರಿಂದ, ಜವಾರಿ ತಳಿಗಳು ಆಸಕ್ತರ ಹೊಲದಲ್ಲಷ್ಟೇ 'ಜೀವ' ಉಳಿಸಿಕೊಂಡವು.

ಇಂಥ ಸಾಂಪ್ರದಾಯಿಕ ತಳಿಗಳ ಬಿತ್ತನೆ ಬೀಜಗಳನ್ನು ಉಳಿಸಿ, ಬೆಳೆಸುತ್ತಿರುವುದೇ ನಾಡಿನಾದ್ಯಂತ ಅಲ್ಲಲ್ಲಿ ಚದುರಿದಂತೆ ಇರುವ ಸಾವಯವ ಕೃಷಿಕರು. ತಳಿ ಸಂರಕ್ಷಣೆಯನ್ನು ಜತನದಿಂದ ನಿರ್ವಹಿಸುತ್ತ, ಒಂದೊಂದು ಬೆಳೆಯಲ್ಲೂ ಹತ್ತಾರು ತಳಿಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ರವಾನಿಸುತ್ತಿದ್ದಾರೆ. ಇಂಥವರ ಜವಾರಿ ಪ್ರೀತಿಯಿಂದಾಗಿಯೇ ಒಂದೊಂದು ಬೆಳೆಯಲ್ಲೂ ಹತ್ತಾರು, ನೂರಾರು ತಳಿಗಳು ಈವರೆಗೆ ಉಳಿದಿವೆ. ಪ್ರಾದೇಶಿಕ ಮಟ್ಟದಲ್ಲಿ ಆಸಕ್ತ ರೈತರಿಗೆ ದೇಸಿ ಬೀಜಗಳನ್ನು ಒದಗಿಸಿ, ತಳಿ ಸಂರಕ್ಷಣೆ ಮಾಡುವ ಕೆಲಸವನ್ನು ಸಮುದಾಯ ಬೀಜ ಬ್ಯಾಂಕುಗಳು ನಿರ್ವಹಿಸುತ್ತಿವೆ. ಅದರಲ್ಲೂ ಮಹಿಳಾ ಸಂಘಗಳ ಪಾತ್ರ ಇಲ್ಲಿ ಗಮನಾರ್ಹ. ತಳಿ ಆಯ್ಕೆ, ಬೀಜೋತ್ಪಾದನೆ, ಶುದ್ಧತೆ, ಪ್ಯಾಕಿಂಗ್ ಹಾಗೂ ವಿತರಣೆಯನ್ನು ಮಹಿಳಾ ಸಂಘಗಳು ಯಶಸ್ವಿಯಾಗಿ ಮಾಡುತ್ತಿವೆ.

ಈವರೆಗೆ ಹೈಬ್ರಿಡ್ ತಳಿಗಳ 'ಜಪ' ಮಾಡುತ್ತಿದ್ದ ಆಧುನಿಕ ಕೃಷಿ ವಿಜ್ಞಾನದ ಗಮನ ದೇಸಿ ತಳಿಗಳತ್ತ ಹರಿಯುತ್ತಿದೆ. ಸಾಂಪ್ರದಾಯಿಕ ತಳಿಗಳ ತಾಕತ್ತು ಗಮನಿಸಿದರೆ, ಅವುಗಳನ್ನು ರೈತ ಸಮುದಾಯ ಹೊಗಳುವುದರಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ. ಕೃಷಿ ಸಂಘಟನೆಗಳ ಒತ್ತಾಸೆ, ಸಾವಯವ ಕೃಷಿಕರ ಮನವಿಯ ಪರಿಣಾಮವಾಗಿ, ಕರ್ನಾಟಕ ಸರ್ಕಾರವು ಹೋದ ವರ್ಷ ಸಮುದಾಯ ಬೀಜ ಬ್ಯಾಂಕ್ ಸ್ಥಾಪನೆಗೆ ₹ 5 ಕೋಟಿಯನ್ನು ಬಜೆಟ್‌ನಲ್ಲಿ ಮೀಸಲಿಟ್ಟಿರುವುದು ಶ್ಲಾಘನೀಯ.

ಸರ್ಕಾರದ ಮಟ್ಟದಲ್ಲಿ ಯೋಜನೆಯೊಂದಕ್ಕೆ ಹಣ ಕಾಯ್ದಿಡಲಾಗಿದೆ ಎಂದರೆ, ಅದನ್ನು ವೆಚ್ಚ ಮಾಡಲು ಹತ್ತಾರು ದಾರಿಗಳು ತನ್ನಿಂತಾನೇ ತೆರೆದುಕೊಳ್ಳುತ್ತವೆ. ಆ ಕಾರಣದಿಂದ ಸಮುದಾಯ ಬೀಜ ಬ್ಯಾಂಕಿಗೆ ಮೀಸಲಿಟ್ಟ ₹ 5 ಕೋಟಿ ಹೇಗೆಲ್ಲ 'ಖರ್ಚಾಗುತ್ತದೆ' ಎಂಬುದು ಮುಖ್ಯವಾಗುತ್ತದೆ. ಎರಡು ವರ್ಷಗಳ ಹಿಂದೆ ನೈಸರ್ಗಿಕ ಕೃಷಿಗೆ ಮೀಸಲಿಟ್ಟಿದ್ದ ಮೊತ್ತವನ್ನು ಹೇಗೆ ವೆಚ್ಚ ಮಾಡಲಾಯಿತು ಎಂಬುದನ್ನೊಮ್ಮೆ ಪರಿಶೀಲಿಸಬೇಕು.

ಈವರೆಗೆ ತಳಿ ಸಂರಕ್ಷಣೆಯಲ್ಲಿ ಶ್ರಮಿಸಿದ ಬೀಜಮಾತೆಯರು, ಮಹಿಳಾ ಸಂಘಗಳು ಹಾಗೂ ಸಾವಯವ ಕೃಷಿಕರನ್ನು ಗುರುತಿಸಿ, ಈ ಯೋಜನೆಯಲ್ಲಿ ಒಳಗೊಳ್ಳುವಂತೆ ಮಾಡಬೇಕು. ದೇಸಿ ಬೀಜಗಳನ್ನು ವಾಣಿಜ್ಯ ಮಟ್ಟದಲ್ಲಿ ರೈತರಿಗೆ ಉತ್ಪಾದಿಸಿ ಕೊಡುತ್ತಿರುವ 'ರೈತ ಉತ್ಪಾದಕ ಕಂಪನಿ'ಗಳೂ ಈ ಯೋಜನೆಯಲ್ಲಿ ಪಾಲುದಾರಿಕೆ ಹೊಂದಬೇಕು. ಹೈಬ್ರಿಡ್ ತಳಿಗಷ್ಟೇ ಆದ್ಯತೆ ಕೊಡುತ್ತಾ, ರೈತರಿಗೆ ಅವುಗಳನ್ನೇ ಶಿಫಾರಸು ಮಾಡುವ ಕೃಷಿ ವಿಜ್ಞಾನ ಕೇಂದ್ರಗಳೂ ಕೃಷಿ ವಿಶ್ವವಿದ್ಯಾಲಯಗಳೂ ಬಹಳಷ್ಟಿವೆ. ಅದರ ಮಧ್ಯೆಯೇ, ದೇಸಿ ಪ್ರೀತಿಯ ಒಂದಷ್ಟು ಕೃಷಿ ವಿಜ್ಞಾನಿಗಳು ಸಾಂಪ್ರದಾಯಿಕ ತಳಿ ಗುಣಲಕ್ಷಣ ದಾಖಲಿಸುತ್ತ, ತಮ್ಮ ಸೀಮಿತ ಮಟ್ಟದಲ್ಲಿ ದೇಸಿ ಬೀಜೋತ್ಪಾದನೆ ಮಾಡಿ ಆಸಕ್ತ ರೈತರಿಗೆ ವಿತರಿಸುತ್ತಿದ್ದಾರೆ. ಅಂಥ ವಿಜ್ಞಾನಿಗಳನ್ನು ಗುರುತಿಸಿ, ಅವರಿಗೆ ತಳಿಶುದ್ಧತೆ ಕಾಯ್ದುಕೊಳ್ಳುವುದು ಮತ್ತು ಬೀಜೋತ್ಪಾದನೆಯ ಉಸ್ತುವಾರಿ ವಹಿಸಬೇಕು. ಉಳಿದಂತೆ, ಪ್ರಾದೇಶಿಕವಾರು ಬೆಳೆಗಳನ್ನು ನಿಗದಿ ಮಾಡಿ, ಅವುಗಳ ತಳಿ ಸಂರಕ್ಷಣೆ ಹಾಗೂ ಬೀಜೋತ್ಪಾದನೆಯ ಹೊಣೆಯನ್ನು ಬೀಜ ಸಂರಕ್ಷಕರಿಗೆ ವಹಿಸಬೇಕು. ಕೃಷಿ ವಿಶ್ವವಿದ್ಯಾಲಯ ಮಟ್ಟದಲ್ಲಿ ದೇಸಿ ತಳಿಗಳ ವೈಶಿಷ್ಟ್ಯ ದಾಖಲಿಸುವ ಕೆಲಸ ನಡೆಯಬೇಕು.



ಒಡಿಶಾ, ಜಾರ್ಖಂಡ್, ಆಂಧ್ರಪ್ರದೇಶ ಸರ್ಕಾರಗಳು ವೈವಿಧ್ಯಮಯ ಯೋಜನೆಗಳ ಮೂಲಕ ನೈಸರ್ಗಿಕ ಕೃಷಿ ಹಾಗೂ ದೇಸಿ ಬೀಜ ಸಂರಕ್ಷಣೆಗೆ ಪ್ರೋತ್ಸಾಹ ಕೊಡುವಲ್ಲಿ ಮುಂಚೂಣಿಯಲ್ಲಿ ಕಾಣುತ್ತಿವೆ. ಉತ್ತಮ ದೇಸಿ ತಳಿಗಳ ಬಿಡುಗಡೆ, ಸಿರಿಧಾನ್ಯ ಕೃಷಿ, ಗೆಡ್ಡೆ-ಗೆಣಸು, ಮರೆತ ಆಹಾರ ಪದಾರ್ಥಗಳನ್ನು ಮುಂಚೂಣಿಗೆ ತರುವ ಪ್ರಯತ್ನಕ್ಕಾಗಿ ಬಜೆಟ್‌ನಲ್ಲಿ ಹೆಚ್ಚು ಹಣವನ್ನು ಮೀಸಲಿಟ್ಟಿವೆ. ಆದರೆ ಇಂಥ ಗಟ್ಟಿ ಪ್ರಯತ್ನಗಳಿಲ್ಲದೇ ಕರ್ನಾಟಕದಲ್ಲಿ ಬರೀ ಅಂತರರಾಷ್ಟ್ರೀಯ ವಹಿವಾಟು ಮೇಳಗಳಷ್ಟೇ ನಡೆಯುತ್ತಿವೆ.

ಪ್ರಾಕೃತಿಕ ವಿಕೋಪದಿಂದ ಬಸವಳಿದ ರೈತ ಸಮುದಾಯಕ್ಕೆ ಅಲ್ಪವಾದರೂ ಪರಿಹಾರ ದೇಸಿ ತಳಿಗಳಲ್ಲಿದೆ. ಆದರೆ ಅದಕ್ಕೊಂದು ವ್ಯವಸ್ಥಿತ ಚೌಕಟ್ಟು ಬೇಕಷ್ಟೇ. ಹಾಗೆ ನೋಡಿದರೆ, ಸಾವಯವ ಕೃಷಿ ನೀತಿಯನ್ನು ದೇಶದಲ್ಲೇ ಮೊದಲ ಬಾರಿಗೆ ಪ್ರಕಟಿಸಲಾದ ಕರ್ನಾಟಕಕ್ಕೆ, ಬೀಜ ಬ್ಯಾಂಕ್ ಸ್ಥಾಪನೆಯಂಥ ವಿಶಿಷ್ಟ ಪ್ರಯೋಗಗಳು ಮತ್ತಷ್ಟು ಆತ್ಮವಿಶ್ವಾಸ ಕೊಡಬಲ್ಲವು.

ವಾಚಕರ ವಾಣಿ

ನೋಟ್‌ಪುಸ್ತಕದಲ್ಲಿ ಇರಲಿ ಕನ್ನಡದ ಹಿತನುಡಿ

ನೋಟ್ ಪುಸ್ತಕವೊಂದರ ರಕ್ಷಾಪುಟದಲ್ಲಿ 'ಮ್ಯೂಸಿಕ್ ಈಸ್ ಯೂನಿವರ್ಸಲ್ ಲ್ಯಾಂಗ್ವೇಜ್ ಆಫ್ ಮ್ಯಾನ್‌ಕೈಂಡ್' ಎಂದು ಗಿಟಾರ್ ಚಿತ್ರಸಹಿತ ಇಂಗ್ಲಿಷ್ ಭಾಷೆಯಲ್ಲಿ ಮುದ್ರಿಸಲಾಗಿತ್ತು. ಇದರ ಜೊತೆಗೆ ಕನ್ನಡದ ನುಡಿಗಟ್ಟುಗಳು, ನಾಣ್ಣುಡಿಗಳು, ಗಾದೆಗಳು, ಸುಭಾಷಿತಗಳೂ ಮುದ್ರಣಗೊಂಡರೆ ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುತ್ತವೆ. ಚಿಕ್ಕಂದಿನ ವಿದ್ಯೆ ಚೂಡಾರತ್ನ ಎಂಬಂತೆ, ಬಾಲ್ಯದಲ್ಲಿ ಕಲಿತದ್ದು ಕೊನೆತನಕ ಪರಿಣಾಮಕಾರಿಯಾಗಿ ಇರುತ್ತದೆ. ಹಾಗಾಗಿ, ನೋಟ್‌ಬುಕ್ ತಯಾರಕರು ಇತ್ತ ಗಮನಹರಿಸಲಿ. ಕನ್ನಡ ನುಡಿಗೆ ತಮ್ಮ ಕಾಣಿಕೆ ನೀಡಲಿ.

ಮಲ್ಲಿಕಾರ್ಜುನ, ಸುರಧೇನುಪುರ

ಕುಲಪತಿ ಹುದ್ದೆ: ಅನನುಭವಿಗಳ ನೇಮಕ ತರವಲ್ಲ

ಉದ್ಯಮ ರಂಗದ ಪರಿಣತರು, ಸಾರ್ವಜನಿಕ ಆಡಳಿತ, ನೀತಿ ನಿರೂಪಣೆಯ ದಿಸೆಯಲ್ಲಿ ಕೆಲಸ ಮಾಡಿದವರು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಹಿರಿಯ ಅಧಿಕಾರಿಗಳಿಗೆ ವಿಶ್ವವಿದ್ಯಾಲಯಗಳ ಕುಲಪತಿಗಳಾಗುವ ಅರ್ಹತೆಯನ್ನು ಕಲ್ಪಿಸಲು ಯುಜಿಸಿ ಮುಂದಾಗಿರುವುದಾಗಿ ವರದಿಯಾಗಿದೆ (ಪ್ರ.ವಾ., ಜ. 8). ಈಗಿರುವ ನಿಯಮಗಳನ್ನು ಬದಲಿಸಿ, ಶೈಕ್ಷಣಿಕ ಸಂಸ್ಥೆ ಅಥವಾ ಸಂಶೋಧನಾ ಸಂಸ್ಥೆಗಳಲ್ಲಿನ ಅನುಭವವೇ ಇಲ್ಲದ ಉದ್ಯಮಿಗಳನ್ನು ಕುಲಪತಿಗಳನ್ನಾಗಿ ನೇಮಿಸುವುದು ಎಷ್ಟು ಸರಿ? ವೃತ್ತಿಪರ ತಜ್ಞರಿಗೂ ಶಿಕ್ಷಣ ತಜ್ಞರಿಗೂ ವ್ಯತ್ಯಾಸವಿಲ್ಲವೇ? ಹೀಗೆ ಕುಲಪತಿಗಳಾಗಲು ಯುಜಿಸಿಯಿಂದ ಅವಕಾಶ ಪಡೆಯುವವರಲ್ಲಿ ಹೆಚ್ಚಿನವರು 'ರಾಜಕಾರಣಿ'ಗಳೇ ಆಗಿರುತ್ತಾರೆ. ಅಂತಹವರು ವಿಶ್ವವಿದ್ಯಾಲಯಗಳಲ್ಲಿ ಅಧಿಕಾರ ಹಿಡಿದರೆ, ಶಿಕ್ಷಣ ಕ್ಷೇತ್ರದಲ್ಲಿ ಅದೆಷ್ಟರ ಮಟ್ಟಿಗೆ ಸುಧಾರಣೆ ಬರಬಹುದು?

ಈ ವಿಷಯ ಬಹಳ ಗಂಭೀರವಾದದ್ದು. ಸರ್ಕಾರಿ ಸ್ವಾಮ್ಯದ ಅನೇಕ ಸಂಸ್ಥೆಗಳು ಈಗಾಗಲೇ ಖಾಸಗಿ ವಲಯದ ತೆಕ್ಕೆಗೆ ಬಂದಿವೆ. ಜೊತೆಗೆ ದೇಶದಲ್ಲಿ ಬಹಳಷ್ಟು ಖಾಸಗಿ ವಿಶ್ವವಿದ್ಯಾಲಯಗಳೂ ಹುಟ್ಟಿಕೊಂಡಿವೆ. ಸೇವೆಯಾಗಬೇಕಾಗಿದ್ದ ಶಿಕ್ಷಣ ಈಗ ವ್ಯಾಪಾರೀಕರಣ ಆಗಿರುವುದು ಗುಟ್ಟಾಗಿ ಉಳಿದಿಲ್ಲ. ಇದು ಹೀಗೇ ಮುಂದುವರಿದರೆ, ದೀನದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ಬಡಬಗ್ಗರಿಗೆ ಭವಿಷ್ಯದಲ್ಲಿ ಉನ್ನತ ಮಟ್ಟದ ಶಿಕ್ಷಣ ಕನಸಾಗಿಯೇ ಉಳಿಯಬಹುದು.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಲಂಚು- ಡಿನ್ನರು

ರಾಜ್ಯ ನಾಯಕರಲ್ಲಿ
ನಡೆಯುತ್ತಲೇ ಇದೆ
ಆಗಾಗ ಲಂಚು, ಡಿನ್ನರು,
ಮುಗಿದ ಮೇಲೆ ಹೇಳುತ್ತಾರೆ
ನಾವೆಲ್ಲ ಒಂದೇ
ನಮ್ಮಲ್ಲಿ ಇಲ್ಲ ಭಿನ್ನರು!

ಮಹಾಂತೇಶ ಮಾಗನೂರ
ಬೆಂಗಳೂರು

ಔತಣಕೂಟ ಹಾಗೇ ಸುಮ್ಮನೆ!

ಕೆಲ ಸಚಿವರು ತಮ್ಮ ತಮ್ಮ ಸಮುದಾಯದ ಸಚಿವರು ಮತ್ತು ಶಾಸಕರಿಗಾಗಿಯೇ ಪ್ರತ್ಯೇಕ ಔತಣಕೂಟ ಏರ್ಪಡಿಸಿದರೂ ನಿಗದಿಯಾಗಿದ್ದ ಔತಣಕೂಟವನ್ನು ವರಿಷ್ಠರ ಆಣತಿಯಂತೆ ಸಚಿವರೊಬ್ಬರು ರದ್ದುಗೊಳಿಸಿದರೂ 'ಅವ್ಯಾವಕ್ಕೂ ವಿಶೇಷ ಅರ್ಥ ಕಲ್ಪಿಸಬೇಕಾಗಿಲ್ಲ, ಇಂತಹ ಔತಣಕೂಟಗಳ ಆಯೋಜನೆಯ ಹಿಂದೆ ಯಾವುದೇ ರಾಜಕೀಯ ದುರುದ್ದೇಶವಿಲ್ಲ' ಎಂದು ಮುಖಂಡರು ಹೇಳುತ್ತಾರೆ. ಅವರ ಈ ಮಾತುಗಳಲ್ಲಿ ಸತ್ಯವಲ್ಲದೆ ಬೇರೇನೂ ಇಲ್ಲವೆಂದೂ ಅವು ಅವರ ಹೃದಯಾಂತರಾಳದಿಂದಲೇ ಬಂದವೆಂದೂ ತಾವೇ ಅವರನ್ನು 'ಪ್ರಜಾಸತ್ತಾತ್ಮಕವಾಗಿ' ತಮ್ಮ ಪ್ರತಿನಿಧಿಯಾಗಿ ಚುನಾಯಿಸಿದ ಕಾರಣಕ್ಕೆ ಜನ ನಂಬಲೇಬೇಕು! ಔತಣಕೂಟಗಳು ಹಾಗೇ ಸುಮ್ಮನೆ!

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ನಗದುರಹಿತ ಚಿಕಿತ್ಸೆ: ಉತ್ತಮ ನಡೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ನೌಕರರಿಗೆ ನಗದುರಹಿತ ವೈದ್ಯಕೀಯ ಚಿಕಿತ್ಸೆ ನೀಡುವ ಆರೋಗ್ಯ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚೆಗೆ ಚಾಲನೆ ನೀಡಿರುವುದು ಒಳ್ಳೆಯ ಬೆಳವಣಿಗೆ. ಈ ಮೂಲಕ ಸಾರಿಗೆ ನೌಕರರ ಹಲವು ವರ್ಷಗಳ ಬೇಡಿಕೆ ಈಡೇರಿದಂತಾಗಿದೆ. 'ಕೆಎಸ್‌ಆರ್‌ಟಿಸಿ ಆರೋಗ್ಯ' ಎಂಬ ಈ ಯೋಜನೆಯಡಿ ಸಾರಿಗೆ ನಿಗಮದ ಎಲ್ಲಾ ನೌಕರರು ಮತ್ತು ಅವರ ಕುಟುಂಬಸ್ಥರಿಗೆ ಖರ್ಚಿನ ಮಿತಿಯಿಲ್ಲದ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಸಿಗಲಿರುವುದು ನೌಕರರಿಗೆ ಅತ್ಯಂತ ನೆಮ್ಮದಿ ಹಾಗೂ ಖುಷಿ ಕೊಡುವ ಸಂಗತಿಯಾಗಿದೆ.

ಇಂತಹದೊಂದು ಸೌಲಭ್ಯಕ್ಕೆ ರಾಜ್ಯ ಸರ್ಕಾರಿ ನೌಕರರೂ ಬಹುದಿನಗಳಿಂದ ಸರ್ಕಾರವನ್ನು ಒತ್ತಾಯಿಸುತ್ತಾ ಬಂದಿದ್ದಾರೆ. ಈ ಬೇಡಿಕೆ ಬಗ್ಗೆ ಸರ್ಕಾರ ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ತೋರಬಾರದು. ನಗದುರಹಿತ ವೈದ್ಯಕೀಯ ಚಿಕಿತ್ಸೆಯನ್ನು ಶೀಘ್ರವಾಗಿ ರಾಜ್ಯ ಸರ್ಕಾರಿ ನೌಕರರು ಹಾಗೂ ಕುಟುಂಬದವರಿಗೂ ವಿಸ್ತರಿಸಿ ನೌಕರರ ಹಿತ ಕಾಪಾಡುವ ಕೆಲಸವನ್ನು ಸರ್ಕಾರ ಮಾಡಲಿ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಆಶಾ ಕಾರ್ಯಕರ್ತೆಯರ ಬೇಡಿಕೆಗೆ ಸ್ಪಂದಿಸಿ

ಹಲವು ವರ್ಷಗಳಿಂದ ಆರೋಗ್ಯ ಸೇವೆಯಲ್ಲಿ ತೊಡಗಿಸಿಕೊಂಡಿರುವ ಆಶಾ ಕಾರ್ಯಕರ್ತೆಯರು ರೋಗ ನಿಯಂತ್ರಣದಲ್ಲಿ ವಹಿಸುವ ಪಾತ್ರ ಪ್ರಮುಖವಾದುದು. ಅವರ ಸಹಕಾರವು ಆರೋಗ್ಯ ಇಲಾಖೆಗೆ ನಿರ್ಣಾಯಕವಾಗಿದೆ. ಹತ್ತನೇ ತರಗತಿ ವಿದ್ಯಾರ್ಹತೆ ಮೇಲೆ ಕೆಲಸ ಮಾಡುತ್ತಿರುವ ಆಶಾ ಕಾರ್ಯಕರ್ತೆಯರು ಮೂಲತಃ ಬಡತನದ ಹಿನ್ನೆಲೆಯಿಂದ ಬಂದವರು. ಸರ್ಕಾರಿ ಆಸ್ಪತ್ರೆ ಹಾಗೂ ಜನಸಮುದಾಯದ ನಡುವೆ ಸಂಪರ್ಕ ಸಾಧಿಸಲು ಹಗಲು-ರಾತ್ರಿ ಎನ್ನದೇ ಅವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಹಲವು ವರ್ಷಗಳಿಂದ ಅವರು ಕನಿಷ್ಠ ಗೌರವಧನ ಪಡೆದು ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಇದು, ಅವರ ಕುಟುಂಬ ನಿರ್ವಹಣೆ, ಹೆಚ್ಚು ಓಡಾಟದ ಅಗತ್ಯವಿರುವ ಕರ್ತವ್ಯ ನಿರ್ವಹಣೆಗೆ ಖಂಡಿತ ಸಾಲದು. ಹೀಗಾಗಿ, ಸರ್ಕಾರವು ವಸ್ತುಸ್ಥಿತಿ ಅರಿತು, ಗೌರವಧನ ಹೆಚ್ಚಳ ಸೇರಿದಂತೆ ಆಶಾ ಕಾರ್ಯಕರ್ತೆಯರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು.

ಶ್ರೀಧರ್ ಡಿ. ರಾಮಚಂದ್ರಪ್ಪ, ತುರುವನೂರು, ಚಿತ್ರದುರ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ವಿಶ್ವವಿದ್ಯಾಲಯಗಳು, ಕಾಲೇಜುಗಳು ಸೇರಿದಂತೆ ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ಭಾರಿ ಬದಲಾವಣೆ ತರಲು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಮುಂದಾಗಿದೆ. ಅಧ್ಯಾಪಕರು, ಗ್ರಂಥಪಾಲಕರು ಮುಂತಾದ ಸಿಬ್ಬಂದಿಯ ನೇಮಕಾತಿ ಪ್ರಕ್ರಿಯೆಯಲ್ಲಿ ಬದಲಾವಣೆ ಮಾಡುವ ಹೊಸ ಕರಡು ನಿಯಮಾವಳಿಯನ್ನು ರೂಪಿಸಿದೆ. ಮುಖ್ಯವಾಗಿ, ವಿವಿ ಕುಲಪತಿ ಆಯ್ಕೆಯ ವಿಚಾರದಲ್ಲಿ ರಾಜ್ಯ ಸರ್ಕಾರಗಳ ಅಧಿಕಾರವನ್ನು ಮೊಟಕುಗೊಳಿಸಿ, ರಾಜ್ಯಪಾಲರಿಗೆ ಹೆಚ್ಚು ಅಧಿಕಾರ ನೀಡುವ ಬಗ್ಗೆ ಪ್ರಸ್ತಾವ ಮಾಡಲಾಗಿದೆ. ಯುಜಿಸಿಯ ಕರಡು ನಿಯಮಾವಳಿಗೆ ಕರ್ನಾಟಕ, ತಮಿಳುನಾಡು, ಕೇರಳ ರಾಜ್ಯಗಳು ಮತ್ತು ಶೈಕ್ಷಣಿಕ ವಲಯದಲ್ಲೂ ವಿರೋಧ ವ್ಯಕ್ತವಾಗಿದೆ

ವಿಶ್ವವಿದ್ಯಾಲಯ ನೇಮಕಾತಿ: ರಾಜ್ಯ ಸರ್ಕಾರಗಳ ಅಧಿಕಾರ ಮೊಟಕು?

ಯುಜಿಸಿ ನಿಯಮಗಳ ಕರಡು ಪ್ರಕಟ

ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಉನ್ನತ ಶಿಕ್ಷಣದಲ್ಲಿ ಭಾರಿ ಬದಲಾವಣೆಗಳನ್ನು ತರುವ ದಿಸೆಯಲ್ಲಿ ಹೊಸ ನಿಯಮಾವಳಿ ರೂಪಿಸಿ, ಕರಡು ಪ್ರಕಟಿಸಿದೆ. ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಬೋಧಕರು, ಗ್ರಂಥಪಾಲಕರು, ದೈಹಿಕ ಶಿಕ್ಷಣ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳುವ ಮತ್ತು ಬಡ್ತಿ ನೀಡುವ ಸಂಬಂಧ ಜಾರಿಯಲ್ಲಿದ್ದ 2018ರ ನಿಯಮಗಳನ್ನು ರದ್ದು ಪಡಿಸಿ, ಯುಜಿಸಿ ಕಾಯ್ದೆ- 1956ರ ಅನ್ವಯ ಹೊಸ ನಿಯಮ ರೂಪಿಸಲು ಪ್ರಸ್ತಾವಿಸಲಾಗಿದೆ.

ಯುಜಿಸಿ ಮಾನ್ಯತೆ ಇರುವ ಪ್ರತಿ ವಿಶ್ವವಿದ್ಯಾಲಯ, ಸಂಸ್ಥೆ/ಕಾಲೇಜು, ಸಂಯೋಜಿತ ಕಾಲೇಜು, ಡೀಮ್ಡ್ ವಿಶ್ವವಿದ್ಯಾಲಯಗಳಿಗೂ ಈ ನಿಯಮಾವಳಿ ಅನ್ವಯಿಸಲು ಉದ್ದೇಶಿಸಲಾಗಿದೆ. ಹೊಸ ನಿಯಮಾವಳಿ ಜಾರಿಗೆ ಬಂದರೆ ಎಂಜಿನಿಯರಿಂಗ್, ತಾಂತ್ರಿಕ ಶಿಕ್ಷಣ, ಆಡಳಿತ ನಿರ್ವಹಣೆಯ (ಬಿಬಿಎ, ಎಂಬಿಎ ಇತ್ಯಾದಿ) ವಿವಿ/ಕಾಲೇಜುಗಳಿಗೂ ಅನ್ವಯವಾಗಲಿದೆ.

ಕುಲಪತಿಗಳ ನೇಮಕಾತಿ ನಿಯಮಗಳಲ್ಲಿ ಭಾರಿ ಬದಲಾವಣೆಗಳನ್ನು ತರಲು ಯುಜಿಸಿ ಉದ್ದೇಶಿಸಿದೆ. ಬೋಧಕರ ನೇಮಕಾತಿಗೆ ಸಂಬಂಧಿಸಿದ ಕೆಲವು ನಿಯಮಗಳನ್ನು ಕರಡುವಿನಲ್ಲಿ ಸಡಿಲಗೊಳಿಸಲಾಗಿದ್ದರೆ, ಬಡ್ತಿಗೆ ಸಂಬಂಧಿಸಿದ ಕೆಲವು ನಿಯಮಗಳನ್ನು ಬಿಗಿಗೊಳಿಸಲಾಗಿದೆ. 30 ದಿನಗಳ ಒಳಗೆ (ಫೆ.5) ಕರಡು ನಿಯಮಾವಳಿ ಬಗ್ಗೆ ಅಭಿಪ್ರಾಯ ತಿಳಿಸುವಂತೆ ಯುಜಿಸಿ ತಿಳಿಸಿದೆ. ಹೊಸ ನಿಯಮಗಳು ಜಾರಿಗೆ ಬಂದ ನಂತರ ಆರು ತಿಂಗಳ ಒಳಗಾಗಿ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ಅವುಗಳಿಗೆ ತಕ್ಕಂತೆ ತಮ್ಮ ಕಾರ್ಯನಿರ್ವಹಣೆಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು ಎಂದೂ ಯುಜಿಸಿ ಹೇಳಿದೆ.

ಕುಲಪತಿಗೆ ಅಧಿಕಾರ

ಕರಡು ನಿಯಮಾವಳಿಯು ವಿಶ್ವವಿದ್ಯಾಲಯಗಳ ಬೋಧನಾ ಸಿಬ್ಬಂದಿ ನೇಮಕಕ್ಕೆ ಸಂಬಂಧಿಸಿದಂತೆಯೂ ಕುಲಪತಿಗೆ ಹೆಚ್ಚು ಅಧಿಕಾರ ನೀಡುತ್ತದೆ. ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರ ನೇಮಕಾತಿ ಮಾಡುವ ಸಮಿತಿಗೆ ಕುಲಪತಿಯೇ ಅಧ್ಯಕ್ಷರಾಗಿರುತ್ತಾರೆ. ಅವರ ಜತೆಗೆ ಈ ಪ್ರಕ್ರಿಯೆ ನಡೆಸಲು ಪ್ರಾಧ್ಯಾಪಕರ ಶ್ರೇಣಿಗೆ ಕಡಿಮೆ ಇಲ್ಲದಂಥ ಅಧ್ಯಾಪಕರನ್ನು ಕುಲಪತಿ/ಕುಲಾಧಿಪತಿ ಆಯ್ಕೆ ಮಾಡುತ್ತಾರೆ. ಮೂವರು ಬಾಹ್ಯ ವಿಷಯ ಪರಿಣತರನ್ನೂ ಕುಲಪತಿಯೇ ನೇಮಿಸುತ್ತಾರೆ.

ರಾಜ್ಯಪಾಲರಿಗೆ ಹೆಚ್ಚು ಅಧಿಕಾರ

ಇದುವರೆಗಿನ ನಿಯಮದಂತೆ, ಯಾವುದೇ ವಿಶ್ವವಿದ್ಯಾಲಯದ ಕುಲಪತಿ ಆಗಬೇಕು ಎಂದರೆ, ಅವರು ಮೊದಲು ಬೋಧಕರಾಗಿರಬೇಕು. ಅದನ್ನು ಕರಡು ನಿಯಮಾವಳಿಯಲ್ಲಿ ಬದಲಿಸಲಾಗಿದೆ. ವಿಶ್ವವಿದ್ಯಾಲಯಗಳ ಬೋಧಕ ಸಿಬ್ಬಂದಿಯ ಜತೆಗೆ ಶೈಕ್ಷಣಿಕ ಕ್ಷೇತ್ರದ ಹೊರಗಿನ ಹಲವು ವಲಯಗಳ ಪರಿಣತರಿಗೂ ಕುಲಪತಿ ಆಗಲು ಅವಕಾಶ ಕಲ್ಪಿಸಲಾಗಿದೆ.

ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ಕನಿಷ್ಠ 10 ವರ್ಷಗಳ ಬೋಧನಾ ಅನುಭವ ಇರುವವರು ಅಥವಾ ಸಂಶೋಧನೆ/ಶೈಕ್ಷಣಿಕ ಆಡಳಿತ ಸಂಸ್ಥೆಯಲ್ಲಿ ಅಥವಾ ಕೈಗಾರಿಕೆ, ಸಾರ್ವಜನಿಕ ಆಡಳಿತ, ಸರ್ಕಾರಿ ಸ್ವಾಮ್ಯದ ಸಂಸ್ಥೆಯಲ್ಲಿ ಗಮನಾರ್ಹ ಸಾಧನೆ ಮಾಡಿದ ಹಿರಿಯ ಶ್ರೇಣಿಯ ಸಿಬ್ಬಂದಿ ಕುಲಪತಿ ಹುದ್ದೆಗೆ ಅರ್ಹರು ಎಂದು ಕರಡು ನಿಯಮಾವಳಿ ಹೇಳುತ್ತದೆ. ಇವರ ಜತೆಗೆ ಶೋಧನಾ (ಆಯ್ಕೆ) ಸಮಿತಿಯು ಪ್ರತಿಭಾ ಶೋಧ ಅಥವಾ ನಾಮನಿರ್ದೇಶನದ ಮೂಲಕವೂ ಅಭ್ಯರ್ಥಿಗಳನ್ನು ಆಯ್ಕೆ ಮಾಡಬಹುದು.



ಕರಡು ನಿಯಮಾವಳಿಯು ಕುಲಪತಿ ನೇಮಕಾತಿಯಲ್ಲಿ ರಾಜ್ಯ ಸರ್ಕಾರಕ್ಕಿಂತಲೂ ರಾಜ್ಯಪಾಲರಿಗೇ ಅಧಿಕಾರ ನೀಡುತ್ತದೆ. ಇದುವರೆಗೆ, ರಾಜ್ಯ ಸರ್ಕಾರಗಳು ಕುಲಪತಿ ಆಯ್ಕೆಗಾಗಿ ಮೂವರಿಂದ ಐವರು ತಜ್ಞರನ್ನೊಳಗೊಂಡ ಶೋಧನಾ ಸಮಿತಿ ನೇಮಿಸುತ್ತಿತ್ತು. ಕರಡು ನಿಯಮಾವಳಿಯಲ್ಲಿ ಅದನ್ನು ಬದಲಿಸಲಾಗಿದ್ದು, ಮೂವರು ತಜ್ಞರ ಶೋಧನಾ ಸಮಿತಿ ನೇಮಿಸುವ ಅಧಿಕಾರವನ್ನು ಕುಲಾಧಿಪತಿಗೆ ನೀಡಲಾಗಿದೆ.

ರಾಜ್ಯಗಳ ಅಧೀನದಲ್ಲಿರುವ ವಿವಿಗಳಿಗೆ ಆಯಾ ರಾಜ್ಯಗಳ ರಾಜ್ಯಪಾಲರೇ ಕುಲಾಧಿಪತಿ ಆಗಿರುತ್ತಾರೆ. ವಿರೋಧ ಪಕ್ಷಗಳು ಆಡಳಿತ ನಡೆಸುತ್ತಿರುವ ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಕೆಲವು ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಗಳು ಮತ್ತು ರಾಜ್ಯಪಾಲರ ನಡುವೆ ಸಂಘರ್ಷ ಉಂಟಾಗಿತ್ತು. ಈಗ ಯುಜಿಸಿಯ ಹೊಸ ನಿಯಮಾವಳಿಯು ರಾಜ್ಯಗಳ ಅಧಿಕಾರವನ್ನೇ ಮೊಟಕುಗೊಳಿಸುವಂತಿದೆ.

ಶೋಧನಾ ಸಮಿತಿಯನ್ನು ನೇಮಕ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಂದ ಕಸಿದು ರಾಜ್ಯಪಾಲರಿಗೆ ವಹಿಸುವ ಕರಡು ನಿಯಮಾವಳಿಗೆ ಕರ್ನಾಟಕ ಸೇರಿದಂತೆ ಕೆಲವು ರಾಜ್ಯಗಳಿಂದ ವಿರೋಧ ವ್ಯಕ್ತವಾಗಿದೆ. ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಈ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿದ್ದು, ಇದು ಒಕ್ಕೂಟ ವ್ಯವಸ್ಥೆಗೆ ವಿರುದ್ಧ ಎಂದಿದ್ದಾರೆ. ಕೇರಳ ಕೂಡ ಈ ಬಗ್ಗೆ ತಕರಾರು ಎತ್ತಿದೆ. ಸಿಪಿಎಂ, ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐ ಕೂಡ ಆಕ್ಷೇಪಿಸಿದೆ.

ಕರ್ನಾಟಕದಲ್ಲಿಯೂ ರಾಜ್ಯಪಾಲರ ಅಧಿಕಾರವನ್ನು ಮೊಟಕುಗೊಳಿಸುವ ಮಸೂದೆ ಇತ್ತೀಚೆಗಷ್ಟೇ ಅಂಗೀಕಾರಗೊಂಡಿದೆ. ಕುಲಾಧಿಪತಿ ಅಧಿಕಾರವನ್ನು ರಾಜ್ಯಪಾಲರಿಂದ ಹಿಂದಕ್ಕೆ ಪಡೆದು ಮುಖ್ಯಮಂತ್ರಿಗೆ ನೀಡುವ ‘ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆ’ಯನ್ನು ಬೆಳಗಾವಿಯಲ್ಲಿ ಇತ್ತೀಚೆಗೆ ನಡೆದ ಅಧಿವೇಶನದಲ್ಲಿ ಕರ್ನಾಟಕ ವಿಧಾನಸಭೆ ಅಂಗೀಕರಿಸಿತ್ತು.

ಯುಜಿಸಿಯ ಕರಡು ನಿಯಮಾವಳಿಯು ಕೇಂದ್ರ ಮತ್ತು ರಾಜ್ಯಗಳ ನಡುವೆ ಮತ್ತೊಂದು ಸುತ್ತಿನ ಸಂಘರ್ಷ ಹುಟ್ಟುಹಾಕುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಎಂಜಿನಿಯರಿಂಗ್ ಪಿಜಿ ಅಭ್ಯರ್ಥಿಗಳೂ ಅರ್ಹರು

ಕರಡು ನಿಯಮಾವಳಿಯ ಪ್ರಕಾರ, ಸ್ನಾತಕೋತ್ತರ ಪದವಿ ಪಡೆಯದಿದ್ದರೂ ಪಿಎಚ್‌.ಡಿ ಮಾಡಿರುವ ಪದವೀಧರ ಸಹಾಯಕ ಪ್ರಾಧ್ಯಾಪಕರಾಗಲು ಅರ್ಹರಾಗಿರುತ್ತಾರೆ. ಎಂಜಿನಿಯರಿಂಗ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳೂ ಅರ್ಜಿ ಸಲ್ಲಿಸಲು ಅರ್ಹರು.

ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಬೇಕಾದ ಶೈಕ್ಷಣಿಕ ಅರ್ಹತೆ:

1) ಪದವಿಯಲ್ಲಿ ಕನಿಷ್ಠ ಶೇ 75ರಷ್ಟು ಅಂಕಗಳು ಅಥವಾ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ 55ರಷ್ಟು ಅಂಕಗಳು ಮತ್ತು ಪಿಎಚ್‌ಡಿ ಪದವಿ ಪಡೆದಿರಬೇಕು

ಅಥವಾ

2) ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ 55 ಅಂಕಗಳೊಂದಿಗೆ ಯುಜಿಸಿ, ಸಿಎಸ್‌ಐಆರ್, ಐಸಿಎಆರ್‌ನಂತಹ ಸಂಸ್ಥೆಗಳು ನಡೆಸುವ ರಾಷ್ಟ್ರೀಯ ಅರ್ಹತಾ ಪರೀಕ್ಷೆ ಅಥವಾ ಸ್ಲೆಟ್/ಎಸ್‌ಇಟಿಯಂತಹ ಪರೀಕ್ಷೆಗಳಲ್ಲಿ ಅರ್ಹತೆ ಪಡೆದಿರಬೇಕು

ಅಥವಾ

3) ಕನಿಷ್ಠ ಶೇ 55ರಷ್ಟು ಅಂಕಗಳೊಂದಿಗೆ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ (ಎಂ.ಇ, ಎಂ.ಟೆಕ್) ಮಾಡಿರಬೇಕು

ಪಿಎಚ್‌.ಡಿ ವಿಷಯ ಪರಿಗಣನೆ

ಸಹಾಯಕ ಪ್ರಾಧ್ಯಾಪಕ, ಸಹ ಪ್ರಾಧ್ಯಾಪಕ ಮತ್ತು ಪ್ರಾಧ್ಯಾಪಕ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ಅಭ್ಯರ್ಥಿಗಳು ಪಿಎಚ್‌.ಡಿ ಅಥವಾ ಎನ್‌ಇಟಿ/ಎಸ್‌ಇಟಿಯಲ್ಲಿ ಆಯ್ಕೆ ಮಾಡಿಕೊಂಡ ವಿಷಯಗಳು, ಅವರು ಪದವಿ ಅಥವಾ ಸ್ನಾತಕೋತ್ತರ ಪದವಿ ಕೋರ್ಸ್‌ನಲ್ಲಿ ಆಯ್ಕೆ ಮಾಡಿಕೊಂಡ ವಿಷಯಗಳಿಗಿಂತ ಭಿನ್ನವಾಗಿದ್ದರೆ, ಪಿಎಚ್‌ಡಿ, ಎನ್‌ಇಟಿ/ಎಸ್‌ಇಟಿಯಲ್ಲಿ ಆಯ್ಕೆ ಮಾಡಿದ ವಿಷಯಗಳನ್ನೇ ಪರಿಗಣಿಸಬೇಕು ಎಂದು ಕರಡು ನಿಯಮಾವಳಿ ಹೇಳಿದೆ.

ಅಂದರೆ, ಅಭ್ಯರ್ಥಿಯೊಬ್ಬರು ಪದವಿ, ಸ್ನಾತಕೋತ್ತರ ಪದವಿಯಲ್ಲಿ ಆಯ್ಕೆ ಮಾಡಿಕೊಂಡ ವಿಷಯದ ಬದಲಾಗಿ, ಪಿಎಚ್‌ಡಿ/ಎನ್‌ಇಟಿಯಲ್ಲಿ ಯಾವ ವಿಷಯ ಆಯ್ಕೆ ಮಾಡಿಕೊಂಡಿದ್ದಾರೋ ಆ ವಿಷಯವನ್ನು ಬೋಧಿಸಲು ಅರ್ಹರಾಗುತ್ತಾರೆ.

ಸಂಶೋಧನಾ ವರದಿಗಳು, ಪೇಟೆಂಟ್‌ಗಳೂ ಬೇಕು

ಕರಡು ನಿಯಮದಲ್ಲಿ ಸಹ ಪ್ರಾಧ್ಯಾಪಕರ ನೇಮಕಾತಿ ಮತ್ತು ಬಡ್ತಿಗೆ ಹೊಸ ಷರತ್ತುಗಳನ್ನು ಹಾಕಲಾಗಿದೆ. ಹಿಂದೆ ಅಭ್ಯರ್ಥಿಗಳ ಸಂಶೋಧನಾ ವರದಿಗಳು ಪ್ರಕಟವಾಗುವುದು ಕಡ್ಡಾಯವಾಗಿರಲಿಲ್ಲ, ಬದಲಿಗೆ ಒಂದು ಆಯ್ಕೆಯಾಗಿತ್ತು. ಅಭ್ಯರ್ಥಿಗಳ ಪುಸ್ತಕಗಳು ಪ್ರಕಟವಾಗಬೇಕಿರಲಿಲ್ಲ.

ಕರಡು ನಿಯಮದಲ್ಲಿ, ಸಹ ಪ್ರಾಧ್ಯಾಪಕರ ನೇಮಕಾತಿ ಮತ್ತು ಬಡ್ತಿಗೆ ಶೈಕ್ಷಣಿಕ ಅರ್ಹತೆ, ಬೋಧನಾ ಅನುಭವದ ಜೊತೆಗೆ ನಿಯತಕಾಲಿಕಗಳಲ್ಲಿ ಸಂಶೋಧನಾ ವರದಿಗಳು ಪ್ರಕಟವಾಗುವುದು/ಪುಸ್ತಕಗಳನ್ನು ಬರೆಯುವುದು/ ಪುಸ್ತಕಗಳಲ್ಲಿ ಲೇಖನಗಳು ಪ್ರಕಟಗೊಳ್ಳುವುದು/ ಪೇಟೆಂಟ್ ಹೊಂದಿರುವುದನ್ನು ಕಡ್ಡಾಯಗೊಳಿಸಲಾಗಿದೆ.

ಅದರ ಪ್ರಕಾರ, ಸಹ ಪ್ರಾಧ್ಯಾಪಕರ ನೇಮಕಾತಿಗೆ ಅಭ್ಯರ್ಥಿಗಳು ವಿವಿ, ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕನಿಷ್ಠ 8 ವರ್ಷಗಳ ಬೋಧನೆ/ಸಂಶೋಧನಾ ಅನುಭವ ಪಡೆದಿರಬೇಕು. ಜೊತೆಗೆ ಆಯಾ ಕ್ಷೇತ್ರದ ಶೈಕ್ಷಣಿಕ ತಜ್ಞರು ನಿರ್ವಹಿಸುವ ನಿಯತಕಾಲಿಕಗಳಲ್ಲಿ ಕನಿಷ್ಠ 8 ಸಂಶೋಧನಾ ವರದಿಗಳು ಪ್ರಕಟವಾಗಿರಬೇಕು ಅಥವಾ ಪುಸ್ತಕಗಳಲ್ಲಿ 8 ಅಧ್ಯಾಯಗಳು ಪ್ರಕಟಗೊಂಡಿರಬೇಕು ಅಥವಾ ಲೇಖಕನಾಗಿ ಒಂದು ಪುಸ್ತಕ ಪ್ರಕಟಗೊಂಡಿರಬೇಕು ಅಥವಾ ಎರಡು ಪುಸ್ತಕಗಳಿಗೆ ಸಹ ಲೇಖಕನಾಗಿ ಕೆಲಸ ಮಾಡಿರಬೇಕು ಅಥವಾ ಎಂಟು ಪೇಟೆಂಟ್‌ಗಳನ್ನು ಹೊಂದಿರಬೇಕು. ಸಂಶೋಧನಾ ವರದಿಗಳು, ಪುಸ್ತಕ ಅಧ್ಯಾಯಗಳು ಮತ್ತು ಪಡೆದಿರುವ ಪೇಟೆಂಟ್‌ಗಳು ಸೇರಿ ಒಟ್ಟು ಎಂಟು ಸಂಖ್ಯೆಯಲ್ಲಿದ್ದರೆ ಆ ಅಭ್ಯರ್ಥಿಯನ್ನು ಪರಿಗಣಿಸಬಹುದು ಎಂದು ಹೇಳಲಾಗಿದೆ.

ಪ್ರೊಫೆಸರ್ ಆಫ್ ಪ್ರಾಕ್ಟೀಸ್



ಉನ್ನತ ಶಿಕ್ಷಣ ಸಂಸ್ಥೆಗಳು ಕೈಗಾರಿಕೆ ಮತ್ತು ಇತರ ವಲಯಗಳ ತಜ್ಞರು/ವೃತ್ತಿಪರರನ್ನು ಬೋಧನೆ ಮತ್ತು ಸಂಶೋಧನೆಯ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಕರಡು ನಿಯಮಾವಳಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಆದರೆ, ಇವರ ನಿಯೋಜನೆಯು ಮಂಜೂರಾದ ಹುದ್ದೆಗಳಿಗೆ ಹೊರತಾಗಿರುತ್ತದೆ. ಒಂದು ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ಯಾವುದೇ ಕಾಲದಲ್ಲಿ ಇವರ ಪ್ರಮಾಣವು ಶೇ 10ಕ್ಕಿಂತ ಹೆಚ್ಚಾಗಬಾರದು ಎಂದು ನಿಯಮ ಹೇಳುತ್ತದೆ.

ನಿಯಮ ಉಲ್ಲಂಘನೆಗೆ ಏನು ಶಿಕ್ಷೆ?

ಒಂದು ಉನ್ನತ ಶಿಕ್ಷಣ ಸಂಸ್ಥೆಯು ನಿಯಮಾವಳಿ ಉಲ್ಲಂಘಿಸಿದೆ ಎಂದು ಕಂಡುಬಂದಲ್ಲಿ ಉಲ್ಲಂಘನೆಗಳ ಬಗ್ಗೆ ಪರಿಶೀಲಿಸಿ, ವರದಿ ನೀಡಲು ಯುಜಿಸಿ ಆಯೋಗವನ್ನು ನೇಮಿಸುತ್ತದೆ. ಸಂಸ್ಥೆಯು ಉಲ್ಲಂಘನೆ ಮಾಡಿರುವುದು ಸಾಬೀತಾದರೆ, ಯುಜಿಸಿಯು ಕೆಳಕಂಡ ಕ್ರಮಗಳನ್ನು ಜರುಗಿಸಬಹುದಾಗಿದೆ.

- ಯುಜಿಸಿ ಯೋಜನೆಗಳಲ್ಲಿ ಪಾಲ್ಗೊಳ್ಳದಂತೆ ನಿಷೇಧ ಹೇರಿಕೆ
- ಪದವಿ ನೀಡದಂತೆ ಸಂಸ್ಥೆಗೆ ನಿಷೇಧ ಹೇರಿಕೆ
- ದೂರ ಶಿಕ್ಷಣ (ಒಡಿಎಲ್) ಮತ್ತು ಆನ್‌ಲೈನ್ ಶಿಕ್ಷಣಕ್ಕೆ ನಿರ್ಬಂಧ
- ಯುಜಿಸಿ ಕಾಯ್ದೆ 1956ರ ಸೆಕ್ಷನ್ 2 (ಎಫ್) ಮತ್ತು 12 ಬಿ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉನ್ನತ ಶಿಕ್ಷಣ ಸಂಸ್ಥೆಗಳ ಪಟ್ಟಿಯಿಂದ ಸಂಸ್ಥೆಯನ್ನು ತೆಗೆದುಹಾಕುವುದು

ಈ ಮೇಲಿನ ಒಂದು ಅಥವಾ ಒಂದಕ್ಕಿಂತ ಹೆಚ್ಚು ಕ್ರಮಗಳನ್ನು ಸಂಸ್ಥೆಯ ವಿರುದ್ಧ ಜರುಗಿಸಬಹುದು. ಜತೆಗೆ, ಆಯೋಗದ ತೀರ್ಮಾನದಂತೆ ನಿರ್ದಿಷ್ಟ ಪ್ರಕರಣದ ಆಧಾರದಲ್ಲಿ ಹೆಚ್ಚುವರಿ ಶಿಕ್ಷಾ ಕ್ರಮಗಳನ್ನು ಕೈಗೊಳ್ಳುವುದಕ್ಕೂ ಅವಕಾಶ ಇದೆ ಎಂದು ಕರಡು ನಿಯಮಾವಳಿಯಲ್ಲಿ ಹೇಳಲಾಗಿದೆ.

ಸಿನಿ ಬಿಟ್ಸ್

ನಿಹಾರ್ ಮುಖೇಶ್‌ಗೆ ರಚನಾ ಜೋಡಿ



ರಚನಾ ಇಂದರ್

‘ಹೊಂದಿಸಿ ಬರೆಯಿರಿ’ ಖ್ಯಾತಿಯ ರಾಮೇನಹಳ್ಳಿ ಜಗನ್ನಾಥ್ ನಿರ್ದೇಶನದ ‘ತೀರ್ಥರೂಪ ತಂದೆಯವರಿಗೆ’ ಸಿನಿಮಾದ ನಾಯಕಿಯಾಗಿ ರಚನಾ ಇಂದರ್ ನಟಿಸಲಿದ್ದಾರೆ. ಈಗಾಗಲೇ ಸಿತಾರಾ, ರಾಜೇಶ್ ನಟರಂಗ ಚಿತ್ರತಂಡ ಸೇರಿಕೊಂಡಿದ್ದು, ‘ಅಕ್ಷರ’ ಎಂಬ ಪಾತ್ರಕ್ಕೆ ರಚನಾ ಬಣ್ಣಹಚ್ಚಲಿದ್ದಾರೆ. ನಾಯಕ ನಿಹಾರ್ ಮುಖೇಶ್ ಜೋಡಿಯಾಗಿ ಇವರು ಅಭಿನಯಿಸಲಿದ್ದಾರೆ. ‘ತೀರ್ಥರೂಪ ತಂದೆಯವರಿಗೆ’ ಸಿನಿಮಾದ ಚಿತ್ರೀಕರಣ ಭರದಿಂದ ಸಾಗುತ್ತಿದ್ದು, ಮೈಸೂರು, ಕೊಚ್ಚಿ, ಮೂಡಿಗೆರೆ ಸುತ್ತಮುತ್ತ ಶೇ 50ರಷ್ಟು ಶೂಟಿಂಗ್ ಪೂರ್ಣವಾಗಿದೆ. ಸಂಕ್ರಾಂತಿ ಬಳಿಕ ನಾಲ್ಕನೇ ಹಂತದ ಚಿತ್ರೀಕರಣವನ್ನು ಮೂಡಿಗೆರೆಯಲ್ಲಿ ಮಾಡಲು ಚಿತ್ರತಂಡ ಸಜ್ಜಾಗಿದೆ. ಆನಂತರ ಉತ್ತರ ಭಾರತದ ಕಡೆ ಚಿತ್ರೀಕರಣ ನಡೆಸಲಿದೆ.

ಜೈ ಚಾಮುಂಡೇಶ್ವರಿ ಪ್ರೊಡಕ್ಷನ್ಸ್‌ನಡಿ ಈ ಸಿನಿಮಾ ನಿರ್ಮಾಣವಾಗುತ್ತಿದ್ದು, ರಾಮೇನಹಳ್ಳಿ ಜಗನ್ನಾಥ ಅವರೇ ಚಿತ್ರದ ಕಥೆ ಬರೆದಿದ್ದಾರೆ. ಚಿತ್ರವು ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಸಿದ್ಧವಾಗುತ್ತಿದ್ದು, ತೆಲುಗಿನಲ್ಲಿ ‘ಪ್ರಿಯಮೈನ ನಾನ್ನಕು’ ಎಂಬ ಶೀರ್ಷಿಕೆ ಇಡಲಾಗಿದೆ. ಕೌಟುಂಬಿಕ ಹಿನ್ನೆಲೆ ಕಥೆಯುಳ್ಳ ಸಿನಿಮಾಗೆ ದೀಪಕ್ ಯರಗೇರಾ ಛಾಯಾಚಿತ್ರಗ್ರಹಣ, ಜೋ ಕೋಸ್ಟ್ ಸಂಗೀತ, ಪ್ರಶಾಂತ್ ರಾಜಪ್ಪ ಸಂಭಾಷಣೆ ಇರಲಿದೆ.

ಫೆ.7ಕ್ಕೆ ‘ಅಪಾಯವಿದೆ ಎಚ್ಚರಿಕೆ’



ಕಿರುತೆರೆ ನಟರಾದ ವಿಕಾಶ್ ಉತ್ತಯ್ಯ, ರಾಧಾ ಭಗವತಿ ಜೋಡಿಯಾಗಿ ನಟಿಸಿರುವ ‘ಅಪಾಯವಿದೆ ಎಚ್ಚರಿಕೆ’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಅಭಿಜಿತ್ ತೀರ್ಥಹಳ್ಳಿ ನಿರ್ದೇಶನದ ಚಿತ್ರ ಫೆಬ್ರುವರಿ 7ರಂದು ತೆರೆಗೆ ಬರಲಿದೆ.

‘ಸಸ್ಪೆನ್ಸ್, ಹಾರರ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರವಿದು. ಚಿತ್ರದ ಬಹುತೇಕ ಭಾಗವನ್ನು ಕತ್ತಲೆಯ ಕಾಡಲ್ಲಿ ಚಿತ್ರೀಕರಿಸಿದ್ದು, ನೋಡುಗನ ಗಮನ ಸೆಳೆಯುತ್ತದೆ. ಚಿತ್ರದ ಮೇಕಿಂಗ್, ಮ್ಯೂಸಿಕ್, ಲೊಕೇಶನ್ ಎಲ್ಲವೂ ಭಿನ್ನವಾಗಿದೆ’ ಎನ್ನುತ್ತಾರೆ ನಿರ್ದೇಶಕರು.

ವಿ.ಜಿ. ಮಂಜುನಾಥ್ ಮತ್ತು ಪೂರ್ಣಿಮ ಎಂ ಗೌಡ ನಿರ್ಮಾಣದ ಈ ಚಿತ್ರಕ್ಕೆ ಸುನಾದ್ ಗೌತಮ್ ಸಂಗೀತ, ಛಾಯಾಚಿತ್ರಗ್ರಹಣವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಮನಸ್ಸಿನ ಕಲಾತ್ಮಕತೆ



ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

106

ಊಟ ಮಾಡುವಾಗ ಒಂದು ಕಲ್ಲು ಬಂದರೆ, ಕೂದಲು ಬಂದರೆ ಅದನ್ನು ತೆಗೆದು ಊಟ ಮಾಡುತ್ತೀವಲ್ಲ. ಹಾಗೆಯೇ ಬದುಕಿನಲ್ಲಿ ಯಾವುದೇ ದೋಷ ಬಂದರೆ, ಅದನ್ನು ಬದಿಗೆ ಸರಿಸಿ ಮುಂದಕ್ಕೆ ಹೋಗುತ್ತಿರಬೇಕು. ಮನಸ್ಸು ಯಾವಾಗಲೂ ಚಂಚಲ. ಮನಸ್ಸಿನ ಸ್ವಭಾವವೇ ಚಂಚಲ. ಹೋಯ್ದಾಡತ್ತೈತಿ. ಬಹಳ ಜನ ಕೇಳ್ತಾರ, ಮನಸ್ಸನ್ನು ಕೇಂದ್ರೀಕರಿಸುವುದು ಹ್ಯಾಗೆ ಅಂತ. ಮನಸ್ಸನ್ನು ಕಂಬದಂತೆ, ಕಲ್ಲಿನಂತೆ ನಿಲ್ಲಿಸಲು ಸಾಧ್ಯವಿಲ್ಲ. ಮನಸ್ಸು ಕಂಬದಂತೆ ನಿಂತುಬಿಟ್ಟಿದ್ದರೆ ಕನ್ನಂಬಾಡಿ ಕಟ್ಟೋಕೆ, ಅಜಂತಾ ಎಲ್ಲೋರಾ ನಿರ್ಮಾಣ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಚಂಚಲತೆಯೇ ಮನಸ್ಸಿನ ಸೌಂದರ್ಯವಾದರೂ ನಮಗೆ ಮನಸ್ಸನ್ನು ಎಲ್ಲಿ ನಿಲ್ಲಿಸಬೇಕು ಎನ್ನುವುದು ಗೊತ್ತಿರಬೇಕು. ನಿಮ್ಮ ವಾಹನಗಳನ್ನು ನೀವು ನೋ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿದರೆ ಪೊಲೀಸರು ಹಿಡೀತಾರೆ. ಹಾಗೆಯೇ ನಿಮ್ಮ ಮನಸ್ಸನ್ನೂ ನೋ ಪಾರ್ಕಿಂಗ್‌ನಲ್ಲಿ ನಿಲ್ಲಿಸಬಾರದು ಅಷ್ಟೆ. ಮನಸ್ಸನ್ನು ಚೊಲೋ ಕೆಲಸ ಮಾಡಾಕೆ ಹಚ್ಚಬೇಕು.

ಗುಬ್ಬಿ ಗೂಡು ಕಟ್ಟತೈತಿ. ಅಲ್ಲಿ ಇಲ್ಲಿ ಬಿದ್ದ ಹುಲ್ಲು ಕಡ್ಡಿಗಳನ್ನು ತಂದು ಗೂಡು ಕಟ್ಟತೈತಿ. ಸಿಮೆಂಟ್ ಇಲ್ಲ, ಕಬ್ಬಿಣ ಇಲ್ಲ, ಯಾವುದೇ ಎಂಜಿನಿಯರ್ ನಕ್ಷೆ ಮಾಡಿಲ್ಲ. ಆದರೂ ಗೂಡು ಬಂದೋಬಸ್ತ್ ಆಗಿರತ್ತೈತಿ. ಮಳೆ, ಗಾಳಿ ಬಂದರೆ ಎಂಜಿನಿಯರ್ ಕಟ್ಟಿದ ಮನೆ ಬೀಳುತ್ತದೆಯೇ ವಿನಾ ಗುಬ್ಬಿ ಕಟ್ಟಿದ ಗೂಡು ಏನಾಗುವುದಿಲ್ಲ. ತಾಯಂದಿರು ಮನೆಯಲ್ಲಿ ಇರುವ ಹಳೆಯ ಬಟ್ಟೆ, ಹರುಕು ಬಟ್ಟೆಯನ್ನು ಬಿಸಾಡದೆ ಅದನ್ನೇ ನೇಯ್ದು ಕೌದಿ ತಯಾರು ಮಾಡ್ತಾರೆ. ಕಸದಲ್ಲಿ ರಸವನ್ನು ಉತ್ಪಾದನೆ ಮಾಡುತ್ತದಲ್ಲ, ಅದೇ ಮನಸ್ಸಿನ ಕಲಾತ್ಮಕತೆ. ಮನಸ್ಸು ಹೊಯ್ದಾಡುತ್ತೈತಲ್ಲ ಅದೇ ಮನಸ್ಸಿನ ಎರಡನೇ ದೋಷ ವಿಕ್ಷಿಪ್ತ.

ಮನಸ್ಸಿನ ಮೂರನೇ ದೋಷ ಆವರಣ. ನಮ್ಮ ಮನಸ್ಸಿಗೆ ಅಜ್ಞಾನದ ಹೊದಿಕೆ ಐತಿ. ಈ ಅಜ್ಞಾನ ಏನು ಮಾಡತ್ತೈತಿ ಅಂದ್ರ ನಾವು ಈ ಭೂಮಿ ಮೇಲೆ ಯಾಕೆ ಬಂದ್ವಿ ಅನ್ನೋದನ್ನು ಮರಸತ್ತೈತಿ. ತನಗೆ ಸಂಬಂಧವಿಲ್ಲದ ವಿಷಯಗಳ ಸ್ನೇಹ ಮಾಡಿತು ಮನಸ್ಸು. ನಾನು ಶ್ರೀಮಂತ, ನಾನು ಬಡವ, ನಾನು ವಿದ್ಯಾವಂತ ಹೀಗೆಯೇ ನಾನು ಎನ್ನುವುದರ ಮುಂದೆ ಏನಾದರೂ ಬರೀರಿ ಅದು ಯಾವುದೂ ಇರುವಂತಹದ್ದಲ್ಲ. ಅಜ್ಞಾನಿನೂ ಹೋಗ್ತಾನ, ಶ್ರೀಮಂತನೂ ಹೋಗ್ತಾನ, ನಾನು ಅನ್ನುವುದು ನಾನಲ್ಲ ಅಂತ ತಿಳಿಯುವುದೇ ಜ್ಞಾನ. ನಾನಲ್ಲ, ಅಲ್ಲ ಎಂದು ತಿಳಿದುಕೊಳ್ಳುವವನು ಅಲ್ಲಮಪ್ರಭು ಆಗ್ತಾನ.

ಮನಸ್ಸಿಗೆ ಮುಸುಕಿದ ಅಜ್ಞಾನದ ಮಾಯೆ ತೊಲಗಬೇಕು. ದೇಶ ಸ್ವಚ್ಛ ಆಗಬೇಕು, ಮನೆ ಸ್ವಚ್ಛ ಆಗಬೇಕು. ಮನಸ್ಸೂ ಸ್ವಚ್ಛ ಆಗಬೇಕು. ಮನಸ್ಸು ಸ್ವಚ್ಛ ಮಾಡಿಕೊಳ್ಳುವುದು ಹೇಗೆ? ಮನಸ್ಸಿಗೆ ಆಕಾರವಿಲ್ಲ. ಇದು ನಿರಾಕಾರ. ನೀರಿಗೂ ಆಕಾರ ಇಲ್ಲ. ಯಾವ ಆಕಾರದ ಪಾತ್ರೆಯಲ್ಲಿ ನೀರು ಹಾಕುತ್ತೇವೋ ಅದೇ ಆಕಾರ ಪಡೆಯುತ್ತದೆ. ಹಾಗೆಯೇ ಮನಸ್ಸು ಕೂಡ ಇಂದ್ರಿಯಗಳ ಮೂಲಕ ಆಕಾರ ಪಡೆದುಕೊಳ್ಳುತ್ತದೆ. ಕಣ್ಣಿನ ಮೂಲಕ ಏನು ನೋಡುತ್ತೇವೋ, ಕಿವಿಯ ಮೂಲಕ ಏನು ಕೇಳುತ್ತೇವೋ ಅದೇ ಆಕಾರವನ್ನು ಪಡೆದುಕೊಳ್ಳುತ್ತದೆ. ಅದಕ್ಕೆ ನಮ್ಮ ಹಿರಿಯರು, ‘ಮನಸ್ಸು ಸ್ವಚ್ಛವಾಗಿರಬೇಕು ಅಂದರ ಸಂತರ ಸಹವಾಸ ಮತ್ತು ಸದ್ವಿಚಾರಗಳ ಶ್ರವಣ ಮಾಡಿ’ ಎಂದರು. ಯಾರು ಮೈ ಹೊಲಸು ಮಾಡಿಕೊಂಡಿಲ್ಲ, ಯಾರು ಮನಸ್ಸು ಹೊಲಸು ಮಾಡಿಕೊಂಡಿಲ್ಲ, ಯಾರ ಮಾತು ಹೊಲಸಾಗಿಲ್ಲ ಅವರೇ ಸಂತರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಜನವರಿ 9, 2025

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ದಶಮಿ ಗಂ. 12-23 ನಕ್ಷತ್ರ: ಭರಣಿ ಗಂ. 15-07 ಯೋಗ: ಸಾಧ್ಯ ಗಂ. 17-29 ಕರಣ: ಗರ ಗಂ. 12-23, ಧನು ಮಾಸದ 24 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 4.

ರಾಹುಕಾಲ : ಮಧ್ಯಾಹ್ನ 01-30 – 03-00

ಸೂರ್ಯೋದಯ : 07-00 ಸೂರ್ಯಾಸ್ತ : 06-16

ಮುಸ್ಲಿಂ ದಿನಾಂಕ : 08 ರಜಬ್

ಅದೃಷ್ಟ ಸಂಖ್ಯೆ : 9, 10

ಮೇಷ: ಕಲಾವಿದರಿಗೆ ಉತ್ತಮ ಅವಕಾಶವಿದ್ದರೂ ಅದನ್ನು ಸದುಪಯೋಗಪಡಿಸಿಕೊಳ್ಳುವುದು ಕಷ್ಟಕರ. ಕೆಲಸ ಕಾರ್ಯಗಳನ್ನು ಮುಗಿಸಲು ಆತುರ ತೋರುವಿರಿ.

ವೃಷಭ: ಕಟ್ಟಡ ಕಾರ್ಮಿಕರಿಗೆ ಉಡುಗೊರೆ ಸಹಿತ ಸಂಪಾದನೆ ಇರುವುದು. ಚಿಂತೆ ಮತ್ತು ಭಯ ಇವೆರಡನ್ನೂ ದೂರ ಮಾಡಿಕೊಳ್ಳುವ ಬಗ್ಗೆ ಪ್ರಯತ್ನಿಸಿ. ಅಸಾಮಾನ್ಯ ವ್ಯಕ್ತಿಗಳನ್ನು ವ್ಯಾಪಾರ ನಿಮಿತ್ತ ಭೇಟಿ ಮಾಡುವಿರಿ.

ಮಿಥುನ: ಮನದಲ್ಲಿರುವ ಆಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸಲು ಸೂಕ್ತ ದಿನ. ನಿಮ್ಮ ಪ್ರೀತಿ ಪಾತ್ರರೊಡನೆ ಆತ್ಮೀಯ ಒಡನಾಟ ಇಟ್ಟುಕೊಳ್ಳಿ. ಕೆಲಸ ಕಾರ್ಯಗಳಲ್ಲಿ ಉತ್ಸಾಹ ತೋರುವಿರಿ.

ಕರ್ಕಾಟಕ: ಆರ್ಥಿಕ ಪರಿಸ್ಥಿತಿ ಉತ್ತಮವಾಗಿರುವುದಿಲ್ಲ. ವ್ಯವಹಾರದಲ್ಲಿ ಮತ್ತು ಖರ್ಚು ವೆಚ್ಚದಲ್ಲಿ ಮಿತಬಳಕೆಯನ್ನು ಸಾಧಿಸಿ. ಕಾರ್ಯವನ್ನು ಜಯಿಸುವ ಹಂಬಲದಲ್ಲಿ ಆರೋಗ್ಯವನ್ನು ಕಳೆದುಕೊಳ್ಳಬೇಡಿ.

ಸಿಂಹ: ದುರಭ್ಯಾಸದಿಂದ ದೂರ ಉಳಿಯುವ ಪ್ರಯತ್ನಕ್ಕೆ ಸ್ನೇಹಿತರು ತೊಂದರೆ ಮಾಡಬಹುದು. ನಿರ್ಧಾರ ಬದಲಿಸಬೇಡಿ. ಆದಾಯ ಉತ್ತಮವಾಗಿದ್ದು ಹೂಡಿಕೆಗೆ ಒಳ್ಳೆಯ ಸಮಯ. ಜವಾಬ್ದಾರಿಯಿಂದ ವಿಮುಖರಾಗಬೇಡಿ.

ಕನ್ಯಾ: ಸಹಾಯದ ಮನೋಭಾವದಿಂದ ಸ್ನೇಹ ಸಂಬಂಧಗಳು ಇನ್ನಷ್ಟು ಗಟ್ಟಿಗೊಳ್ಳಲಿವೆ. ಉದ್ಯೋಗಕ್ಕಾಗಿ ನಡೆಸಿದ ತೀವ್ರ ಪ್ರಯತ್ನ ಫಲ ನೀಡಲಿದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅವಕಾಶ ಸಿಗಲಿದೆ.

ತುಲಾ: ಹಿರಿಯರ ಮಾರ್ಗದರ್ಶನದಂತೆ ನಡೆದು ಕೆಲಸಗಳನ್ನು ಮಾಡುವುದರಿಂದ ಅಡೆತಡೆಗಳು ಇರುವುದಿಲ್ಲ. ಉದ್ಯೋಗ ಬದಲಾವಣೆಯ ಬಗ್ಗೆ ತೀರ್ಮಾನಿಸಬೇಡಿ. ವಕೀಲಿ ವೃತ್ತಿಯವರಿಗೆ ಅಧ್ಯಯನದ ಕೊರತೆ ಕಾಣಲಿದೆ.

ವೃಶ್ಚಿಕ: ಸಹೋದರರಲ್ಲಿನ ಕೋರ್ಟು ವ್ಯವಹಾರಗಳನ್ನು ರಾಜಿ ಸಂಧಾನ ಮೂಲಕ ಬಗೆಹರಿಸಿಕೊಳ್ಳುವ ಪ್ರಯತ್ನ ಮಾಡಿ. ವೈಯಕ್ತಿಕ ಕೆಲಸಗಳಿಗೆ ಯಾವುದೇ ಅಡಚಣೆ ಇರುವುದಿಲ್ಲ.

ಧನು: ಅಧಿಕಾರದಲ್ಲಿ ಸ್ಥಾನಮಾನ ಪಡೆಯಲು ದೇವರ ಸೇವೆಯಂಥ ಧಾರ್ಮಿಕ ಕಾರ್ಯಗಳನ್ನು ನಡೆಸಿ. ಕೆಲಸಗಳಲ್ಲಿ ನಿಯಮ ಉಲ್ಲಂಘಿಸುವಂತೆ ಒತ್ತಡ ಹೆಚ್ಚಲಿದೆ. ಸುಬ್ರಹ್ಮಣ್ಯನ ಸೇವೆ ಮಾಡುವುದರಿಂದ ಶುಭ.

ಮಕರ: ಮಾನಸಿಕ ನೆಮ್ಮದಿಗಾಗಿ ಧಾರ್ಮಿಕ ಕಾರ್ಯಗಳನ್ನು ಅಥವಾ ಪುಣ್ಯಕ್ಷೇತ್ರಗಳ ದರ್ಶನ ಮಾಡುವುದು ಉತ್ತಮ. ವ್ಯವಹಾರದಲ್ಲಿ ಪಾಲುದಾರರನ್ನಾಗಿ ಸೇರಿಸಿಕೊಳ್ಳಲು ಸೂಕ್ತ ವ್ಯಕ್ತಿಯ ಹುಡುಕಾಟ ನಡೆಸುವಿರಿ.

ಕುಂಭ: ಹಿಡಿದ ಕಾರ್ಯಗಳಲ್ಲಿ ವಿಳಂಬ ಉಂಟಾಗುವುದು ಅಥವಾ ಅಂತಿಮ ಕ್ಷಣದಲ್ಲಿ ನೆರವೇರುವ ಅನುಭವವಾಗಲಿದೆ. ಪ್ರತಿಯೊಂದರಲ್ಲೂ ಯಶಸ್ಸನ್ನು ಕಾಣಲು ಅಪೇಕ್ಷಿಸುವ ನೀವು ಅದಕ್ಕಾಗಿ ಶ್ರಮಪಡಬೇಕಾದ ಅಗತ್ಯವಿದೆ.

ಮೀನ: ಶಿಕ್ಷಣ ಕ್ಷೇತ್ರದಲ್ಲಿನ ಅನನ್ಯ ಸೇವೆಗಾಗಿ ಸಂಘ ಸಂಸ್ಥೆಗಳಿಂದ ಸನ್ಮಾನ ಹೊಂದುವಿರಿ. ಚಿನ್ನ ಬೆಳ್ಳಿ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ಅಧಿಕ ಲಾಭ ಇರಲಿದೆ. ಒಳ್ಳೆಯತನ ದುರುಪಯೋಗವಾಗದಂತೆ ಎಚ್ಚರ ವಹಿಸಿ.

ಪದಬಂಧ 5917


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ದೇವರ ಸ್ತುತಿಯನ್ನು ಹಾಡುವುದು (3)
4.ತನ್ನ ಗುರಿಯನ್ನು ನೆರವೇರಿಸಲು ಪ್ರತಿಜ್ಞಾ¨ದ್ಧನಾದವನು (5)
8.ನೀರು ಒಸರುವ ಜಾಗ (2)
10.ಹೆಂಗಸು ಇಲ್ಲಿದ್ದಾಳೆ (3)
11.ರಾಗಬದ್ಧವಾಗಿ ಕಾವ್ಯವನ್ನು ಓದುವುದು (3)
12.ವೇದದ ಕಡೆಯ ಭಾಗ ಉಲ್ಟಾ ಆಗಿದೆ (3)
13.ಶುನಕವಿಲ್ಲಿ ಉಲ್ಟಾ ನಿಂತಿದೆ (2)
15.ನೀರಿನಿಂದಾದ ಅನಿಲ (5)
18.ಸದಭಿಪ್ರಾಯ ಸಂಪಾದನೆಗಾಗಿ ಕೊಡುವ ಹಣ (3)

ಮೇಲಿಂದ ಕೆಳಕ್ಕೆ

1.ನಡುವೆ ವರ ತಿರುಗಿ ನೀಡಿದ ಆಶ್ವಾಸನೆ (4)
2.ನೆನಪಲ್ಲೇ ಇರುವ ಕಾರಣ (2)
3.ಲೋಹದ ತಂತಿಯಿಲ್ಲಿ ತಿರುವು ಮುರುವಾಗಿದೆ (2)
5.ತಾನಾಗಿ ಕಲ್ಪಿಸಿಕೊಂಡಿದ್ದು (6)
6.ದಬ ದಬನೆ ಸುರಿದ ತರಕಾರಿಯಿದು! (5)
7.ವಿಶೇಷ ಅಭ್ಯಾಸಕ್ಕಾಗಿ ಪ್ರೋತ್ಸಾಹ ರೂಪದಲ್ಲಿ ಕೊಡುವ ವೇತನ (6)
9.ಕಾವ್ಯ ಸಂಗೀತ ಮುಂತಾದ ಕಲೆಯಿಲ್ಲಿ ಉಲ್ಟಾ ಕಾಣುತ್ತಿದೆ (5)
14.ಮನಸ್ಸಿಗೆ ತಾಗುವಂತೆ ಹೇಳಿದ ಮಾತು (4)
16.ಮಾಡುವವನು ಇಲ್ಲಿದ್ದಾನೆ (2)
17.ನೀರಿನಿಂದ ಸುತ್ತುವರೆದ ಭೂ ಭಾಗ (2)



5916ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಪಾರ್ಥಿವ 5.ಸಮಯ 6.ಲವಾಜಮೆ 7.ಉರಿ 8.ಸಹಾಯ 10.ಸಚಿವ 12.ಬಾಗಲಕೋಟೆ 13.ಸಲಿಲ 14.ಉಯಿಲು 16.ವರ್ಗ 17.ಬಿಡಿಗಾಸು 18.ನಜರು 19.ಕುಹಕ

ಮೇಲಿಂದ ಕೆಳಕ್ಕೆ: 1.ನಸರಿ 2.ಪಾಯಸ 3.ವಲಯ 4.ಆಮೆ 7.ಉಪವಾಸ 9.ಹಾಗಲಕಾಯಿ 10.ಸಟೆ 11.ವನದುರ್ಗ 12.ಬಾಲ 14.ಉಸುಕು 15.ಲುನಕ 16.ವರುಣ 17.ಬಿತ್ತ

ಸುಡೊಕು 6302

	9			5			2	1
3		5	2		1	7		
	1			9			3	5
5		7				1		
	6			2			8	
9		8			4	5		2
1		2		8			6	
			5		6	2		3
6		3		4			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6301 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

ತೆಂಗು ಉತ್ಪಾದನೆ ಕುಸಿತ: ಉತ್ತರ ಭಾರತದಲ್ಲಿ ಕಾಯಿ ಪೌಡರ್‌ಗೆ ಬೇಡಿಕೆ ಹೆಚ್ಚಳ

ಗಗನಕ್ಕೇರಿದ ತೆಂಗಿನಕಾಯಿ ಧಾರಣೆ

ಪ್ರಜಾವಾಣಿ ವಾರ್ತೆ

ತುಮಕೂರು: ದಿನದಿಂದ ದಿನಕ್ಕೆ ತೆಂಗಿನಕಾಯಿಗೆ ಬೇಡಿಕೆ ಹೆಚ್ಚುತ್ತಿದ್ದು, ರೈತರಿಗೆ ಉತ್ತಮ ಬೆಲೆ ಸಿಗುತ್ತಿದೆ. ಮುಂದಿನ ಬೇಸಿಗೆ ಹೊತ್ತಿಗೆ ದರ ಮತ್ತಷ್ಟು ದುಬಾರಿಯಾಗಲಿದೆ ಎಂದು ವರ್ತಕರು ಹೇಳುತ್ತಾರೆ.

ತೆಂಗಿನಕಾಯಿಗಳ ಗಾತ್ರಕ್ಕೆ ಅನುಗುಣವಾಗಿ ಮಾರುಕಟ್ಟೆಯಲ್ಲಿ ಬೆಲೆ ನಿಗದಿಯಾಗುತ್ತಿದೆ. ಸಣ್ಣ ಗಾತ್ರದ ಕಾಯಿ ₹20–₹22ಕ್ಕೆ ಮಾರಾಟವಾಗುತ್ತಿದ್ದರೆ, ಮಧ್ಯಮ ಗಾತ್ರ ₹25, ದೊಡ್ಡ ಗಾತ್ರದ ಕಾಯಿಗೆ ₹30ರ ವರೆಗೂ ಬೆಲೆ ಸಿಗುತ್ತಿದೆ. ಸಂತೆಗಳಲ್ಲಿ ಕೆ.ಜಿ ಲೆಕ್ಕದಲ್ಲೂ ಖರೀದಿಸುತ್ತಿದ್ದು, ಕೆ.ಜಿ ₹57–₹60ರ ವರೆಗೂ ಏರಿಕೆಯಾಗಿದೆ.

ಜಿಲ್ಲೆಯಲ್ಲಿ 2.24 ಲಕ್ಷ ಹೆಕ್ಟೇರ್‌ನಲ್ಲಿ ತೆಂಗು ಬೆಳೆಯಲಾಗುತ್ತಿದೆ. ಬರ, ರೋಗಬಾಧೆ, ಹವಾಮಾನ ವೈಪರೀತ್ಯದಿಂದಾಗಿ ಇಳುವರಿ ಕಡಿಮೆಯಾಗಿದೆ.

2023ರಲ್ಲಿ ತೀವ್ರ ಬರದಿಂದ ರೈತರು ಮರಗಳನ್ನು ಉಳಿಸಿಕೊಳ್ಳುವುದೇ ಕಷ್ಟಕರವಾಗಿತ್ತು. ಕಳೆದ ವರ್ಷ ಉತ್ತಮ ಮಳೆಯಾಗಿದ್ದರೂ ಮರಗಳು ಇನ್ನೂ ಚೇತರಿಸಿಕೊಂಡಿಲ್ಲ. ಎಳನೀರಿಗೆ ಉತ್ತಮ ಬೆಲೆ ಸಿಗುತ್ತಿರುವುದರಿಂದ ಸಾಕಷ್ಟು ರೈತರು ಎಳನೀರು ಮಾರಾಟ ಮಾಡುತ್ತಿದ್ದಾರೆ. ತೆಂಗಿನ ಉಪ ಉತ್ಪನ್ನಗಳ ತಯಾರಿಕೆ ಮತ್ತು ಬಳಕೆಯೂ ಹೆಚ್ಚಾಗಿದೆ. ಇದು ಕೂಡ ಬೆಲೆ ಏರಿಕೆಗೆ ಕಾರಣವಾಗಿದೆ.

ಹಿಂದಿನ ವರ್ಷಗಳಲ್ಲಿ ಕೊಬ್ಬರಿ ಬೆಲೆ ಕ್ವಿಂಟಲ್‌ಗೆ ₹10 ಸಾವಿರಕ್ಕಿಂತ ಕಡಿಮೆ ಇತ್ತು. ಬೆಲೆ ಕುಸಿತದಿಂದ ಕಂಗಾಲಾದವರು ತೆಂಗಿನಮರಗಳ ಜಾಗದಲ್ಲಿ ಅಡಿಕೆ ಸಸಿಗಳನ್ನು ನೆಟ್ಟಿದ್ದಾರೆ. ಇಂತಹ ಹಲವು ಕಾರಣಗಳಿಂದ ತೆಂಗು ಉತ್ಪಾದನೆ ಕುಸಿಯುತ್ತಲೇ ಸಾಗಿದ್ದು, ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

ಪಶ್ಚಿಮ ಬಂಗಾಳ ಸೇರಿ ಉತ್ತರ ಭಾರತದಲ್ಲಿ ಉಂಡೆ ಕೊಬ್ಬರಿ ಬದಲಿಗೆ ಕಾಯಿ ಪೌಡರ್ ಬಳಕೆ ಹೆಚ್ಚಾಗಿದೆ. ತಮಿಳು-ನಾಡಿನಲ್ಲೂ ಉತ್ಪಾದನೆ ತಗ್ಗಿದ್ದು, ಆ ರಾಜ್ಯದ ಕಾಯಿಯು ಸಂಕ್ರಾಂತಿ ನಂತರ ಮಾರುಕಟ್ಟೆಗೆ ಬರಲಿದೆ. ಇದರಿಂದಾಗಿ ಜಿಲ್ಲೆಯ ಕಾಯಿಗೆ ಬೇಡಿಕೆ ಬಂದಿದೆ ಎಂದು ವಿವರಿಸುತ್ತಾರೆ.



ಕಳೆದ ವರ್ಷ ತೆಂಗಿನ ಮರಗಳು ಚೇತರಿಕೆ ಕಾಣದಷ್ಟು ಬಿಸಿಲು ಕಾದಿತ್ತು. ಇದನ್ನು ನೋಡಲಾಗದೆ ಹಲವು ರೈತರು ಮರಗಳನ್ನು ಕಡಿದು ಹಾಕಿ ಅಡಿಕೆ ಸಸಿ ನೆಟ್ಟಿದ್ದಾರೆ

ವೆಂಕಟೇಶ್, ರೈತ, ಬಾಗೂರು, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

ರೈತರಿಗೆ ದಕ್ಕಿದ ಲಾಭ

ಕಡೂರು ವರದಿ (ಚಿಕ್ಕಮಗಳೂರು ಜಿಲ್ಲೆ): ಇಲ್ಲಿನ ಎಪಿಎಂಸಿ ಕಾಯಿ ಸಂತೆಯಲ್ಲಿ ಒಂದು ಸಾವಿರ ಉತ್ತಮ ಗುಣಮಟ್ಟದ ತೆಂಗಿನಕಾಯಿಗೆ ₹26 ಸಾವಿರ ದರವಿದೆ. ಮಧ್ಯಮ ಗಾತ್ರದ ಕಾಯಿಗಳಿಗೆ ₹18 ಸಾವಿರ ಹಾಗೂ ಚಿಕ್ಕ ಗಾತ್ರದ ಕಾಯಿಗಳಿಗೆ ₹12 ಸಾವಿರದಿಂದ ₹15 ಸಾವಿರ ಬೆಲೆ ಇದೆ.

ಒಂದು ಕ್ವಿಂಟಲ್ ಕೊಬ್ಬರಿಗೆ ₹4,500ರಿಂದ ₹5,500ರ ವರೆಗೆ ಮಾರಾಟವಾಗಿದೆ. ಕೆಲವು ವ್ಯಾಪಾರಿಗಳು ರೈತರ ತೋಟಕ್ಕೆ ಹೋಗಿ 1 ಸಾವಿರ ಕಾಯಿಗೆ ₹20 ಸಾವಿರದಿಂದ ₹24 ಸಾವಿರಕ್ಕೆ ಖರೀದಿಸುತ್ತಿದ್ದಾರೆ. ಸ್ಥಳೀಯವಾಗಿ ಚಿಲ್ಲರೆ ಮಾರುಕಟ್ಟೆಯಲ್ಲಿ ಒಂದು ತೆಂಗಿನಕಾಯಿಗೆ ₹20ರಿಂದ ₹35 ದರವಿದೆ.

ವ್ಯಾಪಾರಿಗಳು ಖರೀದಿಸುವ ಕಾಯಿಯನ್ನು ಮುಂಬೈ, ದೆಹಲಿ, ಪುಣೆಗೆ ಕಳುಹಿಸುತ್ತಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ತೆಂಗಿನಕಾಯಿ ಬೆಲೆ ಹೆಚ್ಚಾಗಿದ್ದು, ಲಾಭ ಸಿಕ್ಕಿದೆ ಎಂದು ರೈತರು ಹೇಳುತ್ತಾರೆ.



ಕೆ.ಜಿಗೆ ₹57 ದರ

(ಚಾಮರಾಜನಗರ ವರದಿ) ಜಿಲ್ಲೆಯಲ್ಲಿ ಬೆಳೆಯುವ ಬಹುಪಾಲು ತೆಂಗಿನಕಾಯಿ ನೆರೆಯ ತಮಿಳುನಾಡು, ಕೇರಳ ರಾಜ್ಯ ಹಾಗೂ ಬೆಂಗಳೂರಿಗೆ ಹೆಚ್ಚಾಗಿ ಪೂರೈಕೆಯಾಗುತ್ತದೆ.

ಸದ್ಯ ಇಲ್ಲಿನ ಚಿಲ್ಲರೆ ಮಾರುಕಟ್ಟೆಯಲ್ಲಿ ಒಂದು ತೆಂಗಿನಕಾಯಿಗೆ ₹40ರಿಂದ ₹45 ದರ ಇದೆ. ರೈತರಿಂದ ಕೆ.ಜಿಗೆ ₹57ಕ್ಕೆ ಖರೀದಿ ಮಾಡಲಾಗುತ್ತಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

ಜಿಲ್ಲೆಯ 12,015 ಹೆಕ್ಟೇರ್‌ನಲ್ಲಿ ತೆಂಗು ಬೆಳೆಯಲಾಗುತ್ತಿದೆ. ವಾರ್ಷಿಕವಾಗಿ 13.21 ಕೋಟಿ ತೆಂಗಿನಕಾಯಿಗಳು ಉತ್ಪಾದನೆಯಾಗುತ್ತವೆ ಎಂದು ತೋಟಗಾರಿಕಾ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಉದುರಿ ಹೋದ ತೆಂಗಿನ ಹರಳು

(ಚಿತ್ರದುರ್ಗ ವರದಿ): 2023ರಲ್ಲಿ ಕಾಡಿದ್ದ ಬರದಿಂದಾಗಿ ಬಹುತೇಕ ತೆಂಗಿನ ಮರಗಳು ಈವರೆಗೂ ಪುನಶ್ಚೇತನ ಕಂಡಿಲ್ಲ.

ಮರಗಳಲ್ಲಿ ಹೊಸದಾಗಿ ಹೊಂಬಾಳೆ ಅರಳಿದರೂ ತೆಂಗಿನ ಹರಳು ಉದುರಿ ಹೋಗಿವೆ. ಇದರಿಂದಾಗಿ ಇಳುವರಿ ಕುಸಿತ ಕಂಡಿದೆ. ಹೊಸದುರ್ಗ, ಹಿರಿಯೂರು ಭಾಗದಲ್ಲಿ ವ್ಯಾಪಾರಿಗಳು ತೋಟಗಳಿಗೆ ಎಡತಾಕುತ್ತಿದ್ದಾರೆ. ಬೆಲೆಯೂ ಉತ್ತಮವಾಗಿದೆ. ಆದರೆ, ಮರಗಳಲ್ಲಿ ಕಾಯಿಗಳೇ ಇಲ್ಲದ ಕಾರಣ ಮಾರಾಟ ಕುಸಿದಿದೆ.

ತೀವ್ರ ಬಿಸಿಲಿನಿಂದಾಗಿ ಮರಗಳಿಗೆ ಕಪ್ಪುತಲೆ ಹುಳು ಬಾಧೆಯು ಕಾಡುತ್ತಿದೆ. ಹಲವು ಮರಗಳು ನಾಶವಾಗಿವೆ.

ಕೊಬ್ಬರಿಗೆ ಹೆಚ್ಚಿದ ಬೆಲೆ

(ಹಾಸನ ವರದಿ): ಸಂಕ್ರಾಂತಿ ಹಬ್ಬದಿಂದಾಗಿ ಕೊಬ್ಬರಿಗೆ ಬೇಡಿಕೆ ಹೆಚ್ಚಾಗಿದೆ. ಆದರೆ, ನಿರೀಕ್ಷಿತ ಇಳುವರಿ ಇಲ್ಲದ ಕಾರಣದಿಂದ ತೆಂಗಿನಕಾಯಿ ಹಾಗೂ ಕೊಬ್ಬರಿ ಬೆಲೆಯಲ್ಲಿ ಏರಿಕೆಯಾಗಿದೆ.

ಒಂದು ವರ್ಷದಿಂದ ಕ್ವಿಂಟಲ್‌ಗೆ ₹8ಸಾವಿರದಿಂದ ₹8,500 ಇದ್ದ ಕೊಬ್ಬರಿ ಬೆಲೆ ಈಗ ₹14,660ರಿಂದ ₹15 ಸಾವಿರಕ್ಕೆ ಮುಟ್ಟಿದೆ. ಕೊಬ್ಬರಿ ಕೆ.ಜಿ.ಗೆ ₹240 ಏರಿಕೆಯಾಗಿದ್ದರೆ, ದೊಡ್ಡಗಾತ್ರದ ತೆಂಗಿನಕಾಯಿಯೊಂದಕ್ಕೆ ₹40 ರಿಂದ ₹45 ದರವಿದೆ. ಒಂದು ಎಳನೀರು ದರ ₹50 ದಾಟಿದೆ.



ಜಿಲ್ಲೆಯ ಅರಸೀಕೆರೆ, ಚನ್ನರಾಯಪಟ್ಟಣ, ಬೇಲೂರು, ಹಾಸನ ತಾಲ್ಲೂಕಿನ 1.18 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದೆ. 2023-24ರಲ್ಲಿ ಮಳೆ ಕೊರತೆಯಿಂದಾಗಿ ಇಳುವರಿ ಕಡಿಮೆಯಾಗಿದೆ.

'ಕಾಯಿ ಕೀಳಿಸುವ, ಸುಲಿಸುವ ಜಂಜಡವೇ ಬೇಡ ಎಂದು ಬೆಳೆಗಾರರು ಎಳನೀರು ಮಾರಾಟ ಮಾಡುತ್ತಿದ್ದಾರೆ. ಇದರಿಂದ ಮಾರುಕಟ್ಟೆಯಲ್ಲಿನ ಬೇಡಿಕೆಗೆ ತಕ್ಕಂತೆ ತೆಂಗಿನಕಾಯಿ ಹಾಗೂ ಕೊಬ್ಬರಿ ಸಿಗುತ್ತಿಲ್ಲ' ಎನ್ನುತ್ತಾರೆ ವರ್ತಕರು.

ಅರಸೀಕೆರೆಯ ಮಾರುಕಟ್ಟೆಯಿಂದ ರಾಜಸ್ಥಾನ, ಉತ್ತರ ಪ್ರದೇಶ, ಮಧ್ಯಪ್ರದೇಶ, ಜಮ್ಮು-ಕಾಶ್ಮೀರ, ಬಿಹಾರ, ಉತ್ತರಾಂಚಲ ಮತ್ತು ಮಹಾರಾಷ್ಟ್ರಕ್ಕೆ ಕೊಬ್ಬರಿ ರವಾನೆಯಾಗುತ್ತದೆ. ಈ ಕೊಬ್ಬರಿಯನ್ನು ಪ್ರಮುಖವಾಗಿ ಸಿಹಿತಿಂಡಿ ಮತ್ತು ಅಡುಗೆಗೆ ಬಳಸುತ್ತಾರೆ. ಉಂಡೆ ಕೊಬ್ಬರಿ ಬೆಲೆಯು ಏರಿಕೆಯಾಗಲು ಉತ್ತರ ಭಾರತದಲ್ಲಿ ನಡೆಯುವ ಹಬ್ಬ, ಮದುವೆ ಋತು ಮತ್ತು ಹವಾಗುಣದ ಮೇಲೆ ಅವಲಂಬಿತವಾಗಿದೆ.

ಬೇಸಿಗೆ ಆರಂಭವಾಗುತ್ತಿದೆ. ಇದರಿಂದ ಮುಂಬೈ ಮಾರುಕಟ್ಟೆಯಲ್ಲಿ ಎಳನೀರಿಗೆ ಬೇಡಿಕೆ ಹೆಚ್ಚಾಗಿದೆ. ಇಲ್ಲಿ ಎಳನೀರು ಒಂದಕ್ಕೆ ₹100 ಇದೆ. ಜಿಲ್ಲೆಯಿಂದ ವಾರಕ್ಕೆ 20ರಿಂದ 25 ಲೋಡ್ ಎಳನೀರು ರವಾನೆ ಮಾಡಲಾಗುತ್ತಿದೆ.

ಹಬ್ಬಗಳಿರುವುದರಿಂದ ಸದ್ಯಕ್ಕೆ ಬೆಲೆ ಹೆಚ್ಚಳವಾಗಿದೆ. ಸಂಕ್ರಾಂತಿ ನಂತರ ಹೆಚ್ಚಿನ ಕೊಬ್ಬರಿ ದಾಸ್ತಾನು ಬಂದರೆ ಬೆಲೆ ಕಡಿಮೆಯಾಗಬಹುದು

ಸಿದ್ದಲಿಂಗಸ್ವಾಮಿ, ಕಾರ್ಯದರ್ಶಿ, ಅರಸೀಕೆರೆ ಎಪಿಎಂಸಿ

ಈ ಬಾರಿ ತಮಿಳುನಾಡು, ಕೇರಳದಲ್ಲಿಯೂ ಕೊಬ್ಬರಿ ಉತ್ಪಾದನೆ ಕಡಿಮೆಯಾಗಿದ್ದು, ಉತ್ತರ ಭಾರತದಲ್ಲಿ ಬೇಡಿಕೆ ಹೆಚ್ಚಾಗಿದೆ. ಹೀಗಾಗಿ ಉತ್ತಮ ಬೆಲೆ ಬಂದಿದೆ

ಮಂಗಳ, ಉಪ ನಿರ್ದೇಶಕಿ, ತೋಟಗಾರಿಕೆ ಇಲಾಖೆ

ದಶಕದಲ್ಲೇ ದುಬಾರಿ ದರ

(ಮದ್ದೂರು/ ಮಂಡ್ಯ ವರದಿ): ತೆಂಗಿನ ಮರಗಳಿಗೆ ರೋಗ ಬಾಧೆ ಹಾಗೂ ಬರದ ಛಾಯೆಯಿಂದ ತೆಂಗಿನಕಾಯಿ ಬೆಲೆ ಗಗನಕ್ಕೇರಿದ್ದು, ಈ ಬಾರಿ 10 ವರ್ಷಗಳಲ್ಲೇ ಹೆಚ್ಚು ದುಬಾರಿಯಾಗಿದೆ. ಬೇಸಿಗೆಗೆ ಮುನ್ನವೇ ದರ ಹೆಚ್ಚಿದ್ದು, ಗ್ರಾಹಕರಿಗೆ ಹೊರೆಯಾಗಿದೆ.

ಜಿಲ್ಲೆಯ ಹಲವೆಡೆ ಸಂತೆಗೆ ಬರುತ್ತಿದ್ದ ತೆಂಗಿನಕಾಯಿಗಳ ಪೂರೈಕೆ ಕಡಿಮೆಯಾಗಿದೆ. ಮದ್ದೂರು ಹಾಗೂ ಬೆಂಗಳೂರು- ಮೈಸೂರು ಹೆದ್ದಾರಿ ಬದಿಯಲ್ಲಿ 400 ವರ್ಷಕ್ಕೂ ಹೆಚ್ಚು ಇತಿಹಾಸವಿರುವ ತೆಂಗಿನಕಾಯಿ ಮಾರುಕಟ್ಟೆಯಲ್ಲಿನ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ.

ಬೆಂಗಳೂರು, ಮೈಸೂರು, ರಾಮನಗರ ಹಾಗೂ ಹೊರರಾಜ್ಯಗಳಾದ ತಮಿಳುನಾಡು, ಕೇರಳದಿಂದಲೂ ತೆಂಗಿನಕಾಯಿ ಖರೀದಿಸಲು ಇಲ್ಲಿಗೆ ವ್ಯಾಪಾರಿಗಳು ಬರುತ್ತಾರೆ. ಈ ಬಾರಿ ಪ್ರತಿ ಕೆ.ಜಿ ತೆಂಗಿನಕಾಯಿ ದರ ₹53 ರಿಂದ ₹55 ಇದೆ. ಒಂದು ದಪ್ಪ ತೆಂಗಿನಕಾಯಿಗೆ ಸುಮಾರು ₹30 ದರವಿದೆ. 'ಎರಡು ವರ್ಷ ಮಳೆ ಕಡಿಮೆಯಾಗಿ ತೆಂಗಿನಮರಗಳು ಒಣಗಿದ್ದವು. ಕಪ್ಪುತಲೆ ಹುಳುವಿನ ಬಾಧೆಯಿಂದ ಇಳುವರಿ ಕುಸಿದಿರುವುದೇ ಬೆಲೆ ಏರಿಕೆಗೆ ಕಾರಣ' ಎನ್ನುತ್ತಾರೆ ರೈತ ನಿಡಘಟ್ಟ ಪ್ರಕಾಶ್.

'ಕಳೆದ 7-8 ತಿಂಗಳ ಅವಧಿಯಲ್ಲಿ ಮದ್ದೂರಿನ ಎಳನೀರು ಮಾರುಕಟ್ಟೆಯಲ್ಲಿ ಧಾರಣೆ ಹೆಚ್ಚಾಗಿತ್ತು. ಮಂಡ್ಯ ಜಿಲ್ಲೆಯ ಬಹುತೇಕ ರೈತರು ಎಳನೀರು ಮಾರಿದ್ದರಿಂದ ಈಗ ತೆಂಗಿನಕಾಯಿಯ ಕೊರತೆ ಉಂಟಾಗಿದೆ' ಎಂದು ವ್ಯಾಪಾರಿಗಳು ಹೇಳುತ್ತಾರೆ.



ಮದ್ದೂರು ತಾಲ್ಲೂಕಿನ ನಿಡಘಟ್ಟ ಗ್ರಾಮದಲ್ಲಿ ಬುಧವಾರ ನಡೆದ ಸಂತೆಯಲ್ಲಿ ತೆಂಗಿನಕಾಯಿಗಳನ್ನು ರಾಶಿ ಹಾಕಲಾಗಿತ್ತು

ಐದು ವರ್ಷದಲ್ಲಿ 9.2 ಕೋಟಿ ಉದ್ಯೋಗ ನಷ್ಟ: ಡಬ್ಲ್ಯುಇಎಫ್

ನವದೆಹಲಿ (ಪಿಟಿಐ): 'ಮುಂದಿನ ಐದು ವರ್ಷಗಳಲ್ಲಿ ಜಗತ್ತಿನಾದ್ಯಂತ ಹೊಸದಾಗಿ 17 ಕೋಟಿ ಉದ್ಯೋಗಗಳು ಸೃಷ್ಟಿಯಾಗಲಿವೆ. ಆದರೆ, ಇದೇ ಅವಧಿಯಲ್ಲಿ 9.2 ಕೋಟಿ ಜನರು ಉದ್ಯೋಗ ಕಳೆದುಕೊಳ್ಳಲಿದ್ದಾರೆ. ಒಟ್ಟಾರೆ ಹೊಸದಾಗಿ 7.8 ಕೋಟಿ ಉದ್ಯೋಗಗಳಷ್ಟೇ ಸೃಷ್ಟಿಯಾದಂತೆ ಆಗುತ್ತದೆ' ಎಂದು ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯುಇಎಫ್) ವರದಿ ತಿಳಿಸಿದೆ.

ದಾವೋಸ್‌ನಲ್ಲಿ ಇದೇ 20ರಿಂದ 25ರ ವರೆಗೆ ನಡೆಯಲಿರುವ ವಿಶ್ವ ಆರ್ಥಿಕ ವೇದಿಕೆಯ ವಾರ್ಷಿಕ ಸಭೆಗೂ ಮೊದಲೇ ಬುಧವಾರ ವರದಿ ಬಿಡುಗಡೆಯಾಗಿದೆ.


2030ರ ವೇಳೆಗೆ ವಿಶ್ವದಲ್ಲಿ ಕೃಷಿ ಕಾರ್ಮಿಕರು ಮತ್ತು ಚಾಲಕರ ಹುದ್ದೆಗಳ ನೇಮಕಾತಿ ಪ್ರಮಾಣ ಏರಿಕೆಯಾಗಲಿದೆ. ಆದರೆ, ಇದೇ ಅವಧಿಯಲ್ಲಿ ಕ್ಯಾಷಿಯರ್ ಮತ್ತು ಟಿಕೆಟ್ ಬುಕಿಂಗ್ ಕ್ಷೇತ್ರ ಸೇರಿ ಇತರೆ ವಲಯಗಳಲ್ಲಿ ಉದ್ಯೋಗಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಲಿದೆ ಎಂದು ವಿವರಿಸಿದೆ.

ಜಾಗತಿಕ ಮಟ್ಟದಲ್ಲಿ ಅಗಾಧ ಪ್ರಮಾಣದಲ್ಲಿ ತಂತ್ರಜ್ಞಾನದ ಬದಲಾಗುತ್ತಿದೆ. ಜನಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ. ಜಾಗತಿಕ ಬಿಕ್ಕಟ್ಟು ಉಲ್ಬಣಿಸಿದೆ. ಇದರಿಂದ ಆರ್ಥಿಕ ಬೆಳವಣಿಗೆಯು ಒತ್ತಡಕ್ಕೆ ಸಿಲುಕಿದೆ. ಹಾಗಾಗಿ, ಕೈಗಾರಿಕೆಗಳು ಮತ್ತು ವೃತ್ತಿಪರ ವಲಯಗಳಲ್ಲಿ ಉದ್ಯೋಗಗಳ ಸಂಖ್ಯೆ ಕಡಿಮೆಯಾಗಲಿದೆ ಎಂದು ಹೇಳಿದೆ.

ಒಂದು ಸಾವಿರಕ್ಕೂ ಹೆಚ್ಚು ಕಂಪನಿಗಳ ದತ್ತಾಂಶ ಕ್ರೋಡೀಕರಿಸಿ ಈ ವರದಿ ಸಿದ್ಧಪಡಿಸಲಾಗಿದೆ. ವ್ಯಾಪಾರ ವಿನಿಮಯದ ಹಾದಿಯಲ್ಲಿ ಉದ್ಯೋಗಿಗಳಲ್ಲಿ ಕೌಶಲ ಕೊರತೆ ಇರುವುದು ಈ ಅಧ್ಯಯನದಲ್ಲಿ ಕಂಡುಬಂದಿದೆ ಎಂದು ಹೇಳಿದೆ.

ಕೃತಕ ಬುದ್ಧಿಮತ್ತೆ, ದತ್ತಾಂಶ ಸಂಗ್ರಹ ಮತ್ತು ಸೈಬರ್ ಭದ್ರತಾ ವಲಯವು ವೇಗವಾಗಿ ಬೆಳವಣಿಗೆ ಸಾಧಿಸಲಿದೆ. ಮಾನವ ಕೌಶಲದಲ್ಲಿನ ಕೊರತೆಯು ಮುಂದುವರಿಯಲಿದೆ ಎಂದು ತಿಳಿಸಿದೆ.


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,707
ಇಂದಿನ ಅಂತ್ಯ	23,688
▼	18
ದಿನದ ಕನಿಷ್ಠ	23,496

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹525
12 ಕ್ಕೆ	₹70
ಮೈಸೂರು	
100ಕ್ಕೆ	₹525

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1430 (1430)
ಸೋಯಾ (ರಿಫೈನ್ಡ್)	₹1255 (1260)
ಸೂರ್ಯಕಾಂತ (ರಿಫೈನ್ಡ್)	₹1360 (1355)
ಪಾಮೋಲಿನ್	₹1340 (1340)

₹80 ಸಾವಿರ ಮುಟ್ಟಿದ ಚಿನ್ನದ ದರ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ 10 ಗ್ರಾಂ ಚಿನ್ನದ ಧಾರಣೆಯು ಮತ್ತೆ ₹80 ಸಾವಿರಕ್ಕೆ ಮುಟ್ಟಿದೆ.



ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹300 ಏರಿಕೆಯಾಗಿ, ₹80 ಸಾವಿರದಂತೆ ಮಾರಾಟವಾಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿದ್ದು, ₹79,600 ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹500 ಹೆಚ್ಚಳವಾಗಿ, ₹92,500ರಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಸ್ಥಳೀಯ ಮಾರುಕಟ್ಟೆಯಲ್ಲಿ ಆಭರಣ ತಯಾರಕರು ಮತ್ತು ದಾಸ್ತಾನುಗಾರರಿಂದ ಖರೀದಿ ಪ್ರಮಾಣ ಹೆಚ್ಚಾಗಿದೆ. ಇದರಿಂದ ಹಳದಿ ಲೋಹದ ಧಾರಣೆ ಏರಿಕೆಯಾಗಿದೆ ಎಂದು ತಿಳಿಸಿದೆ.

'ಮಾರುಕಟ್ಟೆಯಲ್ಲಿ ಹೆಚ್ಚಿನ ದರವಿದ್ದರೂ ಮೀಸಲು ಸಂಗ್ರಹಕ್ಕಾಗಿ ಚೀನಾವು ಸತತ ಎರಡನೇ ತಿಂಗಳು ಕೂಡ ಅಧಿಕ ಪ್ರಮಾಣದಲ್ಲಿ ಹಳದಿ ಲೋಹವನ್ನು ಖರೀದಿಸುತ್ತಿದೆ. ಇದು ಸಹ ಚಿನ್ನದ ದರ ಏರಿಕೆಗೆ ಕಾರಣವಾಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸೌಮಿಲ್ ಗಾಂಧಿ ಹೇಳಿದ್ದಾರೆ.

ಖಾಲಿ ಹುದ್ದೆ ಭರ್ತಿಗೆ ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಕಾಲೇಜುಗಳಲ್ಲಿ ಖಾಲಿ ಇರುವ 1,033 ಹುದ್ದೆಗಳು ಮತ್ತು ವಿಶ್ವವಿದ್ಯಾಲಯಗ-ಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತಕ್ಷಣವೇ ಕ್ರಮ ತೆಗೆದುಕೊಳ್ಳಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆರ್ಥಿಕ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಕೃಷ್ಣಾದಲ್ಲಿ ಬುಧವಾರ ನಡೆದ ಉನ್ನತ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾಹಿತಿ ಪಡೆದ ಮುಖ್ಯಮಂತ್ರಿ, 'ಖಾಲಿ ಹುದ್ದೆ ಭರ್ತಿಗೆ ಸಂಬಂಧಿಸಿದಂತೆ ತೆಗೆದುಕೊಂಡ ಕ್ರಮಗಳ ಬಗ್ಗೆ ಎರಡು ದಿನಗಳಲ್ಲಿ ಮಾಹಿತಿ ನೀಡಿ' ಎಂದು ಅಧಿಕಾರಿಗಳಿಗೆ ಸೂಚಿಸಿದರು. ಉನ್ನತ ಶಿಕ್ಷಣಕ್ಕೆ ಪ್ರಸಕ್ತ ಬಜೆಟ್‌ನಲ್ಲಿ ₹5,862 ಕೋಟಿ ಅನುದಾನ ಒದಗಿಸಲಾಗಿದ್ದು, ಈವರೆಗೆ ₹3,713 ಕೋಟಿ (ಶೇ72.87) ಬಳಕೆಯಾಗಿದೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಮೂಲಸೌಕರ್ಯ ಅಭಿವೃದ್ಧಿಗೆ ಬಜೆಟ್‌ನಲ್ಲಿ ₹250 ಕೋಟಿ ನೀಡಲಾ ಗಿದೆ. ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಅನುಮೋದನೆ ನೀಡಲಾಗಿರುವ ಕಾಲೇಜು ಕಟ್ಟಡಗಳ ನಿರ್ಮಾಣ, ಮೈಸೂರಿನ ಮಹಾರಾಣಿ ಕಾಲೇಜು ಮತ್ತು ವಿದ್ಯಾರ್ಥಿ ನಿಲಯದ ಕಟ್ಟಡ ಕಾಮಗಾರಿಗಳನ್ನು ಶೀಘ್ರವೇ ಆರಂಭಿಸಬೇಕು. ಕನ್ನಡ ವಿಶ್ವವಿದ್ಯಾಲಯ ಮತ್ತು ಜಾನಪದ ವಿಶ್ವವಿದ್ಯಾಲಯಗಳ ಸಮಸ್ಯೆಗಳನ್ನು ಪರಿಶೀಲಿಸಿ, ಪರಿಹಾರ ಒದಗಿಸಿ ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು.

ಪ್ರಸಕ್ತ ಸಾಲಿನ ಪ್ರಗತಿ

- ₹30 ಕೋಟಿ ವೆಚ್ಚದಲ್ಲಿ 21 ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮತ್ತು 9 ಮಹಿಳಾ ಪಾಲಿಟೆಕ್ನಿಕ್‌ಗಳ ಉನ್ನತೀಕರಣ ಕಾಮಗಾರಿ
- ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1,842 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಭರ್ತಿ
- ಕಾರ್ಪೋರೇಟ್ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಅಡಿಯಲ್ಲಿ 20 ಕಂಪನಿಗಳ ಜತೆ ಒಪ್ಪಂದ

ತೆಲಂಗಾಣ: ಕಿಂಗ್ ಫಿಷರ್ ಬಿಯರ್ ಪೂರೈಕೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣಕ್ಕೆ ಕಿಂಗ್‌ಫಿಷರ್ ಹಾಗೂ ಹೈನೆಕೆನ್ ಬಿಯರ್ ಪೂರೈಕೆ ಸ್ಥಗಿತಗೊಳಿಸಲು ಯುನೈಟೆಡ್ ಬ್ರುವರಿಸ್ ಕಂಪನಿ (ಯುಬಿಎಲ್) ನಿರ್ಧರಿಸಿದೆ.

ಕಳೆದ ಎರಡು ವರ್ಷದಿಂದಲೂ ರಾಜ್ಯದಲ್ಲಿ ಬಿಯರ್‌ನ ಮೂಲ ದರ ಏರಿಕೆ ಮಾಡುವಂತೆ ಸರ್ಕಾರಕ್ಕೆ ಕೋರಲಾಗುತ್ತಿದೆ. ಆದರೆ, ಯಾವುದೇ ಕ್ರಮಕೈಗೊಂಡಿಲ್ಲ. ಇದರಿಂದ ತೀವ್ರ ಆರ್ಥಿಕ ನಷ್ಟ ಅನುಭವಿಸುವಂತಾಗಿದೆ. ಪ್ರತಿ ಬಾಟಲಿಯನ್ನು ನಷ್ಟದಲ್ಲಿಯೇ ಮಾರಾಟ ಮಾಡುವಂತಾಗಿದೆ ಎಂದು ಕಂಪನಿ ತಿಳಿಸಿದೆ.

ಅಲ್ಲದೆ, ಹಳೆಯ ಬಾಕಿ ಮೊತ್ತ ಕೂಡ ಪಾವತಿಸಿಲ್ಲ. ಹಾಗಾಗಿ, ತೆಲಂಗಾಣ ಪಾನೀಯ ನಿಗಮಕ್ಕೆ (ಟಿಜಿಬಿಸಿಎಲ್) ಬಿಯರ್ ಪೂರೈಕೆ ಸ್ಥಗಿತಗೊಳಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದೆ.

ಬ್ರುವರಿಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಕೂಡ ಮದ್ಯ ತಯಾರಿಕಾ ವಲಯವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆದಿದೆ. ಹಣದುಬ್ಬರದ ಏರಿಕೆಗೆ ಅನುಗುಣವಾಗಿ ಬೆಲೆ ಏರಿಕೆ ಮಾಡುವಂತೆ ಮನದಟ್ಟು ಮಾಡಿಕೊಟ್ಟಿದೆ. ಆದರೆ, ಇಲ್ಲಿಯವರೆಗೂ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ ಎಂದು ಹೇಳಿದೆ.

ಕಂಪನಿಯು ಮದ್ಯ ಪೂರೈಕೆ ಮತ್ತು ಮಾರಾಟದಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ ₹24,500 ಕೋಟಿ ಆದಾಯ ತಂದುಕೊಡುತ್ತಿದೆ. ಆರ್ಥಿಕ ಒತ್ತಡ ಪರಿಸ್ಥಿತಿಯ ನಡುವೆಯೂ ಗ್ರಾಹಕರಿಗೆ ಯಾವುದೇ ತೊಂದರೆಯಾಗದಂತೆ ಮದ್ಯ ಪೂರೈಸಲಾಗಿದೆ ಎಂದು ಹೇಳಿದೆ.

ಸರ್ಕಾರವು ಕೂಡಲೇ ಮದ್ಯದ ಬೆಲೆ ಏರಿಕೆಗೆ ಕ್ರಮಕೈಗೊಳ್ಳಬೇಕು ಎಂದು ಮದ್ಯ ತಯಾರಕರು ಒತ್ತಾಯಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ		ಹಳತು	36000-49000	ಹೊಸಚಾಲಿ	20669-27309
ಬೆಟ್ಟೆ	28099-50099	**ಶಿವಮೊಗ್ಗ**		ಕೆಂಪುಗೋಟು	22119-22119
ಚಾಲಿ	33069-37599	ಬೆಟ್ಟೆ	48499-57419	ರಾಶಿ	43099-48839
ಚಿಪ್ಪು	20109-26599	ಗೊರಬಲು	17059-30011	ತಟ್ಟಿಬೆಟ್ಟೆ	27309-40099
ಫ್ಯಾಕ್ಟರಿ	6019-21629	ರಾಶಿ	28000-51200	**ಶಿರಸಿ**	
ಹಳೆಚಾಲಿ	37869-39199	ಸರಕು	56009-85096	ಬೆಟ್ಟೆ	30300-41099
ಹೊಸಚಾಲಿ	25569-30400	**ಸಿದ್ದಾಪುರ**		ಬಿಳಿಗೋಟು	22669-30599
ಪುತ್ತೂರು		ಬಿಳಿಗೋಟು	23619-26099	ಚಾಲಿ	35499-39299
ಕೋಕ	20500-27500	ಚಾಲಿ	32809-38699	ಕೆಂಪುಗೋಟು	10299-24669
ಹೊಸತು	25000-35500	ಕೋಕ	23119-26909	ರಾಶಿ	41209-45669

ಒತ್ತೆಯಾಳು ಬಿಡುಗಡೆಗೆ ಟ್ರಂಪ್ ಗಡುವು

ವಾಷಿಂಗ್ಟನ್ (ಪಿಟಿಐ): ಹಮಾಸ್ ವಶದಲ್ಲಿರುವ ಒತ್ತೆಯಾಳುಗಳನ್ನು ತಾನು ಅಧಿಕಾರ ವಹಿಸಿಕೊಳ್ಳುವ ದಿನದೊಳಗೆ ಬಿಡುಗಡೆ ಮಾಡದಿದ್ದರೆ ಭೀಕರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

2023ರ ಅಕ್ಟೋಬರ್ 7ರಂದು ಹಮಾಸ್ ಬಂಡುಕೋರರು ಒತ್ತೆ ಇರಿಸಿಕೊಂಡ ಕೆಲವು ಅಮೆರಿಕನ್ನರು ಸೇರಿ ಸುಮಾರು 100ಕ್ಕೂ ಹೆಚ್ಚು ಒತ್ತೆಯಾಳುಗಳು ಇನ್ನೂ ಬಿಡುಗಡೆಯಾಗಿಲ್ಲ. ಇವರಲ್ಲಿ ಅನೇಕರು ಹಮಾಸ್ ವಶದಲ್ಲಿರುವಾಗಲೇ ಮೃತಪಟ್ಟಿರುವ ಶಂಕೆ ಇದೆ.

'ನಾನು ಸಂಧಾನಕ್ಕೆ ಯಾವುದೇ ಅಡ್ಡಿಪಡಿಸುವುದಿಲ್ಲ. ಆದರೆ, ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸುವುದರೊಳಗೆ ಒತ್ತೆಯಲ್ಲಿರುವವರೆಲ್ಲರೂ ಬಿಡುಗಡೆಯಾಗಬೇಕು. ಒಂದು ವೇಳೆ, ಒತ್ತೆಯಾಳುಗಳು ಸುರಕ್ಷಿತವಾಗಿ ಮರಳದಿದ್ದರೆ ಪಶ್ಚಿಮ ಏಷ್ಯಾದಲ್ಲಿ ದೊಡ್ಡ ನರಕವೇ ಸೃಷ್ಟಿಯಾಗುತ್ತದೆ' ಎಂದು ಟ್ರಂಪ್, ಫ್ಲಾರಿಡಾದ ಮಾರ್-ಎ-ಲಾಗೋದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಮೆರಿಕದ ಒತ್ತೆಯಾಳುಗಳ ಬಿಡುಗಡೆ ಕುರಿತು ಹಮಾಸ್ ಜತೆಗಿನ ಮಾತುಕತೆಯ ಸ್ಥಿತಿಗತಿ ಕುರಿತ ಪ್ರಶ್ನೆಗೆ ಟ್ರಂಪ್ ಈ ಪ್ರತಿಕ್ರಿಯೆ ನೀಡಿದ್ದಾರೆ.

ಅಮೆರಿಕದ 47ನೇ ಅಧ್ಯಕ್ಷರಾಗಿ ಟ್ರಂಪ್ ಇದೇ 20ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಬಿಡುಗಡೆಗೆ ಸಿದ್ಧ: ಹಮಾಸ್ ಮತ್ತು ಇಸ್ರೇಲ್ ನಡುವೆ ಕತಾರ್‌ನಲ್ಲಿ ಮಾತುಕತೆಗಳು ನಡೆಯುತ್ತಿವೆ. ಗಾಜಾದಲ್ಲಿ 34 ಒತ್ತೆಯಾಳುಗಳು ಇರುವುದಾಗಿ ಹಮಾಸ್ ಈ ವಾರ ಹೇಳಿದೆ. ಈ ಒತ್ತೆಯಾಳುಗಳಲ್ಲಿ ದ್ವಿಪೌರತ್ವ ಹೊಂದಿರುವ ಇಬ್ಬರು ಅಮೆರಿಕನ್ನರು ಇದ್ದಾರೆ. ಇವರನ್ನು ಕದನ ವಿರಾಮ ಒಪ್ಪಂದದಡಿ ಬಿಡುಗಡೆ ಮಾಡಲು ಹಮಾಸ್ ಸಿದ್ಧವಾಗಿದೆ ಎಂದು ನ್ಯಾಷನಲ್ ಪಬ್ಲಿಕ್ ರೇಡಿಯೊ ವರದಿ ಮಾಡಿದೆ.

ಬಾಡಿಗೆ ತಾಯ್ತನ ಅರ್ಜಿ ಕೇಂದ್ರ–ರಾಜ್ಯಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎರಡನೇ ಮಗುವಿಗಾಗಿ ಬಾಡಿಗೆ ತಾಯ್ತನದ ಚಿಕಿತ್ಸೆ ಪಡೆಯಲು ಅವಕಾಶ ನೀಡದ, 'ಬಾಡಿಗೆ ತಾಯ್ತನ ನಿಯಂತ್ರಣ ಕಾಯ್ದೆ-2021ರ ಕಲಂ 4 (III) ಸಿ (II) ರದ್ದುಪಡಿಸಬೇಕು' ಎಂದು ಕೋರಿ ಎರಡನೇ ಮಗುವಿಗಾಗಿ ಬಾಡಿಗೆ ತಾಯ್ತನದ ಚಿಕಿತ್ಸೆ ಪಡೆಯುತ್ತಿರುವ ದಂಪತಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ 32 ವರ್ಷದ ಪತ್ನಿ ಹಾಗೂ 34 ವರ್ಷದ ಪತಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಕೆಲ ಕಾಲ ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಕಾರ್ಯದರ್ಶಿ, ರಾಜ್ಯ ಆರೋಗ್ಯ ಇಲಾಖೆಯ ಬಾಡಿಗೆ ತಾಯ್ತನ ಕಾಯ್ದೆಗೆ ಸಂಬಂಧಿಸಿದ ಕರ್ನಾಟಕ ರಾಜ್ಯ ಸಕ್ಷಮ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮತ್ತು ಬೆಂಗಳೂರು ಜಿಲ್ಲಾ ವೈದ್ಯಕೀಯ ಮಂಡಳಿ ಅಧ್ಯಕ್ಷರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹184
ಆರ್‌ಎಸ್‌ಎಸ್-5	₹179
ಗುಡ್ ಲಾಟ್	₹173

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹446-668
ದ್ವಿತಳಿ (ಬಿ.ವಿ)	₹288-776

ಕಾಳ್ಗಿಚ್ಚು: ಲಾಸ್ ಏಂಜಲೀಸ್ ತತ್ತರ

ಪ್ರಜಾವಾಣಿ ವಾರ್ತೆ




ಕ್ಯಾಲಿಫೋರ್ನಿಯಾದ ಪ್ಯಾಸಡೀನಾದ ನಗರದ ಹತ್ತಿರ ಆಲ್ಟಡೀನಾ ಪ್ರದೇಶದಲ್ಲಿ ಎದ್ದಿರುವ ಕಾಳ್ಗಿಚ್ಚು —ಎಎಫ್‌ಪಿ ಚಿತ್ರ

ನ್ಯೂಯಾರ್ಕ್: ಲಾಸ್ ಏಂಜಲೀಸ್ ನಗರದಲ್ಲಿನ ಪೆಸಿಫಿಕ್ ಪ್ಯಾಲಿಸೈಡ್ಸ್ ಹಾಗೂ ಪ್ಯಾಸಡೀನಾದ ಈಟನ್ ಕೆಯಾನ್ ಪ್ರದೇಶವು ಮಂಗಳವಾರ ರಾತ್ರಿಯಿಂದ ಹೊತ್ತಿ ಉರಿಯುತ್ತಿದೆ. ಬುಧವಾರ ಬೆಳಿಗ್ಗೆಯಿಂದ ಸೈಲ್ಮಾರ್ ಪ್ರದೇಶವು ಬೆಂಕಿಯಿಂದ ಆವರಿಸಿದೆ. ಲಾಸ್ ಏಂಜಲೀಸ್‌ನಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ. 'ಸಂತಾ ಆನಾ' ಎಂಬ ಸುಂಟರ ಗಾಳಿಯು ಎಬ್ಬಿಸಿದ ಕಾಳ್ಗಿಚ್ಚಿ-ನಿಂದಾಗಿ ದೊಡ್ಡ ಪ್ರಮಾಣದ ಹಾನಿ ಉಂಟಾಗಿದೆ. ಒಣಗಾಳಿಯಿಂದ ಎದ್ದ ಈ ಬೆಂಕಿಯನ್ನು ನಂದಿಸಲು ಮಾಡುತ್ತಿರುವ ಯತ್ನಗಳು ಫಲ ಕೊಡುತ್ತಿಲ್ಲ.

ಕಾರ್ಯಾಚರಣೆ ವೇಳೆ ಅಗ್ನಿಶಾಮಕ ದಳದ ಮಹಿಳಾ ಸಿಬ್ಬಂದಿಯೊಬ್ಬರ ತಲೆಗೆ ಗಾಯವಾಗಿದೆ. ಎಲ್ಲೆಲ್ಲೂ ಭಯಭೀತ ಮುಖಗಳು, ಜನರ ಕೀರಾಟವೇ ಪ್ರತಿಧ್ವನಿಸುತ್ತಿದೆ. ಬೆಂಕಿಯಿಂದ ತಪ್ಪಿಸಿಕೊಳ್ಳಲು ಸಾವಿರಾರು ಜನರು ಮನೆ ಬಿಟ್ಟು ಓಡುತ್ತಿದ್ದಾರೆ. ಕಾರು ಏರಿ ಬೀದಿ ಬೀದಿಗಳಲ್ಲಿ ಸಂಚರಿಸುತ್ತಿದ್ದಾರೆ. ಇದರಿಂದ ಪೆಸಿಫಿಕ್ ಪ್ಯಾಲಿಸೈಡ್ಸ್ ಪ್ರದೇಶದಲ್ಲಿ ತೀವ್ರ ಸಂಚಾರ ದಟ್ಟಣೆ ಉಂಟಾಗಿದೆ. ದುರಂತದ ವಿಡಿಯೊಗಳು, ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಇಡೀ ಲಾಸ್ ಏಂಜಲೀಸ್ ನಗರದ ಸುತ್ತ ದಟ್ಟ ಹೊಗೆ ಎದ್ದಿದೆ. ಹಲವು ಜನರ ಮುಖದ ಮೇಲೆ, ಕೈ ಕಾಲುಗಳ ಮೇಲೆ ಸುಟ್ಟ ಗಾಯಗಳಾಗಿವೆ. ಆದರೆ, ಇದುವರೆಗೂ ಸಾವು-ನೋವು, ಹಾನಿಯ ಕುರಿತು ನಿಖರ ಮಾಹಿತಿ ಹೊರಬಂದಿಲ್ಲ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಮಂಗಳವಾರ ಲಾಸ್ ಏಂಜಲೀಸ್‌ನಲ್ಲಿಯೇ ಇದ್ದರು. ಅವರು ಕ್ಯಾಲಿಫೋರ್ನಿಯಾದ ರಿವರ್‌ಸೈಡ್ ಪ್ರದೇಶಕ್ಕೆ ಪ್ರವಾಸ ತೆರಳಬೇಕಿತ್ತು. ಆದರೆ, ಕಾಳ್ಗಿಚ್ಚಿನ ಸುದ್ದಿ ತಿಳಿಯುತ್ತಿದ್ದಂತೆಯೇ ಅವರು ತಮ್ಮ ಪ್ರವಾಸವನ್ನು ರದ್ದು ಮಾಡಿ ಲಾಸ್ ಏಂಜಲೀಸ್‌ನಲ್ಲಿಯೇ ಉಳಿದರು. ಅವರು ಉಳಿದುಕೊಂಡ ಹೋಟೆಲ್ ಮೇಲೆಯೂ ದಟ್ಟ ಹೊಗೆ ಆವರಿಸಿತ್ತು.




ಪ್ರತಿ ವರ್ಷದ ಚಳಿಗಾಲದಲ್ಲಿ ಕ್ಯಾಲಿಫೋರ್ನಿಯಾದ ದಕ್ಷಿಣ ಒಳಭಾಗದಲ್ಲಿ 'ಸಂತಾ ಆನಾ' ಎಂಬ ಮಾರುತವೊಂದು ಏಳುತ್ತದೆ. ಈ ವೇಳೆ ಗಾಳಿಯಲ್ಲಿ ತೇವಾಂಶ ಇರುತ್ತದೆ. ಆದರೆ, ಈ ಮಾರುತವು ಕ್ಯಾಲಿಫೋರ್ನಿಯಾದ ಕರಾವಳಿ ಭಾಗಕ್ಕೆ ತಲುಪುತ್ತಿದ್ದಂತೆಯೇ ಸುಂಟರಗಾಳಿಯಾಗಿ ಪರಿವರ್ತನೆಗೊಳ್ಳುತ್ತದೆ. ಗಾಳಿಯಲ್ಲಿ ತೇವಾಂಶವೇ ಇರುವುದಿಲ್ಲ. ಒಂದು ಸಣ್ಣ ಕಿಡಿಯನ್ನೂ ಕಾಳ್ಗಿಚ್ಚಾಗಿಸಬಲ್ಲ ಶಕ್ತಿ ಈ ಗಾಳಿಗಿರುತ್ತದೆ. ಈ ಹಿಂದೆಯೂ ಈ ಸುಂಟರ ಗಾಳಿಯ ಕಾರಣಕ್ಕೆ ಹಲವು ಜೀವಗಳು, ಆಸ್ತಿಗಳು ಹಾನಿಗೊಳಗಾಗಿವೆ. ಇದಕ್ಕಾಗಿಯೇ ಇದನ್ನು ರಕ್ಕಸ ಮಾರುತ ಎಂದೂ ಕರೆಯಲಾಗುತ್ತದೆ

30,000 ನಿವಾಸಿಗಳ ಸ್ಥಳಾಂತರ

13,000 ಕಟ್ಟಡಗಳಿಗೆ ಹಾನಿ

1.67 ಲಕ್ಷ ಮಂಗಳವಾರ ಸಂಜೆ ವೇಳೆಗೆ ಲಾಸ್ ಏಂಜಲೀಸ್‌ನಲ್ಲಿ ವಿದ್ಯುತ್ ಸಂಪರ್ಕ ಕಳೆದುಕೊಂಡ ಜನರು



ಸೈಲ್ಮಾರ್ ಬುಧವಾರ ಬೆಳಿಗ್ಗೆ 10ಕ್ಕೆ ಕಾಳ್ಗಿಚ್ಚು ಹೊತ್ತಿಕೊಂಡಿತು **300** ಎಕರೆ ಪ್ರದೇಶ ಆಹುತಿ

ಪೆಸಿಫಿಕ್ ಪ್ಯಾಲಿಸೈಡ್ಸ್ ಮಂಗಳವಾರ ರಾತ್ರಿ 7.30ಕ್ಕೆ ಕಾಳ್ಗಿಚ್ಚು ಹೊತ್ತಿಕೊಂಡಿತು **2,920** ಎಕರೆ ಪ್ರದೇಶ ಆಹುತಿ

● ಸಂತಾ ಆನಾ ಮಾರುತವು ಆರಂಭದಲ್ಲಿ ಗಂಟೆಗೆ **60** ಕಿ.ಮೀ ವೇಗದಲ್ಲಿತ್ತು. ನಂತರದಲ್ಲಿ ಈ ವೇಗವು ಗಂಟೆಗೆ 100 ಕಿ.ಮೀಗೆ ತಲುಪಿತು

ಈಟನ್ ಕೆಯಾನ್ ಮಂಗಳವಾರ ಸಂಜೆ 6.25ಕ್ಕೆ ಕಾಳ್ಗಿಚ್ಚು ಹೊತ್ತಿಕೊಂಡಿತು **2,227** ಎಕರೆ ಪ್ರದೇಶ ಆಹುತಿ

ಆಧಾರ: ಎಪಿ, ರಾಯಿಟರ್ಸ್, 'ದಿ ಗಾರ್ಡಿಯನ್' ಪತ್ರಿಕೆ, ಲಾಸ್ ಏಂಜಲೀಸ್ ಅಗ್ನಿಶಾಮಕ ಇಲಾಖೆ ವೆಬ್‌ಸೈಟ್

ಜೀವ ಉಳಿಸಿಕೊಳ್ಳಲು ಓಡಿದ ಹಾಲಿವುಡ್ ತಾರೆಯರು

ಪೆಸಿಫಿಕ್ ಪ್ಯಾಲಿಸೈಡ್ಸ್ ಪ್ರದೇಶದಲ್ಲಿ ಹಾಲಿವುಡ್‌ನ ನೂರಾರು ತಾರೆಯರು ನೆಲೆಸಿದ್ದಾರೆ. ಭಾರಿ ಮೌಲ್ಯದ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಆದರೆ, ಕಾಳ್ಗಿಚ್ಚಿನ ಕಾರಣ ಇವರಲ್ಲಿ ಹಲವರು ಜೀವ ಉಳಿಸಿಕೊಳ್ಳಲು ತಮ್ಮ ಮನೆಗಳನ್ನು ತೊರೆಯಬೇಕಾಗಿ ಬಂದಿತು. ನಟ ಜೇಮ್ಸ್ ವುಡ್ಸ್ ಅವರು ತಮ್ಮ 'ಎಕ್ಸ್'ನಲ್ಲಿ ವಿಡಿಯೊ ಹಂಚಿಕೊಂಡಿದ್ದಾರೆ. 'ನನ್ನ ಮನೆ ಇದುವರೆಗೂ ಉಳಿದಿದೆ ಎಂದು ಭಾವಿಸಿಕೊಂಡಿದ್ದೇನೆ' ಎಂದು ಬರೆದುಕೊಂಡಿದ್ದಾರೆ.

ಕೆನಡಾ: ಪ್ರಧಾನಿ ಹುದ್ದೆಯ ರೇಸ್‌ನಲ್ಲಿ ಅನಿತಾ ಆನಂದ್

ಒಟ್ಟಾವ (ರಾಯಿಟರ್ಸ್): ಕೆನಡಾದ ಆಡಳಿತಾರೂಢ ಲಿಬರಲ್ ಪಾರ್ಟಿಯು ಪ್ರಧಾನಿ ಜಸ್ಟಿನ್ ಟ್ರುಡೊ ಅವರ ಸ್ಥಾನಕ್ಕೆ ಹೊಸ ನಾಯಕನನ್ನು ಹುಡುಕುವ ಪ್ರಯತ್ನ ಆರಂಭಿಸಿದೆ. ಪ್ರಧಾನಿ ಹುದ್ದೆ ಹಾಗೂ ಲಿಬರಲ್ ಪಾರ್ಟಿಯ ನಾಯಕನ ಸ್ಥಾನಕ್ಕೆ ರಾಜೀನಾಮೆ ನೀಡಲು ಉದ್ದೇ-ಶಿಸಿರುವುದಾಗಿ ಟ್ರುಡೊ ಅವರು ಸೋಮವಾರ ಘೋಷಿಸಿದ್ದರು.

ಲಿಬರಲ್ ಪಾರ್ಟಿಯ ನಾಯಕನ ಆಯ್ಕೆಗೆ ನಡೆಯುವ ಸ್ಪರ್ಧೆಯ ವಿವರಗಳನ್ನು ಪಕ್ಷವು ಬಿಡುಗಡೆ ಮಾಡಿಲ್ಲ. ಆದರೆ ಭಾರತ ಮೂಲದ ಅನಿತಾ ಆನಂದ್ ಸೇರಿದಂತೆ ಹಲವು ಆಕಾಂಕ್ಷಿಗಳ ಹೆಸರು ಮುನ್ನೆಲೆಗೆ ಬಂದಿದೆ. ಸಾರಿಗೆ ಸಚಿರಾಗಿರುವ 57 ವರ್ಷದ ಅನಿತಾ ಅವರು 2019ರಿಂದ ಸಂಸದರಾಗಿದ್ದಾರೆ. ಅವರು ಸಾರ್ವಜನಿಕ ಸೇವೆ ಮತ್ತು ರಾಷ್ಟ್ರೀಯ ರಕ್ಷಣೆ ಖಾತೆಗಳನ್ನೂ ನಿಭಾಯಿಸಿದ್ದಾರೆ. ಖಜಾನೆ ಮಂಡಳಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಮಾಜಿ ಹಣಕಾಸು ಸಚಿವರಾದ ಕ್ರಿಸ್ಟಿಯಾ ಫ್ರೀಲ್ಯಾಂಡ್, ಬ್ಯಾಂಕ್ ಆಫ್ ಕೆನಡಾದ ಮಾಜಿ ಗವರ್ನರ್ ಮಾರ್ಕ್ ಕಾರ್ನಿ, ವಿದೇಶಾಂಗ ಸಚಿವೆ ಮೆಲಾನಿ ಜೋಲಿ ಮತ್ತು ಸಚಿವ ಫ್ರಾಂಸಾಯ್ಸ್ ಫಿಲಿಪೆ ಶಾಂಪೇನ್ ಅವರೂ ಪ್ರಧಾನಿ ಹುದ್ದೆಯ ಆಕಾಂಕ್ಷಿಗಳಾಗಿದ್ದಾರೆ.

ಶಿಕ್ಷೆ ರದ್ದು ಕೋರಿ ಸುಪ್ರೀಂ ಮೊರೆ ಹೋದ ಟ್ರಂಪ್

ವಾಷಿಂಗ್ಟನ್ (ಎಪಿ): ನೀಲಿ ಚಿತ್ರತಾರೆಗೆ ರಹಸ್ಯವಾಗಿ ಹಣ ವರ್ಗಾಯಿಸಿದ್ದ ಪ್ರಕರಣಕ್ಕೆ ಸಂಬಂಧಿಸಿ ಶುಕ್ರವಾರ (ಜನವರಿ 10) ಶಿಕ್ಷೆಯ ಪ್ರಮಾಣ ಪ್ರಕಟಿಸುವುದನ್ನು ರದ್ದು ಮಾಡುವಂತೆ ಕೋರಿ ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬುಧವಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ. ನ್ಯೂಯಾರ್ಕ್‌ನ ಕೋರ್ಟ್ ಶಿಕ್ಷೆ ಪ್ರಕಟಿಸುವ ದಿನಾಂಕವನ್ನು ಮುಂದೂಡಲು ನಿರಾಕರಿಸಿದ ನಂತರ ಟ್ರಂಪ್ ಪರ ವಕೀಲರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

‘ಶೀಷ್ ಮಹಲ್’: ಎಎಪಿ, ಬಿಜೆಪಿ ಸಂಘರ್ಷ

ದೆಹಲಿ ಚುನಾವಣೆ: ಎರಡೂ ಪಕ್ಷಗಳ ಕಾರ್ಯಕರ್ತರಿಂದ ಧರಣಿ, ‘ಬಂಗಲೆ’ ಪ್ರವೇಶಕ್ಕೆ ಅವಕಾಶ ನೀಡದ ಪೊಲೀಸರು

ನವದೆಹಲಿ(ಪಿಟಿಐ): ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಹಾಗೂ ಮುಖ್ಯಮಂತ್ರಿ ಆತಿಶಿ ಅವರಿಗೆ ಹಂಚಿಕೆಯಾಗಿದ್ದ ಬಂಗಲೆ ವಿಚಾರವಾಗಿ ಎಎಪಿ ಮತ್ತು ಬಿಜೆಪಿ ಕಾರ್ಯಕರ್ತರು ರಾಷ್ಟ್ರ ರಾಜಧಾನಿಯಲ್ಲಿ ಬುಧವಾರ ಧರಣಿ ನಡೆಸಿದರಲ್ಲದೇ ಹಲವು ನಾಟಕೀಯ ಬೆಳವಣಿಗೆಗಳೂ ನಡೆದವು.

ಅರವಿಂದ ಕೇಜ್ರಿವಾಲ್ ಅವರಿಗೆ ಈ ಹಿಂದೆ ಹಂಚಿಕೆಯಾಗಿದ್ದ ಫ್ಲ್ಯಾಗ್‌ಸ್ಟಾಫ್ ರಸ್ತೆಯ ನಂ.6 ಬಂಗ್ಲೆಯನ್ನು ಪ್ರವೇಶಿಸಲು ಎಎಪಿ ಕಾರ್ಯಕರ್ತರು ಮುಂದಾದಾಗ, ಪೊಲೀಸರು ಅವರನ್ನು ತಡೆದರು.

ಎಎಪಿ ಮುಖಂಡರಾದ ಸಂಜಯ ಸಿಂಗ್ ಹಾಗೂ ಸೌರಭ ಭಾರದ್ವಾಜ್ ಅವರು ಫ್ಲ್ಯಾಗ್‌ಸ್ಟಾಫ್ ರಸ್ತೆ ಬಂಗ್ಲೆ ಪ್ರವೇಶಿಸಲು ಅನುಮತಿ ನೀಡದ ಪೊಲೀಸರ ಕ್ರಮ ಪ್ರತಿಭಟಿಸಿ, ಬಂಗ್ಲೆ ಎದುರು ಧರಣಿ ಮುಂದುವರಿಸಿದರು.

ಬಿಜೆಪಿಯು ತನ್ನ ವಿರುದ್ಧ ದಾಳಿ ನಡೆಸುವುದಕ್ಕಾಗಿ ‘ಶೀಷ್ ಮಹಲ್’ ವಿಚಾರವನ್ನು ಅಸ್ತ್ರವನ್ನಾಗಿ ಮಾಡಿಕೊಂಡಿದ್ದರಿಂದ, ಫ್ಲ್ಯಾಗ್‌ಸ್ಟಾಫ್ ಬಂಗಲೆಗೆ ಈ ಇಬ್ಬರು ನಾಯಕರು ಮಾಧ್ಯಮ ಪ್ರತಿನಿಧಿಗಳನ್ನು ಕರೆದಿದ್ದರು.



ದೆಹಲಿ ಮುಖ್ಯಮಂತ್ರಿ ಆತಿಶಿ ಅವರ ಅಧಿಕೃತ ನಿವಾಸ ಪ್ರವೇಶಿಸುವುದಕ್ಕೆ ತಡೆ ಒಡ್ಡಿದ ಪೊಲೀಸ್ ಅಧಿಕಾರಿಗಳೊಂದಿಗೆ ಎಎಪಿ ಮುಖಂಡರಾದ ಸಂಜಯ ಸಿಂಗ್, ಸೌರಭ್ ಭಾರದ್ವಾಜ್ ಅವರು ಬುಧವಾರ ಮಾತಿನ ಚಕಮಕಿ ನಡೆಸಿದರು — ಪಿಟಿಐ ಚಿತ್ರ

ಇನ್ನೊಂದೆಡೆ, ಬಂಗ್ಲೆ ಪ್ರವೇಶಿಸಲು ಅನುಮತಿ ನೀಡದ್ದನ್ನು ಪ್ರತಿಭಟಿಸಿದ ಎಎಪಿ ಕಾರ್ಯಕರ್ತರು, ಲೋಕಕಲ್ಯಾಣ ಮಾರ್ಗದಲ್ಲಿರುವ ಪ್ರಧಾನಿಯ ಅಧಿಕೃತ ನಿವಾಸದತ್ತ ಹೊರಟರು. ಆಗಲೂ ಅವರಿಗೆ ಪೊಲೀಸರು ತಡೆಯೊಡ್ಡಿದಾಗ, ಕಾರ್ಯಕರ್ತರು ತುಘಲಕ್ ರಸ್ತೆ ಪೊಲೀಸ್ ಠಾಣೆ ಮುಂದೆ ಧರಣಿ ನಡೆಸಿದರು.

ಇತ್ತ, ಬಿಜೆಪಿ ಕಾರ್ಯಕರ್ತರು, ಮಥುರಾ ರಸ್ತೆಯಲ್ಲಿರುವ ‘ಎಬಿ 17’ ಬಂಗ್ಲೆಗೆ ಮಾಧ್ಯಮ ಪ್ರತಿನಿಧಿಗಳನ್ನು ಕರೆದೊಯ್ದರು.

ಈ ಬಂಗ್ಲೆಯನ್ನು ಆತಿಶಿ ಅವರಿಗೆ ಈಗಾಗಲೇ ಹಂಚಿಕೆ ಮಾಡಲಾಗಿದ್ದರೂ, ಅವರು ಪ್ರತ್ಯೇಕ ಬಂಗಲೆಗೆ ಏಕೆ ಬೇಡಿಕೆ ಇಟ್ಟಿದ್ದಾರೆ ಎಂಬ ಬಗ್ಗೆ ಗಮನ ಸೆಳೆಯುವುದು ಬಿಜೆಪಿ ಉದ್ದೇಶವಾಗಿತ್ತು.

ಈ ವೇಳೆ, ಸುದ್ದಿಗಾರರ ಜೊತೆ ಮಾತನಾಡಿದ ದೆಹಲಿ ಬಿಜೆಪಿ ಮುಖ್ಯಸ್ಥ ವೀರೇಂದ್ರ ಸಚದೇವ್, ‘ಮಾದರಿ ನೀತಿ ಸಂಹಿತ ಜಾರಿಯಲ್ಲಿ ಇರುವಾಗ ಎಎಪಿ ಕಾರ್ಯಕರ್ತರು ಧರಣಿ ನಡೆಸುವ ನಾಟಕ ಮಾಡುತ್ತಿದ್ದಾರೆ’ ಎಂದರು.

ಪ್ರಜಾ ಮತ ಜನತಂತ್ರದ ಹಬ್ಬ

ಕೇಜ್ರಿವಾಲ್ ‘ಶೀಷ್ ಮಹಲ್’ ತೆರವು ಮಾಡಿದ ನಂತರ ಅಲ್ಲಿದ್ದ ‘ಚಿನ್ನದ ಕಮೋಡ್’ ಸೇರಿ ಭಾರಿ ಮೌಲ್ಯದ ವಸ್ತುಗಳು ಕಾಣೆಯಾಗಿವೆ
ವೀರೇಂದ್ರ ಸಚದೇವ್
ದೆಹಲಿ ಬಿಜೆಪಿ ಅಧ್ಯಕ್ಷ

ಪ್ರಧಾನಿ ನಿವಾಸವನ್ನು ₹2,700 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈ ಸತ್ಯ ಬಹಿರಂಗಪಡಿಸುವ ನಮ್ಮ ಯತ್ನಕ್ಕೆ ಕೇಂದ್ರ ಸರ್ಕಾರ ಅಡ್ಡಿಪಡಿಸುತ್ತಿದೆ
ಸಂಜಯ ಸಿಂಗ್
ಎಎಪಿ ರಾಜ್ಯಸಭಾ ಸಂಸದ

ಎಎಪಿ ನಮ್ಮ ಎದುರಾಳಿ: ಕಾಂಗ್ರೆಸ್

ದೆಹಲಿ ವಿಧಾನಸಭೆ ಚುನಾವಣೆಗೆ ದಿನಗಣನೆ ಆರಂಭವಾಗಿರುವಂತೆಯೇ, ‘ಇಂಡಿಯಾ’ ಒಕ್ಕೂಟದ ಅಂಗಪಕ್ಷಗಳಾದ ಎಎಪಿ ಮತ್ತು ಕಾಂಗ್ರೆಸ್ ನಡುವೆ ವಾಗ್ಯುದ್ಧ ತೀವ್ರಗೊಂಡಿದೆ.

‘ಎಎಪಿ ನಮ್ಮ ಎದುರಾಳಿ. ದೆಹಲಿಯಲ್ಲಿ ಎರಡು ಬಾರಿ ಗೆದ್ದಿರುವ ಎಎಪಿ ಇನ್ನೂ ಭ್ರಮೆಯಲ್ಲಿದೆ’ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಹಾಗೂ ರಾಜಸ್ಥಾನ ಮಾಜಿ ಮುಖ್ಯಮಂತ್ರಿ ಅಶೋಕ ಗೆಹಲೋತ್ ಕುಟುಕಿದ್ದಾರೆ. ಪಕ್ಷದ ಪ್ರಣಾಳಿಕೆ ಬಿಡುಗಡೆ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಇದಕ್ಕೆ ತಿರುಗೇಟು ನೀಡಿರುವ ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್, ‘ಕಾಂಗ್ರೆಸ್, ಬಿಜೆಪಿ ಜಂಟಿಯಾಗಿ ಈ ಚುನಾವಣೆ ಎದುರಿಸುತ್ತಿವೆ ಎಂಬುದು ಕಾಂಗ್ರೆಸ್ ನಾಯಕನ ಈ ಸ್ಪಷ್ಟೀಕರಣವೇ ಖಚಿತಪಡಿಸಿದೆ’ ಎಂದಿದ್ದಾರೆ.



ದೆಹಲಿಯಲ್ಲಿ ಕಾಂಗ್ರೆಸ್ ನಾಯಕರು ಆರೋಗ್ಯ ವಿಮೆ ‘ಜೀವನ ರಕ್ಷಾ ಯೋಜನೆ’ಯನ್ನು ಬುಧವಾರ ಪ್ರಕಟಿಸಿದರು. ಎಐಸಿಸಿಯ ದೆಹಲಿ ಉಸ್ತುವಾರಿ ಖಾಜಿ ನಿಜಾಮುದ್ದೀನ್, ದೆಹಲಿ ಕಾಂಗ್ರೆಸ್ ಅಧ್ಯಕ್ಷ ದೇವೇಂದ್ರ ಯಾದವ್, ಹಿರಿಯ ಕಾಂಗ್ರೆಸ್ ನಾಯಕ ಅಶೋಕ ಗೆಹಲೋತ್ ಪಾಲ್ಗೊಂಡಿದ್ದರು — ಪಿಟಿಐ ಚಿತ್ರ

‘₹25 ಲಕ್ಷದ ಆರೋಗ್ಯ ವಿಮೆ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ತಾನು ಅಧಿಕಾರಕ್ಕೆ ಬಂದಲ್ಲಿ ‘ಜೀವನ ರಕ್ಷಾ ಯೋಜನೆ’ಯಡಿ ₹25 ಲಕ್ಷ ಮೊತ್ತದ ಆರೋಗ್ಯ ವಿಮೆ ಒದಗಿಸಲಾಗುವುದು ಎಂದು ಕಾಂಗ್ರೆಸ್ ಬುಧವಾರ ಭರವಸೆ ನೀಡಿದೆ.

ಪಕ್ಷದ ಪ್ರಚಾರ ಕಾರ್ಯಕ್ಕೆ ಚಾಲನೆ ನೀಡುವ ವೇಳೆ, ಯೋಜನೆ ಕುರಿತು ಮಾಹಿತಿ ನೀಡಿದ ಪಕ್ಷದ ಹಿರಿಯ ನಾಯಕ ಹಾಗೂ ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಅಶೋಕ ಗೆಹಲೋತ್, ‘ಈ ಆರೋಗ್ಯ ವಿಮೆ ಯೋಜನೆಯು ‘ಗೇಮ್ ಚೇಂಜರ್’ ಆಗಲಿದೆ’ ಎಂದರು.

‘ಗಂಭೀರ ಆರೋಗ್ಯ ಸಮಸ್ಯೆ, ಆಸ್ಪತ್ರೆಗೆ ದಾಖಲು ವೆಚ್ಚ ಹಾಗೂ ಚಿಕಿತ್ಸೆ ಸೇರಿದಂತೆ ಸಮಗ್ರ ಆರೋಗ್ಯ ರಕ್ಷಣೆಯನ್ನು ಈ ಯೋಜನೆ ನೀಡುವುದು. ಇದು ದೆಹಲಿ ನಿವಾಸಿಗಳ ಆರೋಗ್ಯ ಕುರಿತು ಪಕ್ಷ ಹೊಂದಿರುವ ಬದ್ಧತೆಯನ್ನು ತೋರಿಸುತ್ತದೆ’ ಎಂದು ಹೇಳಿದರು.

‘ಹೋಗಿ ಹರ್ ಜರೂರತ್ ಪೂರಿ, ಕಾಂಗ್ರೆಸ್ ಹೈ ಜರೂರಿ’ ಎಂಬ ಪಕ್ಷದ ಘೋಷಣೆ ಉಳ್ಳ ಫಲಕಗಳನ್ನು, ಈ ಯೋಜನೆ ಪ್ರಕಟಿಸುವ ವೇಳೆ ವ್ಯಾಪಕವಾಗಿ ಪ್ರದರ್ಶಿಸಲಾಗಿತ್ತು.

‘ಬಿಧೂಡಿ ಹೇಳಿಕೆ ಅಸಂಬದ್ಧ’



ನವದೆಹಲಿ (ಪಿಟಿಐ): ಬಿಜೆಪಿಯ ಕಾಲ್ಕಾಜಿ ಕ್ಷೇತ್ರದ ಅಭ್ಯರ್ಥಿ ರಮೇಶ್ ಬಿಧೂಡಿ ಅವರ ಹೇಳಿಕೆಯು ಅಸಂಬದ್ಧವಾಗಿದೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದರು.

ದೆಹಲಿ ಚುನಾವಣೆಯಲ್ಲಿ ಈ ರೀತಿಯ ಅಪ್ರಸ್ತುತ ವಿಚಾರಗಳ ಚರ್ಚೆಯ ಬದಲಿಗೆ ಮಹತ್ವದ ಚರ್ಚೆ ನಡೆಯಬೇಕು ಎಂದರು.

‘ಚುನಾವಣೆಯಲ್ಲಿ ಗೆದ್ದ ಬಳಿಕ, ರಸ್ತೆಗಳನ್ನು ಪ್ರಿಯಾಂಕಾ ಗಾಂಧಿ ಅವರ ‘ಕೆನ್ನೆ’ಗಳ ರೀತಿ ಅಭಿವೃದ್ಧಿ ಪಡಿಸುವೆ ಎಂದು ಬಿಧೂಡಿ ಹೇಳಿದ್ದರು.

‘ಮಹಿಳೆಯ ದೇಹದ ಕುರಿತ ಅಶ್ಲೀಲ ಹೇಳಿಕೆಯೂ ಲೈಂಗಿಕ ದೌರ್ಜನ್ಯ’

ಕೊಚ್ಚಿ (ಪಿಟಿಐ): ಮಹಿಳೆಯರ ದೇಹದ ಬಗ್ಗೆ ಕೆಟ್ಟ ಅಭಿರುಚಿಯ ಹೇಳಿಕೆಗಳನ್ನು ನೀಡುವುದು ಲೈಂಗಿಕ ಕಿರುಕುಳಕ್ಕೆ ಸಮನಾಗಿದ್ದು, ಅದು ಶಿಕ್ಷಾರ್ಹ ಅಪರಾಧ ಎಂದು ಕೇರಳ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.



ತನ್ನ ವಿರುದ್ಧ ಅದೇ ಸಂಸ್ಥೆಯ ಮಹಿಳಾ ಸಿಬ್ಬಂದಿಯೊಬ್ಬರು ದಾಖಲಿಸಿರುವ ಲೈಂಗಿಕ ಕಿರುಕುಳ ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿ ಕೇರಳ ರಾಜ್ಯ ವಿದ್ಯುತ್ ಮಂಡಳಿಯ (ಕೆಎಸ್‌ಇಬಿ) ಮಾಜಿ ಉದ್ಯೋಗಿಯೊಬ್ಬರು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸುವ ಸಂದರ್ಭದಲ್ಲಿ ನ್ಯಾಯಮೂರ್ತಿ ಎ.ಬದರುದ್ದೀನ್ ಅವರು ಈ ತೀರ್ಪು ನೀಡಿದ್ದಾರೆ.

‘ಆರೋಪಿಯು 2013ರಿಂದಲೂ ನನ್ನ ವಿರುದ್ಧ ಅಶ್ಲೀಲ ಪದಗಳನ್ನು ಬಳಸಿದ್ದಾರೆ. 2016–17ರ ಬಳಿಕ ಕೆಟ್ಟದಾಗಿ ಸಂದೇಶಗಳನ್ನು ಕಳುಹಿಸಲು ಮತ್ತು ದೂರವಾಣಿ ಕರೆ ಮಾಡಿ ಅಸಭ್ಯವಾಗಿ ಮಾತನಾಡಲು ಶುರು ಮಾಡಿದ್ದಾರೆ. ಕೆಎಸ್‌ಇಬಿಗೆ ಮತ್ತು ಪೊಲೀಸರಿಗೆ ದೂರು ನೀಡಿದರೂ ಕಿರುಕುಳ ಮುಂದುವರಿಸಿದ್ದ’ ಎಂದು ಮಹಿಳೆ ಆರೋಪಿಸಿದ್ದರು.

ಮಹಿಳೆಯ ದೂರಿನಂತೆ ಆರೋಪಿ ವಿರುದ್ಧ ಐಪಿಸಿಯ ಕಲಂ 354ಎ (ಲೈಂಗಿಕ ಕಿರುಕುಳ) ಮತ್ತು 509 (ಮಹಿಳೆಯರ ಘನತೆಗೆ ಚ್ಯುತಿ) ಅಡಿ ಪ್ರಕರಣ ದಾಖಲಿಸಲಾಗಿತ್ತು.

ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿದ್ದ ಆರೋಪಿ, ‘ವ್ಯಕ್ತಿಯೊಬ್ಬರು ಆಕರ್ಷಕ ದೇಹ ರಚನೆ ಹೊಂದಿದ್ದಾರೆ ಎನ್ನುವುದು ಐಪಿಸಿಯ ಕಲಂ 354ಎ, 509 ಮತ್ತು ಕೇರಳ ಪೊಲೀಸ್ ಕಾಯ್ದೆಯ ಕಲಂ 120 (ಒ) ಅಡಿಯಲ್ಲಿ ಲೈಂಗಿಕ ದೌರ್ಜನ್ಯದ ವ್ಯಾಪ್ತಿಗೆ ಬರುವುದಿಲ್ಲ’ ಎಂದು ವಾದಿಸಿದ್ದ.

ಎರಡು ಮಸೂದೆಗಳ ಪರಿಶೀಲನೆ ಕುರಿತ ಜಂಟಿ ಸಂಸದೀಯ ಸಮಿತಿಯ ಮೊದಲ ಸಭೆ

ಒಂದು ಚುನಾವಣೆ: ಭಿನ್ನ ಮಾತು, ಬಿಸಿ ಚರ್ಚೆ

ನವದೆಹಲಿ (ಪಿಟಿಐ): ‘ಒಂದು ರಾಷ್ಟ್ರ, ಒಂದು ಚುನಾವಣೆ’ ಕುರಿತ ಎರಡು ಮಸೂದೆಗಳ ಪರಿಶೀಲನೆಗೆ ರಚನೆ ಆಗಿರುವ ಜಂಟಿ ಸಂಸದೀಯ ಸಮಿತಿಯ ಮೊದಲ ಸಭೆ ಬುಧವಾರ ಬಿರುಸಿನ ಚರ್ಚೆಗೆ ಸಾಕ್ಷಿಯಾಯಿತು.

ಏಕ ಚುನಾವಣೆ ಕಲ್ಪನೆಯು ಒಕ್ಕೂಟ ವ್ಯವಸ್ಥೆ ಮತ್ತು ಸಂವಿಧಾನದ ಮೂಲ ಆಶಯದ ಮೇಲಿನ ದಾಳಿ ಎಂದು ವಿಪಕ್ಷಗಳ ಸದಸ್ಯರು ಟೀಕಿಸಿದರೆ, ಬಿಜೆಪಿಯವರು ‘ಇದು, ‘ಜನಮತದ ಕನ್ನಡಿ’ ಎಂದು ಪ್ರತಿಪಾದಿಸಿದರು.

ಜಂಟಿ ಸಂಸದೀಯ ಸಮಿತಿಯು ವಿವಿಧ ಪಕ್ಷಗಳ 39 ಸದಸ್ಯರು ಸಭೆಯಲ್ಲಿ ಅಭಿಪ್ರಾಯಗಳನ್ನು ದಾಖಲಿಸದರು. ಕಾಂಗ್ರೆಸ್‌ನ ಪ್ರಿಯಾಂಕಾ ಗಾಂಧಿ, ಪ್ರತಿಪಕ್ಷಗಳ ಸದಸ್ಯರು ಒಂದೇ ಬಾರಿ ಚುನಾವಣೆಯಿಂದ ವೆಚ್ಚ ತಗ್ಗಲಿದೆ ಎಂಬ ಪ್ರತಿಪಾದನೆ ಕುರಿತು ಶಂಕೆ ವ್ಯಕ್ತಪಡಿಸಿದರು. ‘2004ರಲ್ಲಿ ಲೋಕಸಭೆಯ ಎಲ್ಲ ಸ್ಥಾನಗಳಿಗೆ ಒಂದೇ ಬಾರಿ ಇವಿಎಂ ಬಳಸಿ ಚುನಾವಣೆ ನಡೆದಿತ್ತು. ಇದರ ಖರ್ಚಿನ ಲೆಕ್ಕ ಇದೆಯೇ?’ ಎಂದರು.

ಒಂದು ರಾಷ್ಟ್ರ, ಒಂದು ಚುನಾವಣೆ ಪ್ರಸ್ತಾಪ ಸಂವಿಧಾನದ ಮೌಲ್ಯಗಳಿಗೆ ಪೂರಕವಾಗಿದೆ. ಹಲವು ರಾಜ್ಯಗಳ ವಿಧಾನಸಭೆಯನ್ನು ಅವಧಿಪೂರ್ವ ವಿಸರ್ಜಿಸಿ, ಲೋಕಸಭೆಯ ಜೊತೆಗೆ ಚುನಾವಣೆ ನಡೆಸುವ ಗುರಿಯನ್ನು ಹೊಂದಿದೆ. ವೆಚ್ಚ ತಗ್ಗಲಿದೆ ಎಂದು ಬಿಜೆಪಿ ಸದಸ್ಯರು ಸಮರ್ಥಿಸಿಕೊಂಡರು ಎಂದು ಮೂಲಗಳು ತಿಳಿಸಿವೆ.

1957ರಲ್ಲಿ ಅವಧಿಪೂರ್ವದಲ್ಲಿ 7 ರಾಜ್ಯಗಳ ವಿಧಾನಸಭೆಗಳನ್ನು ವಿಸರ್ಜಿಸಲಾಗಿತ್ತು. ‘ಆಗಿನ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್, ನೆಹರೂ ಸರ್ಕಾರದಲ್ಲಿದ್ದ ಹಲವು ಪ್ರಮುಖರು ಸಂವಿಧಾನವನ್ನು ಉಲ್ಲಂಘಿಸಿದ್ದರೆ?’ ಎಂದು ಬಿಜೆಪಿಯ ಸಂಜಯ್ ಜೈಸ್ವಾಲ್ ಪ್ರಶ್ನಿಸಿದರು.

‘ಮಾಜಿ ರಾಷ್ಟ್ರಪತಿ ಕೋವಿಂದ್ ನೇತೃತ್ವದ ಸಮಿತಿ ಸುಮಾರು 25 ಸಾವಿರ ಜನರ ಅಭಿಪ್ರಾಯ ಆಲಿಸಿದ್ದು, ಹೆಚ್ಚಿನವರು ಏಕಕಾಲದಲ್ಲಿ ಚುನಾವಣೆಗೆ ಬೆಂಬಲಿಸಿದ್ದಾರೆ’ ಎಂದು ಬಿಜೆಪಿಯ ವಿ.ಡಿ. ಶರ್ಮಾ ಹೇಳಿದರು.

ಏಕಕಾಲದ ಚುನಾವಣೆಯಿಂದ ಪ್ರಾದೇಶಿಕ ಪಕ್ಷಗಳು ಕಡೆಗಣನೆಗೆ ಒಳಗಾಗುತ್ತವೆ. ಸ್ಥಳೀಯ ವಿಷಯಗಳು ಚರ್ಚೆಗೆ ಬರುವುದಿಲ್ಲ
ವಿ.ವಿಜಯಸಾಯಿ ರೆಡ್ಡಿ, ವೈಎಸ್‌ಆರ್ ಕಾಂಗ್ರೆಸ್

ಮತಪೆಟ್ಟಿಗೆಯನ್ನೇ ಕಸಿಯುವ ಘಟನೆಗಳು ಬಿಹಾರದಲ್ಲಿ ನಡೆದಿವೆ. ಮತಪತ್ರಗಳನ್ನು ಮತ್ತೆ ಬಳಸುವ ಕ್ರಮವನ್ನು ಜಾರಿಗೊಳಿಸುವುದು ತರವಲ್ಲ
ಸಂಜಯ್ ಝಾ, ಜೆಡಿಯು

ಏಕ ಚುನಾವಣೆಯ ಮೂಲಕ ಹಣ ಉಳಿಸುವುದಕ್ಕಿಂತಲೂ ಜನರ ಪ್ರಜಾಸತ್ತಾತ್ಮಕವಾದ ಹಕ್ಕುಗಳ ಎತ್ತಿ ಹಿಡಿಯುವುದೇ ಹೆಚ್ಚು ಮುಖ್ಯವಾಗಬೇಕು
ಕಲ್ಯಾಣ್ ಬ್ಯಾನರ್ಜಿ, ಟಿಎಂಸಿ ಸದಸ್ಯ



‘18 ಸಾವಿರ ಪುಟಗಳ ದಾಖಲೆ’

ಜಂಟಿ ಸಂಸದೀಯ ಸಮಿತಿ ಮೊದಲ ಸಭೆಯಲ್ಲಿ ಎಲ್ಲ ಸದಸ್ಯರಿಗೆ ಮಸೂದೆಗಳ ಕರಡು ಸೇರಿದಂತೆ ಒಟ್ಟು 18 ಸಾವಿರ ಪುಟಗಳಿದ್ದ ಟ್ರಾಲಿ ನೀಡಲಾಯಿತು.

ರಾಮನಾಥ ಕೋವಿಂದ್ ಸಮಿತಿಯ ಹಿಂದಿ ಮತ್ತು ಇಂಗ್ಲಿಷ್ ಅವತರಣಿಕೆಯ ವರದಿ, ವಿವಿಧ ಅನುಬಂಧಗಳ 21 ಸಂಪುಟಗಳು ಇದರಲ್ಲಿ ಸೇರಿದ್ದವು.

ಹೊಸ ಎತ್ತರಕ್ಕೆ ಇಸ್ರೊ: ನಾರಾಯಣನ್

ಪ್ರಜಾವಾಣಿ ವಾರ್ತೆ

ತಿರುವನಂತಪುರ: ‘ಗಗನಯಾನ ಸೇರಿದಂತೆ ಹಲವಾರು ಬಾಹ್ಯಾಕಾಶ ಕಾರ್ಯಕ್ರಮಗಳು ಪ್ರಗತಿಯಲ್ಲಿರುವ ಈ ವೇಳೆ ಸಂಸ್ಥೆಯ ಚುಕ್ಕಾಣಿ ಹಿಡಿಯಲಿದ್ದೇನೆ. ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಮತ್ತಷ್ಟು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಭರವಸೆ ಹೊಂದಿದ್ದೇನೆ’ ಎಂದು ಇಸ್ರೊ ನೂತನ ಅಧ್ಯಕ್ಷರಾಗಿ ನೇಮಕಗೊಂಡಿರುವ ವಿ. ನಾರಾಯಣನ್ ಬುಧವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಇಸ್ರೊದ ಇಡೀ ತಂಡದ ಬೆಂಬಲದೊಂದಿಗೆ ಸಂಸ್ಥೆಯ ಖ್ಯಾತಿ ಹೆಚ್ಚಿಸಬಲ್ಲೆ ಎಂಬ ವಿಶ್ವಾಸ ಹೊಂದಿದ್ದೇನೆ’ ಎಂದರು.

ನಾರಾಯಣನ್ ಅವರು ರಾಕೆಟ್ ಪ್ರೊಪಲ್ಷನ್ ಹಾಗೂ ಕ್ರಯೊಜನಿಕ್ಸ್ ತಜ್ಞ.



ನಾರಾಯಣನ್

ಇಸ್ರೊದಲ್ಲಿ ಕಳೆದ ನಾಲ್ಕು ದಶಕಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಚಂದ್ರಯಾನ ಕಾರ್ಯಕ್ರಮದ ರಾಕೆಟ್‌ನಲ್ಲಿ ಬಳಸಿದ್ದ ವಿಶಿಷ್ಟ ವ್ಯವಸ್ಥೆಗಳನ್ನು ನಾರಾಯಣನ್ ನೇತೃತ್ವದ ತಂಡ ಅಭಿವೃದ್ಧಿಪಡಿಸಿದೆ.

‘ಚಂದ್ರಯಾನ–2’ರ ಗಗನನೌಕೆಯ ‘ಸಾಫ್ಟ್‌ಲ್ಯಾಂಡಿಂಗ್’ ವಿಫಲಗೊಂಡಿದ್ದಕ್ಕೆ ಕಾರಣಗಳನ್ನು ಪತ್ತೆ ಮಾಡುವುದು ಹಾಗೂ ‘ಚಂದ್ರಯಾನ–3’ ಕಾರ್ಯಕ್ರಮದ ವೇಳೆ, ಇಂತಹ ದೋಷಗಳು ಕಂಡುಬರದಂತೆ ಪರಿಹಾರ ಕ್ರಮಗಳನ್ನು ಶಿಫಾರಸು ಮಾಡಲು ನೇಮಿಸಿದ್ದ ರಾಷ್ಟ್ರ ಮಟ್ಟದ ತಜ್ಞರ ಸಮಿತಿಯ ನೇತೃತ್ವವನ್ನು ಕೂಡ ನಾರಾಯಣನ್ ವಹಿಸಿದ್ದರು.

ತಮಿಳುನಾಡಿನ ಕನ್ಯಾಕುಮಾರಿ ಮೂಲದ ನಾರಾಯಣನ್, ಮೆಕಾನಿಕಲ್ ಎಂಜಿನಿಯರಿಂಗ್ ಡಿಪ್ಲೊಮಾದಲ್ಲಿ ಪ್ರಥಮ ರ‍್ಯಾಂಕ್‌ನೊಂದಿಗೆ ತೇರ್ಗಡೆಯಾದರು.

ಆರಂಭದಲ್ಲಿ ಮದ್ರಾಸ್ ರಬ್ಬರ್ ಫ್ಯಾಕ್ಟರಿ ನಂತರ ಬಿ ಎ ಚ್ ಇ ಎ ಲ್ ನ ಲ್ಲಿ ಸೇವೆ ಸಲ್ಲಿಸಿದ ನಾರಾಯಣನ್, 1984ರಲ್ಲಿ ಇಸ್ರೊಗೆ ಸೇರಿದರು.

ನಂತರ, ಎಎಂಐಇಯಿಂದ ಕ್ರಯೊಜನಿಕ್ ಎಂಜಿನಿಯರಿಂಗ್‌ನಲ್ಲಿ ಮೊದಲ ರ‍್ಯಾಂಕ್ ಪಡೆದ ಅವರು, ಏರೋಸ್ಪೇಸ್ ಎಂಜಿನಿಯರಿಂಗ್‌ನಲ್ಲಿ ಪಿ.ಎಚ್‌ಡಿ ಪದವಿ ಪಡೆದಿದ್ದಾರೆ.

ಲೈಂಗಿಕ ಕಿರುಕುಳ ಆರೋಪ ಉದ್ಯಮಿ ‘ಬೋಚೆ’ ಬಂಧನ

ಪ್ರಜಾವಾಣಿ ವಾರ್ತೆ/ ಪಿಟಿಐ

ತಿರುವನಂತಪುರ: ಬಹುಭಾಷಾ ನಟಿ ಹನಿ ರೋಸ್ ಅವರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇರೆಗೆ ಚೆಮ್ಮನ್ನೂರ್ ಜುವೆಲ್ಲರ್ಸ್‌ನ ಮಾಲೀಕ ಬಾಬಿ ಚೆಮ್ಮನ್ನೂರ್ ಅಲಿಯಾಸ್ ‘ಬೋಚೆ’ ಅವರನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ರೋಸ್ ಅವರು ಕೊಚ್ಚಿ ಸಿಟಿ ಪೊಲೀಸ್ ಠಾಣೆಯಲ್ಲಿ ಮಂಗಳವಾರ ದೂರು ದಾಖಲಿಸಿದ್ದರು. ನಿರೀಕ್ಷಣಾ ಜಾಮೀನು ಪಡೆಯುವ ಯತ್ನದಲ್ಲಿದ್ದ ಚೆಮ್ಮನ್ನೂರ್ ಅವರನ್ನು ವಯನಾಡ್‌ನ ಅವರ ತೋಟದಲ್ಲಿ ಎಸ್‌ಐಟಿ ಪೊಲೀಸರು ಬಂಧಿಸಿದ್ದಾರೆ. ಅವರನ್ನು ಕೊಚ್ಚಿ ನ್ಯಾಯಾಲಯದ ಮುಂದೆ ಹಾಜರುಪಡಿಸುವ ಸಾಧ್ಯತೆಯಿದೆ.



ಚೆಮ್ಮನ್ನೂರ್

ಬೋಚೆ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಕಲಂ 75 ಸೇರಿದಂತೆ ವಿವಿಧ ಜಾಮೀನು ರಹಿತ ಕಲಂಗಳಡಿ ಪ್ರಕರಣ ದಾಖಲಾಗಿದೆ.

ದೂರು ದಾಖಲಿಸಿದ ಬೆನ್ನಲ್ಲೇ ಪೊಲೀಸರು ತ್ವರಿತವಾಗಿ ಕ್ರಮ ತೆಗೆದುಕೊಂಡಿದ್ದಕ್ಕೆ ನಟಿ ರೋಸ್ ಸಂತಸ ವ್ಯಕ್ತಪಡಿಸಿದ್ದಾರೆ. ‘ಪದೇ ಪದೇ ನನ್ನ ವಿರುದ್ಧ ಅವಹೇಳನಕಾರಿ ಟೀಕೆಗಳನ್ನು ಮಾಡುತ್ತಿದ್ದ ವ್ಯಕ್ತಿ ವಿರುದ್ಧ ಪೊಲೀಸರು ಕ್ರಮ ತೆಗೆದುಕೊಂಡಿರುವುದು ನೆಮ್ಮದಿ ತರಿಸಿದೆ’ ಎಂದಿದ್ದಾರೆ.

ಸಿಇಸಿ ನೇಮಕ: ಫೆ. 4ಕ್ಕೆ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಮತ್ತು ಚುನಾವಣಾ ಆಯುಕ್ತರ (ಇ.ಸಿ) ನೇಮಕವನ್ನು 2023ರಲ್ಲಿ ರೂಪಿಸಿದ ಕಾಯ್ದೆಗೆ ಅನುಗುಣವಾಗಿ ನಡೆಸಿದ್ದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಫೆ.4ರಂದು ನಡೆಸಲು ಸುಪ್ರೀಂ ಕೋರ್ಟ್ ಬುಧವಾರ ತೀರ್ಮಾನಿಸಿದೆ.

ಹಾಲಿ ಸಿಇಸಿ ರಾಜೀವ್ ಕುಮಾರ್ ಅವರು ಫೆಬ್ರುವರಿ 18ರಂದು ನಿವೃತ್ತರಾಗಲಿದ್ದಾರೆ, ಹೊಸ ಕಾಯ್ದೆಯ ಅಡಿಯಲ್ಲಿ ಇನ್ನೊಬ್ಬರು ಸಿಇಸಿ ನೇಮಕ ಆಗಲಿದೆ. ಈ ವಿಚಾರದಲ್ಲಿ ಕೋರ್ಟ್ ಮಧ್ಯಪ್ರವೇಶ ಮಾಡಬೇಕು ಎಂದು ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರು ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ದೀಪಾಂಕರ್ ದತ್ತ ಮತ್ತು ಉಜ್ವಲ್ ಭೂಯಾನ್ ಅವರು ಇರುವ ತ್ರಿಸದಸ್ಯ ಪೀಠಕ್ಕೆ ಮನವಿ ಮಾಡಿದರು.

ಸಿಇಸಿ ಮತ್ತು ಇ.ಸಿ. ನೇಮಕಕ್ಕೆ ಪ್ರಧಾನಿ, ವಿರೋಧ ಪಕ್ಷದ ನಾಯಕ ಮತ್ತು ಸಿಜೆಐ ಇರುವ ಸಮಿತಿಯನ್ನು ಸುಪ್ರೀಂ ಕೋರ್ಟ್ 2023ರ ಮಾರ್ಚ್‌ನ ತೀರ್ಪಿನ ಮೂಲಕ ರಚಿಸಿತ್ತು. ಆದರೆ 2023ರ ಡಿಸೆಂಬರ್‌ನಲ್ಲಿ ಕೇಂದ್ರವು ‘ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಚುನಾವಣಾ ಆಯುಕ್ತರ (ನೇಮಕ, ಸೇವಾ ಷರತ್ತುಗಳು ಮತ್ತು ಅಧಿಕಾರ ಅವಧಿ) ಕಾಯ್ದೆ–2023’ನ್ನು ರೂಪಿಸಿತು. ಹೊಸ ಕಾಯ್ದೆಯು ಸಮಿತಿಯಲ್ಲಿ ಸಿಜೆಐ ಬದಲಿಗೆ, ಕೇಂದ್ರ ಸಚಿವರೊಬ್ಬರನ್ನು ಸದಸ್ಯರನ್ನಾಗಿಸಿದೆ ಎಂದು ಭೂಷಣ್ ವಿವರಿಸಿದರು.

ಈ ರೀತಿ ಮಾಡಿರುವುದು ಸುಪ್ರೀಂ ಕೋರ್ಟ್‌ನ ತೀರ್ಪಿಗೆ ವಿರುದ್ಧ. ಆಯುಕ್ತರ ನೇಮಕದ ಮೇಲೆ ಸರ್ಕಾರಕ್ಕೆ ನಿಯಂತ್ರಣ ಇರುವುದರಿಂದ ಪ್ರಜಾತಂತ್ರಕ್ಕೆ ಬೆದರಿಕೆ ಎದುರಾಗುತ್ತದೆ ಎಂದು ಭೂಷಣ್ ಹೇಳಿದರು.

ಯಾವುದಕ್ಕೆ ಹೆಚ್ಚು ಬೆಲೆ?



ಸಂವಿಧಾನದ 141ನೆಯ ವಿಧಿಯ ಅಡಿಯಲ್ಲಿ ಕೋರ್ಟ್ ಹೇಳುವ ಮಾತಿಗೆ ಹೆಚ್ಚಿನ ಬೆಲೆ ಇರುತ್ತದೆಯೋ ಅಥವಾ ಶಾಸನ ರೂಪಿಸುವ ಶಾಸಕಾಂಗದ ಅಧಿಕಾರಕ್ಕೆ ಹೆಚ್ಚಿನ ಬೆಲೆ ಇರುತ್ತದೆಯೋ ಎಂಬುದನ್ನು ಪರಿಶೀಲಿಸಬೇಕಿದೆ.
ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠ



ಮೈಸೂರು ಜಿಲ್ಲಾ ಕಿವುಡರ ಸಂಘ ಆಯೋಜಿಸಿದ್ದ ಶ್ರವಣದೋಷವುಳ್ಳವರ 25ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ವಿವೇಕ್ ಭಾಸ್ಕರ್ ವಾಟ್ಪಡೆ (ಮಹಾರಾಷ್ಟ್ರ), ಕೆ. ಯಶಸ್ವೀ (ಕರ್ನಾಟಕ), ಅಂಕಿತ್ ಗಂಗೂಲಿ (ಪಶ್ಚಿಮ ಬಂಗಾಳ) ಹಾಗೂ ವೈ.ಎಸ್.ಶ್ರೇಯ (ಕರ್ನಾಟಕ). ಪ್ರಜಾವಾಣಿ ಚಿತ್ರ/ಅನೂಪ್ ರಾಘು.ಟಿ.

ಮಹಿಳಾ ವಿಭಾಗದಲ್ಲಿ ಕರ್ನಾಟಕದ ಯಶಸ್ವಿ ಚಾಂಪಿಯನ್

ಚೆಸ್: ವಿವೇಕ್, ಅಂಕಿತ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೈಸೂರು: ಮಹಾರಾಷ್ಟ್ರದ ವಿವೇಕ್ ಭಾಸ್ಕರ್ ವಾಟಪಾಡೆ ಇಲ್ಲಿನ ನಿತ್ಯಾನಂದ ಕಲ್ಯಾಣ ಮಂಟಪದಲ್ಲಿ ನಡೆದ ಶ್ರವಣದೋಷವುಳ್ಳವರ 25ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನ ಮುಕ್ತ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ಜೂನಿಯರ್ ವಿಭಾಗದಲ್ಲಿ ಪಶ್ಚಿಮ ಬಂಗಾಳದ ಅಂಕಿತ್ ಗಂಗೂಲಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಒಂಬತ್ತು ಸುತ್ತುಗಳ ಹಣಾಹಣಿಯಲ್ಲಿ ವಿವೇಕ್ ಭಾಸ್ಕರ್ ಎಂಟು ಅಂಕಗಳೊಂದಿಗೆ ಅಗ್ರಸ್ಥಾನಕ್ಕೇರಿದರು. ಬುಧವಾರ ಮಧ್ಯಾಹ್ನ ನಡೆದ ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಆಂಧ್ರಪ್ರದೇಶದ ನಾಗ ವೆಂಕಟ ಶ್ರೀರಾಮ್ ಎದುರು ಕಪ್ಪು ಕಾಯಿಗಳೊಂದಿಗೆ ಕಣಕ್ಕೆ ಇಳಿದಿದ್ದ ಅವರು ಜಯಗಳಿಸಿ ಚಾಂಪಿಯನ್ ಪಟ್ಟ ಖಾತ್ರಿಪಡಿಸಿಕೊಂಡರು. ಪ್ರಶಸ್ತಿಯೊಟ್ಟಿಗೆ ₹25 ಸಾವಿರ ನಗದು ಬಹುಮಾನ ತಮ್ಮದಾಗಿಸಿಕೊಂಡರು.

25 ವರ್ಷ ವಯಸ್ಸಿನ ವಿವೇಕ್, ಕಳೆದ ಡಿಸೆಂಬರ್‌ನಲ್ಲಿ ಮಲೇಷ್ಯಾದ ಕೌಲಾಲಂಪುರದಲ್ಲಿ ನಡೆದಿದ್ದ 10ನೇ ಏಷ್ಯಾ ಪೆಸಿಫಿಕ್ ಶ್ರವಣದೋಷವುಳ್ಳವರ ಕ್ರೀಡಾಕೂಟದ ಚೆಸ್ ವಿಭಾಗದಲ್ಲಿ ಮಿಶ್ರ ರ‍್ಯಾಪಿಡ್ ಸ್ಪರ್ಧೆಯಲ್ಲಿ ಭಾರತಕ್ಕೆ ಕಂಚಿನ ಪದಕ ತಂದುಕೊಟ್ಟಿದ್ದರು.

ಮುಕ್ತ ವಿಭಾಗದಲ್ಲಿ ಮಹಾರಾಷ್ಟ್ರದವರೇ ಆದ ದೇವೇಂದ್ರ ಶ್ರೀಹರಿ ವೈದ್ಯ 7.5 ಅಂಕಗಳೊಂದಿಗೆ ರನ್ನರ್ ಅಪ್ ಆದರು. ಅಂತಿಮ ಸುತ್ತಿನಲ್ಲಿ ಅವರು ಒಡಿಶಾದ ನಿಪುಣ್ ಆದಿತ್ಯ ಮೊಹಾಂತಿ ಎದುರು ಡ್ರಾ ಮಾಡಿಕೊಂಡರು.

ಯಶಸ್ವಿಗೆ ಪ್ರಶಸ್ತಿ: ಮುಕ್ತ ವಿಭಾಗದಲ್ಲಿ ಪುರುಷರಿಗೆ ಸ್ಪರ್ಧೆ ಒಡ್ಡಿದ್ದ ಮಹಿಳಾ ಪಟುಗಳಿಗೆ ಪ್ರತ್ಯೇಕವಾಗಿ ಪ್ರಶಸ್ತಿ ನೀಡಲಾಯಿತು. ಒಟ್ಟು 6.5 ಅಂಕಗಳೊಂದಿಗೆ ಕರ್ನಾಟಕದ ಕೆ. ಯಶಸ್ವಿ ಮೊದಲ ಸ್ಥಾನ ಪಡೆದು ₹25 ಸಾವಿರ ನಗದು ಜೊತೆ ಟ್ರೋಫಿ ಎತ್ತಿ ಹಿಡಿದರು. ಕರ್ನಾಟಕದವರೇ ಆದ ಅಂಬಿಕಾ ಮಸಗಿ (6 ಅಂಕ) ದ್ವಿತೀಯ ಹಾಗೂ ಪಂಜಾಬ್‌ನ ಮಲ್ಲಿಕಾ ಹಂಡ ತೃತೀಯ ಸ್ಥಾನ ಪಡೆದರು.

ಜೂನಿಯರ್ ವಿಭಾಗದಲ್ಲಿ (18 ವರ್ಷ ಒಳಗಿನವರು) ಪಶ್ಚಿಮ ಬಂಗಾಳದ ಅಂಕಿತ್ ಗಂಗೂಲಿ ಚಾಂಪಿಯನ್ ಕಿರೀಟ ಧರಿಸಿದರು. ಏಳು ಸುತ್ತುಗಳ ಹಣಾಹಣಿಯಲ್ಲಿ ಎಲ್ಲ ಪಂದ್ಯಗಳನ್ನೂ ಗೆದ್ದು ಅಮೋಘ ಸಾಧನೆ ದಾಖಲಿಸಿದರು.

ಜೂನಿಯರ್ ಬಾಲಕರ ವಿಭಾಗದಲ್ಲಿ ಪುದುಚೇರಿಯ ಎ.ರೋಷನ್ (5 ಅಂಕ) ದ್ವಿತೀಯ ಹಾಗೂ ಕರ್ನಾಟಕದ ಎಸ್.ಅನುಭವ್ (5 ಅಂಕ) ತೃತೀಯ ಸ್ಥಾನ ಪಡೆದರು.

ಜೂನಿಯರ್ ವಿಭಾಗದ ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನ ನೀಡಿದ ಕರ್ನಾಟಕದ ವೈ.ಎಸ್. ಶ್ರೇಯಾ 6 ಅಂಕಗಳೊಂದಿಗೆ ಬಾಲಕಿಯರ ವಿಭಾಗದಲ್ಲಿ ಮೊದಲ ಸ್ಥಾನ ತಮ್ಮದಾಗಿಸಿಕೊಂಡರು. ಕೇರಳದ ನಿಖಿತಾ ಸುಸಾನ್ ಮ್ಯಾಥ್ಯು (4.5 ಅಂಕ) ಎರಡನೇ ಮತ್ತು ಹರಿಯಾಣದ ಭಾವಿ ಸಿಂಗ್ (4 ಅಂಕ) ಮೂರನೇ ಸ್ಥಾನ ಪಡೆದರು.

ನ್ಯೂಜಿಲೆಂಡ್ ಕ್ರಿಕೆಟಿಗ ಮಾರ್ಟಿನ್ ಗಪ್ಟಿಲ್ ನಿವೃತ್ತಿ

ಆಕ್ಲೆಂಡ್ (ಪಿಟಿಐ): ನ್ಯೂಜಿಲೆಂಡ್ ತಂಡದ ಬ್ಯಾಟರ್ ಮಾರ್ಟಿನ್ ಗಪ್ಟಿಲ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಬುಧವಾರ ವಿದಾಯ ಹೇಳಿದ್ದಾರೆ.

ಕಿವೀಸ್ ತಂಡದ ಕ್ರಿಕೆಟ್ ಶ್ರೇಷ್ಠ ಬ್ಯಾಟರ್‌ಗಳಲ್ಲಿ ಒಬ್ಬರಾಗಿರುವ ಗಪ್ಟಿಲ್ ಭಾರತದ ಕ್ರಿಕೆಟಿಗರಿಗೆ ನೆನಪಿನಲ್ಲಿ ಉಳಿಯುವುದು 2019ರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಅವರ ಫೀಲ್ಡಿಂಗ್ ಕೈಚಳಕದ ಮೂಲಕ.

ಇಂಗ್ಲೆಂಡ್‌ನಲ್ಲಿ ನಡೆದಿದ್ದ ಟೂರ್ನಿಯ ಸೆಮಿಫೈನಲ್‌ನಲ್ಲಿ ಮಾರ್ಟಿನ್ ನೇರ ಥ್ರೋನಿಂದಾಗಿ ಮಹೇಂದ್ರಸಿಂಗ್ ಧೋನಿ ರನ್‌ಔಟ್ ಆಗಿದ್ದರು. ಅದರೊಂದಿಗೆ ಭಾರತದ ಜಯದ ಆಸೆಯೂ ಕಮರಿತ್ತು.

ಗಪ್ಟಿಲ್ ಅವರು 2009ರಲ್ಲಿ ಸೆಡಾನ್ ಪಾರ್ಕ್‌ನಲ್ಲಿ ನಡೆದಿದ್ದ ಟೆಸ್ಟ್ ಪಂದ್ಯದಲ್ಲಿ ಭಾರತದ ವಿರುದ್ಧ ಪದಾರ್ಪಣೆ ಮಾಡಿದ್ದರು. 2016ರಲ್ಲಿ ಅವರು ತಮ್ಮ ಕೊನೆಯ ಟೆಸ್ಟ್ ಪಂದ್ಯವನ್ನು ಭಾರತದ ವಿರುದ್ಧ ಆಡಿದ್ದರು. ಅದೂ ಇಂದೋರಿನ ಹೋಳ್ಕರ್ ಮೈದಾನದಲ್ಲಿ.

ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಅವರು 2022ರವರೆಗೂ ಸಕ್ರಿಯರಾಗಿದ್ದರು. ನಂತರ ಅವರಿಗೆ ಕಿವೀಸ್ ತಂಡದಲ್ಲಿ ಸ್ಥಾನ ಲಭಿಸಿರಲಿಲ್ಲ.

‘ಬಾಲ್ಯದಿಂದಲೂ ನ್ಯೂಜಿಲೆಂಡ್ ತಂಡದಲ್ಲಿ ಆಡುವ ಕನಸು ಕಂಡಿದ್ದೆ. ನಾನು ಬಹಳ ಅದೃಷ್ಟಶಾಲಿ. ಅದು ನನಸಾಗಿದೆ. ಒಟ್ಟು 367 ಪಂದ್ಯಗಳಲ್ಲಿ ದೇಶವನ್ನು ಪ್ರತಿನಿಧಿಸುವ ಅವಕಾಶ ಲಭಿಸಿತು’ ಎಂದು 38 ವರ್ಷದ ಮಾರ್ಟಿನ್ ಅವರು ನ್ಯೂಜಿಲೆಂಡ್ ಕ್ರಿಕೆಟ್‌ಗೆ ನೀಡಿರುವ ವಿದಾಯಪತ್ರದಲ್ಲಿ ಉಲ್ಲೇಖಿಸಿದ್ದಾರೆ.



ಬಲಗೈ ಬ್ಯಾಟರ್ ಮಾರ್ಟಿನ್ ಅವರು ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಪದಾರ್ಪಣೆ ಪಂದ್ಯದಲ್ಲಿ ಶತಕ ಗಳಿಸಿದ್ದರು. 2015ರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ದ್ವಿಶತಕ ಗಳಿಸಿದ್ದರು. ಈ ಎರಡೂ ಸಾಧನೆಗಳನ್ನು ಮಾಡಿದ ನ್ಯೂಜಿಲೆಂಡ್ ತಂಡದ ಮೊದಲ ಬ್ಯಾಟರ್ ಅವರಾಗಿದ್ದರು.

‘ಗಪ್ಟಿಲ್ ಅವರ ನಿವೃತ್ತಿ ಜೀವನವು ಸುಖಕರವಾಗಿರಲಿ. ಅವರೊಬ್ಬ ನಿಜವಾದ ಮ್ಯಾಚ್ ವಿನ್ನರ್. ಅವರೊಂದಿಗೆ ಇನಿಂಗ್ಸ್ ಆರಂಭಿಸುವ ಅದೃಷ್ಟ ನನ್ನದಾಗಿತ್ತು. ಹಲವು ದಿನಗಳು ಅವರೊಂದಿಗೆ ಆಡಿದ್ದೇನೆ. ಅವರ ಕೆಲವು ಅವಿಸ್ಮರಣೀಯ ಇನಿಂಗ್ಸ್‌ಗಳನ್ನು ಸಮೀಪದಿಂದ ನೋಡಿದ್ದೇನೆ’ ಎಂದು ಕಿವೀಸ್ ತಂಡದ ನಾಯಕ ಟಾಮ್ ಲೇಥಮ್ ಹೇಳಿದ್ದಾರೆ.

ಮಾರ್ಟಿನ್ ಅವರು ಫ್ರ್ಯಾಂಚೈಸಿ ಲೀಗ್ ಕ್ರಿಕೆಟ್‌ನಲ್ಲಿ ತಮ್ಮ ಆಟ ಮುಂದುವರಿಸುವರು.

ಮಾದರಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ಟೆಸ್ಟ್	47	2586	189	3	17
ಏಕದಿನ	198	7346	237*	18	39
ಟಿ20	122	3531	105	2	20
ಐಪಿಎಲ್	13	270	50	-	1

ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್: ಕಪಿಲಾ, ಕ್ರಾಸ್ಟೊ ಜೋಡಿ ಮುನ್ನಡೆ

ಪ್ರಿ ಕ್ವಾರ್ಟರ್‌ಗೆ ಪ್ರಣಯ್, ಮಾಳವಿಕಾ

ಕೌಲಾಲಂಪುರ (ಪಿಟಿಐ): ಭಾರತದ ಎರಡನೇ ಶ್ರೇಯಾಂಕದ ಆಟಗಾರ ಎಚ್‌.ಎಸ್‌. ಪ್ರಣಯ್ ಮತ್ತು ಉದಯೋನ್ಮುಖ ಆಟಗಾರ್ತಿ ಮಾಳವಿಕಾ ಬನ್ಸೊಡ್ ಅವರು ಇಲ್ಲಿ ನಡೆಯುತ್ತಿರುವ ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪ್ರಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.


ಎಚ್‌.ಎಸ್‌. ಪ್ರಣಯ್

ಪುರುಷರ ವಿಭಾಗದ ಮೊದಲ ಸುತ್ತಿನಲ್ಲಿ ಪ್ರಣಯ್ 21-12, 17-21, 21-15 ರಿಂದ ಕೆನಡಾದ ಬ್ರಯನ್ ಯಾಂಗ್ ವಿರುದ್ಧ ಜಯಿಸಿದರು.

ಈ ಪಂದ್ಯವು ಮಂಗಳವಾರ ಆಯೋಜನೆಯಾಗಿತ್ತು. ಆದರೆ ಎರಡನೇ ಗೇಮ್‌ನಲ್ಲಿ 11-9ರಲ್ಲಿ ಆಟ ನಡೆಯುತ್ತಿದ್ದ ಸಂದರ್ಭದಲ್ಲಿ ಮಳೆ ಬಂದ ಕಾರಣ ಬ್ಯಾಡ್ಮಿಂಟನ್ ಅಂಕಣದ ಚಾವಣಿ ಸೋರಿಕೆಯಾಗಿತ್ತು. ಅದರಿಂದಾಗಿ ಅರ್ಧಕ್ಕೆ ನಿಲ್ಲಿಸಲಾಗಿತ್ತು. ಬುಧವಾರ ಮುಂದುವರಿಸಲಾಯಿತು.

ಎರಡನೇ ಗೇಮ್‌ನಲ್ಲಿ ಕೆನಡಾ ಆಟಗಾರ ಮೇಲುಗೈ ಸಾಧಿಸಿದರು. ಇದರಿಂದಾಗಿ ಮೂರನೇ ಮತ್ತು ನಿರ್ಣಾಯಕ ಗೇಮ್ ಕುತೂಹಲ ಕೆರಳಿಸಿತ್ತು. ಅದರಲ್ಲಿ ಪ್ರಣಯ್ ಆರು ಅಂಕಗಳ ಅಂತರದಿಂದ ಜಯಿಸಿದರು.

ಪ್ರಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಪ್ರಣಯ್ ಅವರು ಚೀನಾದ ಶಿ ಫೆಂಗ್ ಲೀ ವಿರುದ್ಧ ಸೆಣಸುವರು. ಚೀನಾದ ಆಟಗಾರ ಅರ್ಹತಾ ಸುತ್ತಿನ ಪಂದ್ಯದಲ್ಲಿ 21-11, 21-16ರಿಂದ ಪ್ರಿಯಾಂಶು ರಾಜಾವತ್ ಅವರನ್ನು ಮಣಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ಮಾಳವಿಕಾ 21-15, 21-16ರಿಂದ ಸ್ಥಳೀಯ ಆಟಗಾರ್ತಿ ಗೊಹಾ ಜಿನ್ ವೀ ವಿರುದ್ಧ ಗೆದ್ದರು. 45 ನಿಮಿಷಗಳ ಹೋರಾಟದಲ್ಲಿ ಮಾಳವಿಕಾ ನೇರ ಗೇಮ್‌ಗಳಲ್ಲಿ ಜಯಸಾಧಿಸಿದರು.

ಭಾರತದ ಆಟಗಾರರ ಇನ್ನುಳಿದ ಫಲಿತಾಂಶಗಳು; ಮಿಶ್ರ ಡಬಲ್ಸ್‌ನಲ್ಲಿ ಧ್ರುವ ಕಪಿಲಾ ಮತ್ತು ತನಿಷಾ ಕ್ರಾಸ್ಟೊ 21-13, 21-14ರಿಂದ ದಕ್ಷಿಣ ಕೊರಿಯಾದ ಸಂಗ್ ಯೂನ್ ಮತ್ತು ಹೇ ವೊನ್ ಇಯಾಮ್ ವಿರುದ್ಧಗೆದ್ದರು. ಮುಂದಿನ ಸುತ್ತಿನಲ್ಲಿ ಭಾರತದ ಜೋಡಿಯು ಚೀನಾದ ಏಳನೇ ಶ್ರೇಯಾಂಕದ ಸಿಂಗ್ ಚೆಂಗ್ ಮತ್ತು ಚೀ ಝಾಂಗ್ ಜೋಡಿಯನ್ನು ಎದುರಿಸಲಿದೆ.

ಇನ್ನೊಂದು ಪಂದ್ಯದಲ್ಲಿ ಸತೀಶ ಕುಮಾರ್ ಕರುಣಾಕರನ್ ಮತ್ತು ಆದ್ಯಾ ವಾರಿಯತ್ 21-13 21-15ರಿಂದ ಅಶಿತ್ ಸೂರ್ಯ ಮತ್ತು ಅಮೃತಾ ಪ್ರಮುಥೇಶ್ ವಿರುದ್ಧ ಜಯಿಸಿದರು.

ಮಹಿಳೆಯರ ಡಬಲ್ಸ್‌ನಲ್ಲಿ ಋತುಪರ್ಣಾ ಮತ್ತು ಶ್ವೇತ ಪರ್ಣಾ ಪಂಡಾ 17–21, 10–21ರಿಂದ ಥಾಯ್ಲೆಂಡ್‌ನ ಬೆನಿಯಾಪಾ ಮತ್ತು ನನಟಾಕರ್ಣ್ ಏಮಸರ್ಡ್ ಅವರಿಗೆ ಮಣಿದರು.

ವೀಕ್ಷಕ ವಿವರಣೆಗಾರ ರವಿಶಾಸ್ತ್ರಿ ಅಭಿಪ್ರಾಯ

'ರೋಹಿತ್, ಕೊಹ್ಲಿ ರಣಜಿ ಆಡಲಿ'

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಅನುಭವಿ ಆಟಗಾರರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡಬೇಕು ಎಂದು ವೀಕ್ಷಕ ವಿವರಣೆಗಾರ ರವಿಶಾಸ್ತ್ರಿ ಹೇಳಿದ್ದಾರೆ.

ಈಚೆಗೆ ಆಸ್ಟ್ರೇಲಿಯಾದಲ್ಲಿ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಭಾರತ ತಂಡವು 1–3ರಿಂದ ಸೋತಿತ್ತು. ಕೊನೆಯ ಟೆಸ್ಟ್ ನಂತರದ ಪತ್ರಿಕಾಗೋಷ್ಠಿಯಲ್ಲಿ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು, 'ಆಟಗಾರರು ರಾಷ್ಟ್ರೀಯ ತಂಡದಿಂದ ಬಿಡುವು ಲಭಿಸಿದಾಗ ದೇಶಿ ಟೂರ್ನಿಗಳಲ್ಲಿ ಆಡಬೇಕು'ಎಂದು ಹೇಳಿದ್ದರು. ರೋಹಿತ್ ಮತ್ತು ವಿರಾಟ್ ಅವರು ಈ ಸರಣಿಯಲ್ಲಿ ಸತತ ವೈಫಲ್ಯ ಅನುಭವಿಸಿದ್ದರು. ಇದರಿಂದಾಗಿ


ರವಿ ಶಾಸ್ತ್ರಿ

ಬಹಳಷ್ಟು ಟೀಕೆಗಳಿಗೂ ಅವರು ಗುರಿಯಾಗಿದ್ದಾರೆ. ಆದ್ದರಿಂದ ಅವರು ದೇಶಿ ಟೂರ್ನಿಗಳಲ್ಲಿ ಆಡಿ ಲಯಕ್ಕೆ ಮರಳಬೇಕು ಎಂದು ರವಿಶಾಸ್ತ್ರಿ ಪ್ರತಿಪಾದಿಸಿದ್ದಾರೆ.

'ಅವರಿಗೆ ಇನ್ನೊಂದು ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಆಡುವ ಮುನ್ನ ಸಮಯಾವಕಾಶವಿದ್ದರೆ, ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡಬೇಕು. ಎರಡು ಕಾರಣಗಳಿಗಾಗಿ ದೇಶಿ ಟೂರ್ನಿಯಲ್ಲಿ ಆಡಬೇಕು. ಮೊದಲನೆಯದ್ದು ಪ್ರಸಕ್ತ ಯುವ ಪೀಳಿಗೆಯ ಆಟಗಾರರೊಂದಿಗೆ ಬೆರೆತು ಅವರಿಗೆ ನಿಮ್ಮ ಅನುಭವ ಹಂಚಿಕೊಳ್ಳಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಹೆಚ್ಚಿನ ಅವಧಿಯಲ್ಲಿ ಸ್ಪಿನ್ ಬೌಲಿಂಗ್ ಎದುರಿಸಬಹುದು' ಎಂದು ಶಾಸ್ತ್ರಿ ಅವರು ಐಸಿಸಿ ರಿವೀವ್ ಕಾರ್ಯಕ್ರಮದಲ್ಲಿ ಹೇಳಿದರು.

ವಿರಾಟ್ ಮತ್ತು ರೋಹಿತ್ ಅವರ ಟೆಸ್ಟ್ ಕ್ರಿಕೆಟ್ ಭವಿಷ್ಯದ ಕುರಿತು ಪ್ರತಿಕ್ರಿಯಿಸಿದ ಅವರು, 'ಮುಂಬರುವ ಟೂರ್ನಿಗಳಲ್ಲಿ (ಇಂಗ್ಲೆಂಡ್ ಎದುರಿನ ಏಕದಿನ ಕ್ರಿಕೆಟ್ ಸರಣಿ, ಚಾಂಪಿಯನ್ಸ್ ಟ್ರೋಫಿ) ಅವರು ಹೇಗೆ ಆಡಲಿದ್ದಾರೆಂಬುದು ಮುಖ್ಯವಾಗಲಿದೆ. ಸಾಧನೆಯ ಹಸಿವು ಬಹಳ ಮುಖ್ಯ. ಒಬ್ಬರಿಗೆ 36, ಇನ್ನೊಬ್ಬರಿಗೆ 38 ವರ್ಷ ವಯಸ್ಸಾಗಿದೆ. ಅವರಿಗೆ ತಮ್ಮ ಹಸಿವಿನ ಬಗ್ಗೆ ಗೊತ್ತಿರುತ್ತದೆ. ತಾವು ಸಾಕಷ್ಟು ಸಾಧಿಸಿದ್ದೇವೆ ಎಂದು ಅಂದುಕೊಂಡರೆ ಹೊರನಡೆಯಬಹುದು' ಎಂದು ಹೇಳಿದರು.

ವಿಜಯ್ ಹಜಾರೆ ಕ್ರಿಕೆಟ್: ಪ್ರಿಕ್ವಾರ್ಟರ್ ಫೈನಲ್ ಇಂದು

ವಡೋದರಾ: ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯಗಳು ಗುರುವಾರ ನಡೆಯಲಿವೆ.

ಮೋತಿಭಾಗ್ ಕ್ರೀಡಾಂಗಣದಲ್ಲಿ ರಾಜಸ್ಥಾನ ಮತ್ತು ತಮಿಳುನಾಡು ಮುಖಾಮುಖಿಯಾಗಲಿವೆ. ಕೊತಂಬಿ ಕ್ರೀಡಾಂಗಣದಲ್ಲಿ ನಡೆಯುವ ಇನ್ನೊಂದು ಪಂದ್ಯದಲ್ಲಿ ಹರಿಯಾಣ ಮತ್ತು ಬಂಗಾಳ ತಂಡಗಳು ಹಣಾಹಣಿ ನಡೆಸಲಿವೆ. ಇನ್ನೆರಡು ಪ್ರೀ ಕ್ವಾರ್ಟರ್ ಫೈನಲ್‌ಗಳು ಶನಿವಾರ ನಡೆಯಲಿವೆ. ಜ.12ರಂದು ಕ್ವಾರ್ಟರ್‌ಫೈನಲ್, 15 ಹಾಗೂ 16ರಂದು ಸೆಮಿಫೈನಲ್ ಮತ್ತು 18ರಂದು ಫೈನಲ್ ನಡೆಯಲಿವೆ.

ಕರ್ನಾಟಕಕ್ಕೆ ಸೋಲು

ಬೆಂಗಳೂರು: ಕರ್ನಾಟಕ ಮಹಿಳಾ ತಂಡ, ಗುಜರಾತ್‌ನ ಭಾವನಗರದಲ್ಲಿ ನಡೆಯುತ್ತಿರುವ 74ನೇ ರಾಷ್ಟ್ರೀಯ ಸೀನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಇಂಡಿಯನ್ ರೈಲ್ವೇಸ್ ತಂಡದ ಎದುರು 33–83 ಪಾಯಿಂಟ್‌ಗಳ ಭಾರಿ ಸೋಲು ಅನುಭವಿಸಿತು.

ಫಲಿತಾಂಶ: ಮಹಿಳೆಯರು: ಇಂಡಿಯನ್ ರೈಲ್ವೇಸ್ 83 (ವೈಷ್ಣವಿ ಯಾದವ್ 13, ಸಥಿಯಾ ಸೆಂಥಿಲ್‌ಕುಮಾರ್ 12, ದರ್ಶಿನಿ 11, ಸತ್ಯಾ ಕೆ 10); ಕರ್ನಾಟಕ 33 (ಸುಪ್ರೀತಾ ಸಿ.ಎನ್. 12, ರುತ್ ಅನ್ನಾ ಬ್ಲೆಸೆನ್ 11).

ನ್ಯೂಜಿಲೆಂಡ್‌ಗೆ ಜಯ, ಸರಣಿ ವಶ

ಹ್ಯಾಮಿಲ್ಟನ್: ಶ್ರೀಲಂಕಾದ ಅಗ್ರ ಬ್ಯಾಟಿಂಗ್ ಬೆನ್ನೆಲುಬು ಮುರಿದ ಆತಿಥೇಯ ನ್ಯೂಜಿಲೆಂಡ್ ತಂಡ, ಮಳೆಯಿಂದ ಮೊಟಕುಗೊಂಡ ಎರಡನೇ ಏಕದಿನ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು 113 ರನ್ ಗಳಿಂದ ಸೋಲಿಸಿತು. ಮೂರು ಪಂದ್ಯಗಳ ಸರಣಿಯನ್ನು ಒಂದು ಪಂದ್ಯ ಉಳಿದಿರುವಂತೆ 2–0ಯಿಂದ ಕೈವಶ ಮಾಡಿಕೊಂಡಿತು.

ಶ್ರೀಲಂಕಾದ ಸ್ಪಿನ್ನರ್ ಮಹೀಷ ತೀಕ್ಷಣ ಹ್ಯಾಟ್ರಿಕ್ ಪಡೆದರು. 35ನೇ ಓವರಿನ ಕೊನೆಯ ಎರಡು ಎಸೆತಗಳಲ್ಲಿ ಅವರು ಕ್ರಮವಾಗಿ ಮಿಚೆಲ್ ಸ್ಯಾಂಟ್ನರ್ ಮತ್ತು ನಥಾನ್ ಸ್ಮಿತ್ ಅವರ ವಿಕೆಟ್‌ಗಳನ್ನು ಪಡೆದರು. ಕೊನೆಯ ಓವರಿನ ಮೊದಲ ಎಸೆತದಲ್ಲಿ ಮ್ಯಾಟ್ ಹೆನ್ರಿ ಅವರ ವಿಕೆಟ್ ಗಳಿಸಿ ಹ್ಯಾಟ್ರಿಕ್ ಪೂರೈಸಿದರು.

ಸ್ಕೋರುಗಳು: ನ್ಯೂಜಿಲೆಂಡ್: 37 ಓವರುಗಳಲ್ಲಿ 9 ವಿಕೆಟ್‌ಗೆ 255 (ರಚಿನ್ ರವೀಂದ್ರ 79, ಮಾರ್ಕ್ ಚಾಪ್ಮನ್ 62, ಡೇರಿಲ್ ಮಿಚೆಲ್ 38; ಮಹೀಷ ತೀಕ್ಷ್ಣ 44ಕ್ಕೆ4, ವನೀಂದು ಹಸರಂಗ 39ಕ್ಕೆ2); ಶ್ರೀಲಂಕಾ: 30.2 ಓವರುಗಳಲ್ಲಿ 142 (ಕಮಿಂದು ಮೆಂಡಿಸ್ 64; ಜಾಕೋಬ್ ಡಫಿ 30ಕ್ಕೆ2, ವಿಲ್ ಓ ರೂರ್ಕಿ 31ಕ್ಕೆ3). ಪಂದ್ಯದ ಆಟಗಾರ: ರಚಿನ್ ರವೀಂದ್ರ.

ಬೆಂಗಳೂರು ಯುನೈಟೆಡ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡ 4–1 ಗೋಲುಗಳಿಂದ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಎಫ್‌ಸಿ ರಿಯಲ್ ಬೆಂಗಳೂರು ವಿರುದ್ಧ ಭರ್ಜರಿ ಗೆಲುವು ಸಾಧಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡದ ಜೆರ್ರಿ ಓನೆಸ್‌ಮಸ್ ಪಲೆಟ್ (1ನೇ ಮತ್ತು 55ನೇ ನಿ.) ಗೋಲುಗಳನ್ನು ಹೊಡೆದರು.


ಗೋಲು ಹೊಡೆದು ಸಂಭ್ರಮಿಸಿದ ಯುನೈಟೆಡ್ ತಂಡದ ಜೆರ್ರಿ
ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಇನ್ನೊಂದು ಪಂದ್ಯದಲ್ಲಿ ಎಚ್‌ಎಎಲ್ ಎಫ್‌ಸಿ ತಂಡ 1–0 ಗೋಲಿನಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಮಣಿಸಿತುಎಚ್‌ಎಎಲ್ ತಂಡದ ವಾರಿಸ್ ಅಹಮದ್ ಭಟ್ (90 + 6ನೇ ನಿ) ಒಂದು ಗೋಲು ಹೊಡೆದು ಗೆಲುವಿನ ರೂವಾರಿಯಾದರು.

ಮೂರನೇ ಪಂದ್ಯದಲ್ಲಿ ಕೊಡಗು ಎಫ್‌ಸಿ ತಂಡ 3–2 ಗೋಲುಗಳಿಂದ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವನ್ನು ಸೋಲಿಸಿತು.

ಕೊಡಗು ಎಫ್‌ಸಿ ತಂಡದ ಟಿ. ಜೇಮ್ಸ್ (36ನೇ ನಿ) ಮತ್ತು ಆದಿತ್ಯ ಪ್ರತಾಪ್ ಸಿಂಗ್ ರಾಥೋರ್ (61ನೇ, 64ನೇ ನಿ.) ಗೋಲುಗಳನ್ನು ಹೊಡೆದರು. ಸ್ಪೋರ್ಟಿಂಗ್ ಸ್ಕೋರರ್ ತಂಡದ ತರುಣ್ ಕುಮಾರ್ (75ನೇ ನಿ.) ಒಂದು ಗೋಲು ಬಾರಿಸಿದರು.

ಡ್ರ್ಯಾಗನ್ಸ್‌ಗೆ ಗೆಲುವು

ರೂರ್ಕೆಲಾ (ಪಿಟಿಐ): ಪಂದ್ಯದಲ್ಲಿ ಜಿಪ್ ಯಾನ್ಸನ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ತಮಿಳುನಾಡು ಡ್ರ್ಯಾಗನ್ಸ್ ತಂಡ ಹಾಕಿ ಇಂಡಿಯಾ ಲೀಗ್ (ಎಚ್‌ಐಎಲ್) ಪಂದ್ಯದಲ್ಲಿ ಬುಧವಾರ 6–5 ಗೋಲುಗಳಿಂದ ಟೀಮ್ ಗೊನಾಸಿಕ ತಂಡವನ್ನು ಸೋಲಿಸಿತು.

ಈ ಗೆಲುವಿನಿಂದ ಡ್ರ್ಯಾಗನ್ಸ್ 4 ಪಂದ್ಯಗಳಿಂದ 9 ಪಾಯಿಂಟ್ಸ್ ಸಂಗ್ರಹಿಸಿ ಲೀಗ್‌ನಲ್ಲಿ ಎರಡನೇ ಸ್ಥಾನಕ್ಕೇರಿದೆ.

ನಿಧನ ವಾರ್ತೆ

ರವಿಶಂಕರ್

ಬೆಂಗಳೂರು: ಕರ್ನಾಟಕ ರಾಜ್ಯ ಮಾಜಿ ಚೆಸ್ ಚಾಂಪಿಯನ್, ವೆಟರನ್ಸ್ ಆಟಗಾರ ಎಸ್‌. ಎನ್‌. ರವಿಶಂಕರ್ (71) ಅವರು ಹೃದಯಾಘಾತದಿಂದ ಬುಧವಾರ ಬೆಳಿಗ್ಗೆ ನಿಧನರಾದರು.


ಎಸ್‌.ಎನ್‌. ರವಿಶಂಕರ್

ರಾಷ್ಟ್ರೀಯ ಮಾಜಿ 'ಎ' ಮತ್ತು 'ಬಿ' ಆಟಗಾರರಾಗಿದ್ದ ಅವರು 1989–90ರಲ್ಲಿ ರಾಜ್ಯ ಚೆಸ್ ಚಾಂಪಿಯನ್ ಆಗಿದ್ದರು. ಕೆನರಾ ಬ್ಯಾಂಕ್‌ನ ಅಧಿಕಾರಿಯಾಗಿ ನಿವೃತ್ತರಾಗಿದ್ದರು. ಚೆಸ್‌ನ ಎಂಡ್‌ಗೇಮ್ ಪರಿಣತರಾಗಿದ್ದ ಅವರು ಇತ್ತೀಚಿನವರೆಗೂ ಸಕ್ರಿಯರಾಗಿದ್ದು ವೆಟರನ್ಸ್ ವಿಭಾಗದಲ್ಲಿ ಆಡುತ್ತಿದ್ದರು. ಎರಡು ತಿಂಗಳ ಹಿಂದೆ ಕೋಯಿಕೋಡ್‌ನಲ್ಲಿ ನಡೆದ ಟೂರ್ನಿಯಲ್ಲಿ ಬೆಸ್ಟ್ ವೆಟರನ್ ಆಟಗಾರ ಪ್ರಶಸ್ತಿ ಪಡೆದಿದ್ದರು.

ಲಯೊನೆಲ್

ಬೆಂಗಳೂರು: ಕರ್ನಾಟಕ ಫುಟ್‌ಬಾಲ್ ತಂಡದ ಖ್ಯಾತನಾಮ ಆಟಗಾರರಾಗಿದ್ದ ಎಸ್‌.ಪಿ. ಲಯೊನೆಲ್ (81) ಮಂಗಳವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಪುತ್ರಿ ಇದ್ದಾರೆ.




1964ರಲ್ಲಿ ನಡೆದ ಜೂನಿಯರ್ ರಾಷ್ಟ್ರೀಯ ಟೂರ್ನಿಯಲ್ಲಿ ಲಯೊನೆಲ್ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದರು. 1966ರಲ್ಲಿ ಸಂತೋಷ್ ಟ್ರೋಫಿ ಟೂರ್ನಿಯಲ್ಲಿ ಕರ್ನಾಟಕ ಸೀನಿಯರ್ ತಂಡವನ್ನು ಪ್ರತಿನಿಧಿಸಿದ್ದರು.

ಅವರು ಐಟಿಐ ಮತ್ತು ಎಚ್‌ಎಎಲ್‌ನಲ್ಲಿಯೂ ಆಡಿದ್ದರು. ಕೋಲ್ಕತ್ತದ ಮೊಹಮ್ಮಡನ್ ಸ್ಪೋರ್ಟಿಂಗ್ ತಂಡದಲ್ಲಿಯೂ ಮಿಂಚಿದ್ದರೆಂದು ಬಿಡಿಎಫ್‌ಎ ತಿಳಿಸಿದೆ.

ಬೂಮ್ರಾ ಜೊತೆ ವಾಗ್ವಾದ: ವಿಷಾದ

ವಿರಾಟ್ ಕೊಹ್ಲಿ ತಮ್ಮ ಬಾಲ್ಯದ ಹೀರೊ ಎಂದ ಯುವ ಬ್ಯಾಟರ್ ಸ್ಯಾಮ್

ಸಿಡ್ನಿ (ಪಿಟಿಐ): ಬಾರ್ಡರ್–ಗಾವಸ್ಕರ್ ಟೆಸ್ಟ್ ಸರಣಿಯಲ್ಲಿ ಆಸ್ಟ್ರೇಲಿಯಾ ತಂಡದಲ್ಲಿ ಪದಾರ್ಪಣೆ ಮಾಡಿದ ಸ್ಯಾಮ್ ಕಾನ್‌ಸ್ಟಸ್ ಅವರು ತಮ್ಮ ಬ್ಯಾಟಿಂಗ್ ಜೊತೆಗೆ ಭಾರತದ ಆಟಗಾರರೊಂದಿಗೆ ನಡೆಸಿದ ಮಾತಿನ ಚಕಮಕಿಯಿಂದಲೂ ಗಮನ ಸೆಳೆದರು.


ಸ್ಯಾಮ್ ಕಾನ್‌ಸ್ಟಸ್

ಸರಣಿಯ ಐದನೇ ಟೆಸ್ಟ್ ಪಂದ್ಯದ ಮೊದಲ ದಿನದಾಟದ ಕೊನೆಯ ಓವರ್‌ನಲ್ಲಿ ಭಾರತದ ವೇಗಿ ಜಸ್‌ಪ್ರೀತ್ ಬೂಮ್ರಾ ಅವರೊಂದಿಗೆ ನಡೆಸಿದ್ದ ವಾಗ್ವಾದದ ಕುರಿತು ಸ್ಯಾಮ್ 'ವಿಷಾದ' ವ್ಯಕ್ತಪಡಿಸಿದ್ದಾರೆ. ವಿರಾಟ್ ಕೊಹ್ಲಿ ಅವರು ತಮ್ಮ 'ನೆಚ್ಚಿನ ಆಟಗಾರ' ಎಂದೂ ಹೇಳಿದ್ದಾರೆ.

'ಆ ದಿನ ನಾನು ಕೊನೆಯ ಓವರ್‌ನಲ್ಲಿ ಹೆಚ್ಚು ಸಮಯ ವ್ಯಯಿಸಲು ಪ್ರಯತ್ನಿಸಿದೆ. ಅದರಿಂದಾಗಿಯೇ ಬೂಮ್ರಾ ಜೊತೆಗೆ ವಾಗ್ವಾದ ನಡೆಯಿತು. ಭಾರತಕ್ಕೆ ಆ ದಿನ ಮತ್ತೊಂದು ಓವರ್ ಸಿಗದಂತೆ ಮಾಡಬೇಕು ಎಂಬುದು ನನ್ನ ಉದ್ದೇಶವಾಗಿತ್ತು. ಆದರೆ ಕೊನೆಗೂ ಬೂಮ್ರಾ ಅವರೇ ಯಶಸ್ವಿಯಾದರು' ಎಂದು ಸ್ಯಾಮ್ ಹೇಳಿದರು.

'ಬೂಮ್ರಾ ವಿಶ್ವದರ್ಜೆಯ ಬೌಲರ್' ಎಂದು ಸ್ಯಾಮ್ ಶ್ಲಾಘಿಸಿದರು.

'ವಿರಾಟ್ ಕೊಹ್ಲಿ ಅವರು ನನ್ನ ಅಚ್ಚುಮೆಚ್ಚಿನ ಆಟಗಾರ. ಅವರ ಎದುರು ಆಡಿದ್ದು ನನಗೆ ಸಂದ ದೊಡ್ಡ ಗೌರವ. ಆ ದಿನ ಪಂದ್ಯದ ನಂತರ ಅವರನ್ನು ಭೇಟಿಯಾಗಿ ಮಾತನಾಡಿದೆ. ಅವರೇ ನನ್ನ ಬಾಲ್ಯದ ಹೀರೊ ಎಂದೂ ಹೇಳಿದೆ. ಅವರು ಬ್ಯಾಟಿಂಗ್ ಮಾಡುವಾಗ ಪ್ರೇಕ್ಷಕರ ಗ್ಯಾಲರಿಯಲ್ಲಿ ಹರ್ಷೋದ್ಗಾರಗಳು ಕೇಳಿಬರುತ್ತಿದ್ದವು. ನಾನು ಕೂಡ ಅವರ ಬ್ಯಾಟಿಂಗ್ ಅನ್ನು ಬೆರಗಿನಿಂದಲೇ ನೋಡುತ್ತಿದ್ದೆ' ಎಂದರು.

'ಕೊಹ್ಲಿ ಅವರು ಬಹಳ ಸರಳ ವ್ಯಕ್ತಿ. ಅವರೂ ನನ್ನೊಂದಿಗೆ ಸೌಜನ್ಯದಿಂದ ಮಾತನಾಡಿದರು. ನನ್ನ ಭವಿಷ್ಯವು ಚೆನ್ನಾಗಿ ರೂಪುಗೊಳ್ಳಲಿ ಎಂದು ಹಾರೈಸಿದರು. ಮುಂಬರಲಿರುವ ಶ್ರೀಲಂಕಾ ಎದುರಿನ ಸರಣಿಯಲ್ಲಿ ಚೆನ್ನಾಗಿ ಆಡೆಂದರು' ಎಂದು ಸ್ಯಾಮ್ ಹೇಳಿದರು.

ಮೆಲ್ಬರ್ನ್‌ನಲ್ಲಿ ನಡೆದ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯದಲ್ಲಿ 19 ವರ್ಷದ ಸ್ಯಾಮ್ ಪದಾರ್ಪಣೆ ಮಾಡಿದ್ದರು. ಬೂಮ್ರಾ ಬೌಲಿಂಗ್‌ನಲ್ಲಿ ಎರಡು ಸಿಕ್ಸರ್ ಗಳಿಸಿದ್ದರು. ಅದೇ ಪಂದ್ಯದಲ್ಲಿ ಕೊಹ್ಲಿ ಅವರು ಸ್ಯಾಮ್‌ಗೆ ಭುಜ ತಾಗಿಸಿದ್ದರು. ಅದಕ್ಕಾಗಿ ಕೊಹ್ಲಿಗೆ ದಂಡ ಕೂಡ ಹಾಕಲಾಗಿತ್ತು.

ಸಿಡ್ನಿ ಕ್ರೀಡಾಂಗಣ ಪಿಚ್ 'ತೃಪ್ತಿಕರ'

ಸಿಡ್ನಿ (ಪಿಟಿಐ): ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮೊದಲ ನಾಲ್ಕು ಪಂದ್ಯಗಳು ನಡೆದ ಪಿಚ್‌ಗಳನ್ನು ಅತ್ಯುತ್ತಮ ಮತ್ತು ಕೊನೆಯ ಪಂದ್ಯ ನಡೆದ ಸಿಡ್ನಿ ಅಂಗಳವನ್ನು ತೃಪ್ತಿಕರ ಎಂದು ಐಸಿಸಿಯು ಶ್ರೇಯಾಂಕ ನೀಡಿದೆ.

ಈ ಸರಣಿಯಲ್ಲಿ ಆತಿಥೇಯ ಆಸ್ಟ್ರೇಲಿಯಾ ತಂಡವು 3–1ರಿಂದ ಜಯಿಸಿತು ಮತ್ತು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ಗೆ ಅರ್ಹತೆ ಪಡೆಯಿತು.

'ಪರ್ತ್, ಅಡಿಲೇಡ್ ಓವಲ್, ಗಾಬಾ ಮತ್ತು ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣಗಳಲ್ಲಿ ಮೊದಲ ನಾಲ್ಕು ಪಂದ್ಯಗಳು ನಡೆದಿದ್ದವು. ಈ ತಾಣಗಳನ್ನು ಅತ್ಯುತ್ತಮ ಎಂದು ಶ್ರೇಯಾಂಕ ನೀಡಲಾಗಿದೆ. ಕೊನೆ ಪಂದ್ಯದ ಆಯೋಜನೆಯಾಗಿದ್ದ ಸಿಡ್ನಿ ಕ್ರಿಕೆಟ್ ಮೈದಾನದ ಪಿಚ್ ತೃಪ್ತಿಕರವಾಗಿತ್ತು' ಎಂದು ಐಸಿಸಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಐಸಿಸಿ ರ‍್ಯಾಂಕಿಂಗ್: ಅಗ್ರಸ್ಥಾನದಲ್ಲಿ ಮುಂದುವರಿದ ಜಸ್‌ಪ್ರೀತ್

ದುಬೈ (ಪಿಟಿಐ): ಭಾರತದ ಮುಂಚೂಣಿ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಜೀವನಶ್ರೇಷ್ಠ 908 ರೇಟಿಂಗ್‌ನೊಡನೆ ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನ ಬೌಲರ್‌ಗಳ ವಿಭಾಗದಲ್ಲಿ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ಬುಧವಾರ ತಾಜಾ ರ‍್ಯಾಂಕಿಂಗ್ ಪಟ್ಟಿ ಪ್ರಕಟಗೊಂಡಿದೆ.

ಬೂಮ್ರಾ ಈ ಹಿಂದಿನ ರ‍್ಯಾಂಕಿಂಗ್‌ಪಟ್ಟಿಯಲ್ಲಿ (907 ರೇಟಿಂಗ್ ಪಾಯಿಂಟ್ಸ್) ಭಾರತೀಯನೊಬ್ಬನ ಗರಿಷ್ಠ ಪಾಯಿಟ್ಸ್ ದಾಖಲೆ ಸ್ಥಾಪಿಸಿದ್ದರು. ಸಿಡ್ನಿಯಲ್ಲಿ ನಡೆದ ಕೊನೆಯ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಅವರು ಎರಡು ವಿಕೆಟ್ ಪಡೆದಿದ್ದರು. ಆದರೆ ಎರಡನೇ ಇನಿಂಗ್ಸ್‌ನಲ್ಲಿ ಬೆನ್ನು ನೋವಿನ ಕಾರಣ ಬೌಲಿಂಗ್ ಮಾಡಿರಲಿಲ್ಲ.

ಎಡಗೈ ಸ್ಪಿನ್ ಬೌಲರ್ ರವೀಂದ್ರ ಜಡೇಜಾ ಅವರು ಬೂಮ್ರಾ ಜೊತೆ ಅಗ್ರ–10ರಲ್ಲಿ ಸ್ಥಾನ ಪಡೆದ ಭಾರತದ ಮತ್ತೊಬ್ಬ ಬೌಲರ್ ಎನಿಸಿದ್ದಾರೆ. ಅವರು ಆಸ್ಟ್ರೇಲಿಯಾದ ಪೇಸ್ ಬೌಲರ್ ಸ್ಕಾಟ್ ಬೋಲ್ಯಾಂಡ್ ಜೊತೆ ಒಂಬತ್ತನೇ ಸ್ಥಾನ ಹಂಚಿಕೊಂಡಿದ್ದಾರೆ. ಬೋಲ್ಯಾಂಡ್ ಅವರು 29 ಸ್ಥಾನ ಬಡ್ತಿ ಪಡೆದು ಅಗ್ರ 10ರೊಳಗೆ ಲಗ್ಗೆಯಿಟ್ಟಿದ್ದಾರೆ.

ಬೋಲ್ಯಾಂಡ್, ಸಿಡ್ನಿ ಟೆಸ್ಟ್ ಪಂದ್ಯದಲ್ಲಿ 10 ವಿಕೆಟ್‌ಗಳನ್ನು (31ಕ್ಕೆ4, 45ಕ್ಕೆ6) ಪಡೆದು ಭಾರತ ತಂಡದ ಬ್ಯಾಟಿಂಗ್ ಕುಸಿತಕ್ಕೆ ಕಾರಣರಾಗಿದ್ದರು. ಆಸ್ಟ್ರೇಲಿಯಾ ನಾಯಕ ಪ್ಯಾಟ್ ಕಮಿನ್ಸ್ ಅವರೂ ಉತ್ತಮ ಪ್ರದರ್ಶನದೊಡನೆ ಎರಡನೇ ಸ್ಥಾನಕ್ಕೇರಿದ್ದಾರೆ. ಅಂತಿಮ ಟೆಸ್ಟ್‌ನಲ್ಲಿ ಅವರು ಐದು ವಿಕೆಟ್ ಪಡೆದಿದ್ದರು. ದಕ್ಷಿಣ ಆಫ್ರಿಕಾದ ಕಗಿಸೊ ರಬಾಡ ಮೂರನೇ ಸ್ಥಾನದಲ್ಲಿದ್ದಾರೆ.

9ನೇ ಸ್ಥಾನಕ್ಕೆ ಪಂತ್: ಕೊನೆಯ ಟೆಸ್ಟ್‌ನ ಎರಡನೇ ಇನಿಂಗ್ಸ್‌ನಲ್ಲಿ 33 ಎಸೆತಗಳಲ್ಲಿ ಮಿಂಚಿನ 61 ರನ್ ಗಳಿಸಿದ್ದ ವಿಕೆಟ್ ಕೀಪರ್ ರಿಷಭ್ ಪಂತ್ ಬ್ಯಾಟರ್‌ಗಳ ವಿಭಾಗದಲ್ಲಿ ಒಂಬತ್ತನೇ ಸ್ಥಾನಕ್ಕೇರಿದ್ದಾರೆ. ಯಶಸ್ವಿ ಜೈಸ್ವಾಲ್ ನಾಲ್ಕನೇ ಸ್ಥಾನ ರಕ್ಷಿಸಿಕೊಂಡಿದ್ದಾರೆ.

ಅಥ್ಲೀಟ್ಸ್ ಕಮಿಷನ್‌ನಲ್ಲಿ ಆರು ಮಹಿಳೆಯರು

ಚಂಡೀಗಢ (ಪಿಟಿಐ): ಭಾರತದ ಮಾಜಿ ಲಾಂಗ್‌ಜಂಪ್ ತಾರೆ ಅಂಜು ಬಾಬಿ ಜಾರ್ಜ್ ಅವರು ಅಥ್ಲೆಟಿಕ್ ಫೆಡರೇಷನ್ ಆಫ್ ಇಂಡಿಯಾದ ಒಂಬತ್ತು ಸದಸ್ಯರ ಅಥ್ಲೀಟ್ಸ್ ಕಮಿಷನ್ ಮುಖ್ಯಸ್ಥರಾಗಿದ್ದಾರೆ. ಅವರೂ ಸೇರಿ ಮೊದಲ ಬಾರಿ ಆರು ಮಂದಿ ಮಹಿಳೆಯರು ಕಮಿಷನ್‌ನಲ್ಲಿ ಸ್ಥಾನ ಪಡೆದಿದ್ದಾರೆ.

ಜಾವೆಲಿನ್ ದಿಗ್ಗಜ ಹಾಗೂ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತ ನೀರಜ್ ಚೋಪ್ರಾ ಸೇರಿ ಮೂವರು ಪುರುಷ ಕ್ರೀಡಾಪಟುಗಳು ಇದರಲ್ಲಿ ಸ್ಥಾನ ಪಡೆದಿದ್ದಾರೆ. ಅವರು ಕಮಿಷನ್‌ಗೆ ನಾಮನಿರ್ದೇಶನಗೊಂಡ ನಾಲ್ವರಲ್ಲಿ ಒಳಗೊಂಡಿದ್ದಾರೆ.3000 ಮೀ. ಸ್ಟೀಪಲ್‌ಚೇಸರ್ ಅವಿನಾಶ್ ಸಾಬ್ಳೆ ಮತ್ತು ನೂತನ ಅಧ್ಯಕ್ಷ ಬಹಾದೂರ್ ಸಾಗೂ ಇತರ ಇಬ್ಬರು.

2003ರ ವಿಶ್ವ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತೆ ಅಂಜು ಬಾಬಿ ಎಎಫ್‌ಐ ಹಿರಿಯ ಉಪಾಧ್ಯಕ್ಷೆಯಾಗಿದ್ದಾರೆ. ಓಟಗಾರ್ತಿ ಜ್ಯೋತಿರ್ಮಯಿ ಸಿಕ್ದರ್, ಡಿಸ್ಕಸ್ ಥ್ರೋ ಪಟು ಕೃಷ್ಣಾ ಪೂನಿಯಾ, ಹರ್ಡಲ್ಸ್ ಓಟಗಾರ್ತಿ ಎಂ.ಡಿ.ವಲ್ಸಮ್ಮ, ಸ್ಟೀಪಲ್ ಚೇಸರ್ ಸುಧಾ ಸಿಂಗ್, ದೂರ ಅಂತರದ ಓಟಗಾರ್ತಿ ಸುನೀತಾ ರಾಣಿ ಅಥ್ಲೀಟ್ಸ್ ಕಮಿಷನ್‌ನಲ್ಲಿ ಇರುವ ಇತರ ಮಹಿಳೆಯರು.


ಅಂಜು ಬಾಬಿ

ಈ ಹಿಂದಿನ ಕಮಿಷನ್‌ನಲ್ಲಿ ನಾಲ್ವರು ಮಹಿಳೆಯರಿದ್ದರು.

ಕಮಿಷನ್‌ನಲ್ಲಿ ಸದಸ್ಯರಾಗಲು ನೀರಜ್ ಮತ್ತು ಸಾಬ್ಳೆ ಆರಂಭದಲ್ಲಿ ಹಿಂಜರಿದಿದ್ದರು. ತಾವು ಸಕ್ರಿಯ ಅಥ್ಲೀಟುಗಳಾಗಿದ್ದು, ಇದಕ್ಕೆ ಹೆಚ್ಚಿನ ಸಮಯ ನೀಡಲು ಸಾಧ್ಯವಾಗದು ಎಂದಿದ್ದರು. ಆದರೆ ಅಂತಿಮವಾಗಿ ಒಪ್ಪಿಕೊಂಡರು.

ಸುಮರಿವಾಲಾ ಪದನಿಮಿತ್ತ ಸದಸ್ಯ: ನಿರ್ಗಮಿತ ಅಧ್ಯಕ್ಷ ಅದಿಲ್ ಸುಮರಿವಾಲಾ ಅವರು ಪದನಿಮಿತ್ತ ಸದಸ್ಯರಾಗಿ ಕಾರ್ಯಕಾರಿ ಸಮಿತಿಯಲ್ಲಿ ಮುಂದುವರಿಯಲಿದ್ದಾರೆ. ಈ ಹಿಂದಿನ ಮೂರು ಅವಧಿಗೆ ಅಧ್ಯಕ್ಷರಾಗಿದ್ದ 67 ವರ್ಷದ ಅದಿಲ್ ವಿಶ್ವ ಅಥ್ಲೆಟಿಕ್ಸ್ ಕೌನ್ಸಿಲ್‌ನ ಭಾಗವಾಗಿದ್ದಾರೆ. ಸುಮರಿವಾಲಾ ಸಮಿತಿ ಅಧ್ಯಕ್ಷರೂ ಆಗಿರಲಿದ್ದು, ಸರ್ಕಾರ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಂಪರ್ಕ ಅಧಿಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಬಹಾದೂರ್ ಸಾಗೂ ಬುಧವಾರ ಪ್ರಕಟಿಸಿದರು.

ವೇಳಾಪಟ್ಟಿಯಲ್ಲಿ ಬದಲಾವಣೆ

ಭಾರತದ ಮೊದಲ ಪ್ರಮುಖ ದೇಶೀಯ ಸೀನಿಯರ್ ಚಾಂಪಿಯನ್‌ಷಿಪ್ ಆಗಿ ಫೆಡರೇಷನ್ ಕಪ್ ಏಪ್ರಿಲ್ 21 ರಿಂದ 24ರವರೆಗೆ ಕೇರಳದ ಕೋಯಿಕ್ಕೋಡ್‌ನಲ್ಲಿ ನಡೆಯಲಿದೆ.

ಈ ಹಿಂದೆ ಈ ಕೂಟ ಹರಿಯಾಣದ ಪಂಚಕುಲಾದಲ್ಲಿ ನಿಗದಿಯಾಗಿತ್ತು. ಆದರೆ ಕಳೆದ ಜೂನ್‌ನಲ್ಲಿ ರಾಷ್ಟ್ರೀಯ ಅಂತರ ರಾಜ್ಯ ಚಾಂಪಿಯನ್‌ಷಿಪ್ ನಡೆದ ಕಾರಣ ಅಲ್ಲಿನ ಸರ್ಕಾರ ಫೆಡರೇಷನ್ ಕಪ್ ನಡೆಸಲು ಅಸಹಾಯಕತೆ ವ್ಯಕ್ತಪಡಿಸಿತು. ಈ ಸಾಲಿನ ರಾಷ್ಟ್ರೀಯ ಅಂತರ ರಾಜ್ಯ ಸೀನಿಯರ್ ಚಾಂಪಿಯನ್‌ಷಿಪ್ ಆಗಸ್ಟ್ 20 ರಿಂದ 24ರವರೆಗೆ ಚೆನ್ನೈನಲ್ಲಿ ನಡೆಯಲಿದೆ. ರಾಷ್ಟ್ರೀಯ ಓಪನ್ ಚಾಂಪಿಯನ್‌ಷಿಪ್ ರಾಂಚಿಯಲ್ಲಿ ಸೆ. 27 ರಿಂದ 30ವರೆಗೆ ನಿಗದಿಯಾಗಿದೆ.